# ಕರ್ನಾಟಕ ವಿಕಾಸ
## Karnataka Vikas

ಮಾರ್ಚ್ 2021



**ನೂತನ ಗ್ರಾಮ ಪಂಚಾಯತಿ ಸದಸ್ಯರುಗಳಿಗೆ ಮಾನ್ಯ ಸಚಿವರಿಂದ ತರಬೇತಿ ಉದ್ಘಾಟನೆ**



**ಮಾನ್ಯ ಸಚಿವರಿಂದ ಶಿವಮೊಗ್ಗ ಜಿಲ್ಲೆಯ ನೂತನ ಗ್ರಾಮ ಪಂಚಾಯತಿ ಸದಸ್ಯರುಗಳಿಗೆ ಅಭಿನಂದನಾ ಸಮಾರಂಭ**



ಭೋಗಟಗೇರಿ ತಾಂಡಾದಲ್ಲಿ ಮಹಿಳಾ ಕಾಯಕೋತ್ಸವ



# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ


ಮಾರ್ಚ್ 2021
March 2021

ಸಂಪುಟ : 62
Volume : 62
ಸಂಚಿಕೆ : 4
Issue : 4


## ಈ ಸಂಚಿಕೆಯೊಳಗೆ


ಸಚಿವರಿಂದ ಸಂದೇಶ 5

ಸಚಿವಾಲಯ ಸಂದೇಶ 7

ಆಶಯ ನುಡಿ 8

ವರದಿ ಮತ್ತು ಲೇಖನಗಳು

- ಮುರಳಿ 11
- ಎಂ.ಕೆ.ಕೆಂಪೇಗೌಡ 13
- ಸುರೇಶ್ ಎಸ್. ಜಿ. 17
- ದಯಾನಂದ 20
- ಮಲ್ಲಿಕಾರ್ಜುನ್ 23
- ಕೆ. ಯಾಲಕ್ಕಿ ಗೌಡ 26
- ಕುಸುಮ ಹೆಚ್ ಎಸ್ 28
- ಸಿ. ಕೇಶವಮೂರ್ತಿ 30
- ಪ್ರಶಾಂತ ಹೆಚ್. ಮೇರವಾಡೆ 32

ಸುತ್ತೋಲೆ 37






ಪ್ರಕಾಶಕರು ಮತ್ತು ಪ್ರಧಾನ ಸಂಪಾದಕರು
**ಕುಮಾರ್ ಪಿ.**
ಉಪ ಕಾರ್ಯದರ್ಶಿ
ಕರ್ನಾಟಕ ಪಂ.ರಾಜ್ ಆಯುಕ್ತಾಲಯ

ಮುಖ್ಯ ಸಂಪಾದಕರು
**ಗಗನ್ ಎ.ಎಸ್**
ಉಪ ನಿರ್ದೇಶಕರು
ಕರ್ನಾಟಕ ಪಂ.ರಾಜ್ ಆಯುಕ್ತಾಲಯ

ಸಹಾಯಕ ಸಂಪಾದಕರು
**ಆಗ್ನೇಸ್ ಮೇರಿ**
ಕರ್ನಾಟಕ ಪಂ.ರಾಜ್ ಆಯುಕ್ತಾಲಯ



### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ. 100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಚೇರಿ ವಿಳಾಸ

ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
ಕೊಠಡಿ ಸಂಖ್ಯೆ 6, ಜಿಲ್ಲಾ ಪಂಚಾಯತಿ ಹಳೇ ಕಟ್ಟಡ,
ಕೆಂಪೇಗೌಡ ರಸ್ತೆ, ಗಾಂಧಿನಗರ,
ಬೆಂಗಳೂರು–560009
ದೂರವಾಣಿ ಸಂಖ್ಯೆ: 080–22353857

### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

www.rdpr.kar.nic.in ನಲ್ಲಿ ಪತ್ರಿಕೆಯು ಲಭ್ಯವಿರುತ್ತದೆ.

Email: karnataka-vikasa@gov.in
kvrdpr@gmail.com

# ಪತ್ರಿಕೆ ಕುರಿತು ನಿಮ್ಮ ನುಡಿ




ಫೆಬ್ರವರಿ 2021ರ ಕರ್ನಾಟಕ ವಿಕಾಸ ಸಂಚಿಕೆಯಲ್ಲಿ ಮಾನ್ಯ ಗೌರವಾನ್ವಿತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ತಮ್ಮ ಸಂದೇಶದಲ್ಲಿ

1) ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಜನೆ

2) ಗ್ರಾಮಗಳ ಸ್ವಚ್ಛತೆಗೆ ಬಚ್ಚಲುಗುಂಡಿ ಪರಿಹಾರ

3) ಉದ್ಯೋಗ ಖಾತ್ರಿ ಕಾಮಗಾರಿಗಳಿಗೆ ಅನುದಾನದ ಕೊರತೆ ಇಲ್ಲ ರಾಜ್ಯದ ಜನತೆಗೆ ಕಾರ್ಯಕ್ರಮ ರಚನಾತ್ಮಕವಾಗಿ ಅನುಷ್ಠಾನಿಸಲು ಕರೆ ನೀಡಿದ್ದಾರೆ. ಅಂತೆಯೇ ಮಾನ್ಯ ಶ್ರೀ ಎಲ್.ಕೆ. ಅತೀಕ್. ಪ್ರಧಾನ ಕಾರ್ಯದರ್ಶಿರವರು "ಜಲ ಜೀವನ್ ಮಿಷನ್" ಯೋಜನೆಯ ಮಹತ್ವ ವಿವರಿಸಿದ್ದಾರೆ. ಶ್ರೀಮತಿ ಉಮಾ ಮಹಾದೇವನ್ ಪ್ರಧಾನ ಕಾರ್ಯದರ್ಶಿ (ಪಂಚಾಯತ್ ರಾಜ್) ರವರು ನೂತನ ಚುನಾಯಿತ ಗ್ರಾಮ ಪಂಚಾಯತ್ ಸದಸ್ಯರಿಗೆರಾಜ್ಯದ 285 ಕೇಂದ್ರಗಳಲ್ಲಿ ಅಬ್ದುಲ್ ನಜೀರ್ ಸಾಬ್ ಸಂಸ್ಥೆಯ ವತಿಯಿಂದ 5 ದಿನಗಳ ಕಾಲ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡು ಅವರಿಗೆ ಹೆಚ್ಚಿನ ಅರಿವು ಮೂಡಿಸುವ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಿರುವುದು ಸ್ವಾಗತಾರ್ಹ.

**ಡಾ॥ ಎನ್.ಕೃಷ್ಣಪ್ಪಕೋಡಿಪಾಳ್ಯ**
**ವಿಶ್ರಾಂತ ನಿರ್ದೇಶಕರು (ಗ್ರಾ.ಮೂ.ಸೌ)**
**ಬೆಂಗಳೂರು**

2021ನೇ ಫೆಬ್ರವರಿ ಮಾಹೆಯ ಕ.ವಿ.ಮಾಸ ಪತ್ರಿಕೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್‌ನ ವಿವಿಧ ಕಾರ್ಯಕ್ರಮಗಳ ಮತ್ತು ಇಲಾಖೆಯ ಮಾಹಿತಿಯನ್ನು ಹಾಗೂ ಗ್ರಾಮೀಣಾ ಭಾಗದಲ್ಲಿನ ಜೀತಪದ್ಧತಿ, ದೇವದಾಸಿ ಪದ್ಧತಿಗಳ ನಿವಾರಣ ಕ್ರಮಗಳನ್ನು ಸ್ಪಷ್ಟವಾಗಿ ಬಿಂಬಿಸಿದೆ. ಜೀತಪದ್ದತಿ ಮತ್ತು ದೇವದಾಸಿ ಪದ್ಧತಿಗಳಿಂದ ಸಂಕಷ್ಟಕ್ಕಿಡಾದವರಿಗೆ ಕಾನೂನಾತ್ಮಕವಾಗಿ ಮಾರ್ಗೋಪಾಯಗಳನ್ನು ತಿಳಿಸಿ, ಅವರನ್ನು ನೈತಿಕವಾಗಿ ಹಾಗೂ ಆರ್ಥಿಕವಾಗಿ ಸದೃಡರನ್ನಾಗಿಸಲು ಅವರ ಸಹಾಯಕ್ಕೆ ವಿನೂತವಾಗಿ ಕಾರ್ಯೋನ್ಮುಖವಾಗಿರುವುದು, ಸಮಾಜ ಒಳಲಿತಿಗೆ ಹಿಡಿದಕೈಗನ್ನಡಿಯಾಗಿದೆ. ಇಂತಹ ಕಾರ್ಯಗಳು ಇಲಾಖೆಯಿಂದ ಇನ್ನಷ್ಟು ವೃದ್ದಿಸಲೆಂದು ಬಯಸುತ್ತೇನೆ. ನರೇಗಾ ಯೋಜನೆಯಡಿಯಲ್ಲಿ ಗ್ರಾಮೀಣಾ ಭಾಗದ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಿ, ಇಂದಿನ ಪೋಷಕರನ್ನು ಸರ್ಕಾರಿ ಶಾಲೆಗಳತ್ತ ಆಕರ್ಷಿಸಿ ಮತ್ತು ಮಕ್ಕಳು ಉತ್ಸಾಹಿತರಾಗಿ ಸರ್ಕಾರಿ ಶಾಲೆಗಳಿಗೆ ದಾಖಲಾಗಿರುವುದು ಸಂತಸ ತಂದಿದೆ. ನರೇಗಾ ಯೋಜನೆಯಡಿ ಹೊಸರೂಪ ಪಡೆದ ಬಟ್ಟಹಳ್ಳಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಚಿತ್ರಣ ಸೊಗಸಾಗಿದೆ. ಇದಲ್ಲದೆ ಹೊಸದಾಗಿ ಚುನಾಯಿತರಾದ ಗ್ರಾ.ಪಂ.ಜನಪ್ರತಿನಿಧಿಗಳಿಗೆ ತರಬೇತಿ ಕಾರ್ಯಗಾರ ಆರಂಭಿಸಿ ಗ್ರಾ.ಪಂ.ಗಳ ವ್ಯಾಪ್ತಿ, ಕಾರ್ಯ ಹಾಗೂ ಸಮಾಜದ ಏಳಿಗೆಗೆ ಗ್ರಾ.ಪಂ.ಗಳ ಪಾತ್ರದ ಬಗ್ಗೆ ತಿಳಿಸಿ, ಎಲ್ಲಾ ಪ್ರಜೆಗಳು ಆರ್ಥಿಕವಾಗಿ ಸದೃಡ ಗೊಳಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಪಡುವಂತೆ ತಿಳಿಸಿ ದೇಶದ ಅಭಿವೃದ್ಧಿಗೆ ಪೂರಕವಾಗಲು ಜನಪ್ರತಿನಿಧಿಗಳಿಗೆ ಈ ಕಾರ್ಯಗಾರವು ಒಂದು ಉತ್ತಮ ವೇದಿಕೆಯಾಗಿದೆ. ಇನ್ನೂ ಅನೇಕ ರೀತಿಗಳಲ್ಲಿ ಮಾಹಿತಿ ಒದಗಿಸಿ ಕ.ವಿ.ಮಾಸಪತ್ರಿಕೆಯು ಓದುಗರಲ್ಲಿ ಆಸಕ್ತಿ ಮೂಡಿಸುತ್ತಿದೆ. ಪತ್ರಿಕೆಯಲ್ಲಿ ಕೆಲಸ ಮಾಡುವ ಎಲ್ಲಾ ಸಿಬ್ಬಂದಿಗಳಿಗೆ ಹಾಗೂ ಸಂಪಾದಕರಿಗೂ ಆತ್ಮೀಯ ಧನ್ಯವಾದಗಳನ್ನು ತಿಳಿಸುತ್ತೇನೆ.

**ರವಿ**
**ಬೆಳಗಾವಿ**

ಕರ್ನಾಟಕ ಸರ್ಕಾರ



ಶ್ರೀ ಕೆ.ಎಸ್.ಈಶ್ವರಪ್ಪ

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

# ಸಚಿವರ ಸಂದೇಶ

## ನನ್ನ ನೆಚ್ಚಿನ ಎಲ್ಲಾ ಗ್ರಾಮ ಪಂಚಾಯಿತಿ ಜನಪ್ರತಿನಿಧಿಗಳಿಗೆ ಹಾರ್ದಿಕ ಶುಭಾಶಯಗಳು

ಗ್ರಾಮೀಣ ಭಾಗದಿಂದ ಪ್ರಮುಖ ಜನನಾಯಕರಾಗಿ, ಸಂವಿಧಾನಾತ್ಮಕವಾಗಿ ಅಸ್ತಿತ್ವದಲ್ಲಿರುವ ಸ್ಥಳೀಯ ಸರ್ಕಾರದ ಜನಪ್ರತಿನಿಧಿಗಳಾಗಿ ಹೊರಹೊಮ್ಮಿರುವ ಎಲ್ಲರಿಗೂ ಅಭಿನಂದನೆಗಳು. ಗ್ರಾಮ ಪಂಚಾಯಿತಿಗಳು ಸ್ಥಳೀಯಾಡಳಿತಗಳಾಗಿ, ಜನಸ್ನೇಹಿ ಆಡಳಿತ ನೀಡುವಲ್ಲಿ ಸರ್ಕಾರದೊಂದಿಗೆ ನಿಮ್ಮೆಲ್ಲರ ಸಹಕಾರ ಅಗತ್ಯ ಇದೆ. 'ಅಭಿವೃದ್ಧಿ' ಪ್ರಕ್ರಿಯೆಯಲ್ಲಿ ಎಲ್ಲರನ್ನೂ ಒಳಗೊಳ್ಳುವ ಮಹತ್ತರ ಹೊಣೆಗಾರಿಕೆ ಇದೆ. ಗ್ರಾಮ ಪಂಚಾಯಿತಿಗಳು, ಸ್ಥಳೀಯಾಡಳಿತ ಸ್ವತಂತ್ರ ಸರ್ಕಾರಗಳಾಗಿ, ಸರಿಯಾಗಿ ಯೋಜಿಸುವ, ನಿರ್ಧಾರಗಳನ್ನು ತೆಗೆದುಕೊಳ್ಳುವ, ಅನುಷ್ಠಾನ ಪ್ರಕ್ರಿಯೆಗಳನ್ನು ಪರಿಣಾಮಕಾರಿಯಾಗಿಸುವ ನಿಟ್ಟಿನಲ್ಲಿ ಎಲ್ಲಾ ಭಾಗೀದಾರರನ್ನು ಪಾಲ್ಗೊಳ್ಳುವಂತೆ ಮಾಡಬೇಕಾಗಿದೆ.

73ನೇ ಸಂವಿಧಾನದ ತಿದ್ದುಪಡಿಯನ್ವಯ 2020-21ನೇ ಸಾಲಿನಲ್ಲಿ 5762 ಗ್ರಾಮ ಪಂಚಾಯತಿಗಳಿಂದ ನೂತನವಾಗಿ ಆಯ್ಕೆಯಾಗಿರುವ ಚುನಾಯಿತ ಪ್ರತಿನಿಧಿಗಳಿಗೆ ಸಾಮರ್ಥ್ಯಾಭಿವೃದ್ಧಿ ಮುಖಾ ಮುಖಿ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯದಾದ್ಯಂತ ಆಯೋಜಿಸುವ ಸಂಪೂರ್ಣ ಜವಾಬ್ದಾರಿಯನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆಗೆ ನೀಡಲಾಗಿರುತ್ತದೆ.

ಈ ತರಬೇತಿಯನ್ನು ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದವರ "ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ"ದ ಯೋಜನೆಯಡಿ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಆಯೋಜಿಸಲಾಗುತ್ತಿದೆ. ಈ ತರಬೇತಿಗಾಗಿ ಅಂದಾಜು ವೆಚ್ಚ 23.80 ಕೋಟಿಗಳಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರ 60:40ರ ಅನುಪಾತದಲ್ಲಿ ಭರಿಸುತ್ತಿವೆ.

ಈ ಬಾರಿಯ ತರಬೇತಿಯ ವಿಶೇಷತೆ ಎಂದರೆ ಐದು ದಿನಗಳ ವಸತಿ ರಹಿತ ತರಬೇತಿಯಾಗಿರುತ್ತದೆ. ತರಬೇತಿಯ ಕೇಂದ್ರಗಳನ್ನು ನವೀನ ರೀತಿಯಲ್ಲಿ ಅತ್ಯಂತ ಸುವ್ಯವಸ್ಥಿತವಾಗಿ ತಾಂತ್ರಿಕತೆ ಬಳಸಿಕೊಂಡು ಏಕಕಾಲದಲ್ಲಿ 176 ತಾಲ್ಲೂಕು ಮಟ್ಟದಲ್ಲಿ 285 ಕೇಂದ್ರಗಳಲ್ಲಿ ಆಯೋಜಿಸಲಾಗುತ್ತಿದೆ. ತರಬೇತಿಯನ್ನು ಸುಮಾರು ಹತ್ತು ತಂಡಗಳಲ್ಲಿ ಆಯೋಜಿಸಲಾಗುತ್ತಿದೆ.

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ 90,729 (ಅವಿರೋಧವಾಗಿ ಆಯ್ಕೆಯಾಗಿರುವ 8153 ಸದಸ್ಯರು ಸೇರಿದಂತೆ) ಸದಸ್ಯರುಗಳು ತರಬೇತಿಯಲ್ಲಿ ಭಾಗವಹಿಸುತ್ತಿದ್ದು, 285 ತರಬೇತಿ ಕೇಂದ್ರಗಳ ಮುಖೇನ ತಾಲ್ಲೂಕು ಹಂತದಲ್ಲಿ ಹತ್ತು ತಂಡಗಳಲ್ಲಿ ತರಬೇತಿ ನೀಡುತ್ತಿದೆ.

ಈ ಐದು ದಿನಗಳ ತರಬೇತಿ ಅವಧಿಯಲ್ಲಿ ಗ್ರಾಮ ಪಂಚಾಯತಿಯ ರಚನೆ ಮತ್ತು ಸ್ವರೂಪ, ಪ್ರಕಾರ್ಯಗಳು, ಸದಸ್ಯರುಗಳ ಕರ್ತವ್ಯ ಮತ್ತು ಹೊಣೆಗಾರಿಕೆಗಳು, ವಿವಿಧ ಸಭೆಗಳು, ವಾರ್ಡ್ ಮತ್ತು ಗ್ರಾಮ ಸಭೆಗಳ ನಿರ್ವಹಣೆ, ಹಣಕಾಸು ಸಂಪನ್ಮೂಲ ಲಭ್ಯತೆ, ದೂರದೃಷ್ಟಿ ಮತ್ತು ಅಭಿವೃದ್ಧಿ ಯೋಜನೆಗಳ ರೂಪಿಸುವ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಲಾಗುತ್ತಿದೆ.

ಮುಂದಿನ ಐದು ವರ್ಷಗಳಲ್ಲಿ ನೂತನ ಸದಸ್ಯರುಗಳು ತಮ್ಮ ವ್ಯಾಪ್ತಿಯಲ್ಲಿ ಜನಸ್ನೇಹಿ ಕಾರ್ಯಗಳನ್ನು ಅನುಷ್ಠಾನಿಸುವ ಮೂಲಕ ಪರಿಣಾಮಕಾರಿ ಸ್ವಯಂ ಆಡಳಿತ ಘಟಕಗಳಾಗಿ ಹೊರಹೊಮ್ಮಲು ಪ್ರೇರೇಪಿಸಿದೆ. ತನ್ಮೂಲಕ ಸ್ಥಳೀಯ ಅಭಿವೃದ್ಧಿ ಹರಿಕಾರರಾಗಿ ಗ್ರಾಮೀಣಾಭಿವೃದ್ಧಿಯಲ್ಲಿ ಸುಧಾರಣೆಯನ್ನು ತರುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವಂತೆ ಸಜ್ಜುಗೊಳಿಸಲಾಗುತ್ತಿದೆ.

2020–21ನೇ ಸಾಲಿನ ತರಬೇತಿಯ ವಿನೂತನತೆ ಎಂದರೆ ಸದರಿ ಐದು ದಿನಗಳ ತರಬೇತಿಯ ತರುವಾಯ ಸಂಸ್ಥೆಯ ವತಿಯಿಂದ ತಿಂಗಳ ಮೊದಲ ಹಾಗೂ ಮೂರನೆಯ ಶನಿವಾರ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಸಮಗ್ರವಾಗಿ ಉಪಗ್ರಹ ಆಧಾರಿತ ತರಬೇತಿ ಮುಖಾಂತರ ಮಾಹಿತಿ ವಿನಿಮಯದ ಕುರಿತು ಪ್ರಸ್ತಾಪಿಸಿ ಆ ಮೂಲಕ ಪಂಚಾಯತಿಗಳ ಬಲವರ್ಧನೆಗೆ ಶ್ರಮವಹಿಸುವುದು.

ಮುಂದಿನ ಎರಡು ವರ್ಷಗಳಲ್ಲಿ ಗ್ರಾಮ ಪಂಚಾಯತಿ ಚುನಾಯಿತ ಸದಸ್ಯರುಗಳಿಗೆ ನಿರಂತರವಾಗಿ ತರಬೇತಿಯನ್ನು ಆಯೋಜಿಸುವುದರ ಮೂಲಕ ಸ್ಪಂದನಾಶೀಲ ಆಡಳಿತಕ್ಕೆ ಭಾಷ್ಯವನ್ನು ಬರೆಯುವುದರ ಮೂಲಕ ಕರ್ನಾಟಕ ರಾಜ್ಯದ ಪಂಚಾಯತ್ ರಾಜ್ಯ ವ್ಯವಸ್ಥೆಯ ಬೇರನ್ನು ಮತ್ತಷ್ಟು ಗಟ್ಟಿಗೊಳಿಸುವಲ್ಲಿ ನಿರಂತರವಾಗಿ ಕಾರ್ಯೋನ್ಮುಖವಾಗುವುದರ ಮೂಲಕ ರಾಷ್ಟ್ರದ ಇತರೆ ರಾಜ್ಯಗಳಿಗೆ ಮಾದರಿಯಾಗುವುದಾಗಿ ಆಶಿಸಿದೆ.

ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಲಭ್ಯವಾಗುವ ಅನುದಾನ ಮತ್ತು ಯೋಜನೆಗಳನ್ನು ಸಮರ್ಪಕ ರೀತಿಯಲ್ಲಿ ವಿನಿಯೋಗಿಸಬೇಕಾಗಿದೆ. ಗ್ರಾಮ ಮಟ್ಟದಲ್ಲಿ ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆಗೆ ಗಮನಹರಿಸಬೇಕಾಗಿದೆ. ಗ್ರಾಮೀಣ ಜನತೆಗೆ ದೈನಂದಿನ ಸೇವೆಗಳಾದ ನೀರು, ಬೆಳಕು, ಆರೋಗ್ಯ, ಶಿಕ್ಷಣ, ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆ, ಸಾರಿಗೆ ಸಂಪರ್ಕ ವ್ಯವಸ್ಥೆಗಳನ್ನು ಉತ್ತಮಪಡಿಸುವಿಕೆ, ಸ್ಥಳೀಯವಾಗಿ ವಿವಿಧ ಸ್ತರದ ಕೌಶಲಗಳನ್ನು ವೃದ್ಧಿಸುವ ಹಾಗೂ ಗುಡಿ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಸಂಕಲ್ಪ ಮಾಡಬೇಕಾಗಿದೆ. ಉತ್ತಮ ನಾಯಕತ್ವ ರೂಢಿಸಿಕೊಳ್ಳಲು ಇರುವ ಅವಕಾಶವನ್ನು ಬಳಸಿಕೊಳ್ಳಬೇಕಾಗಿದೆ.

ಗ್ರಾಮಸಭೆಗಳನ್ನು ಆಯೋಜಿಸಿ, ದುರ್ಬಲ ವರ್ಗದವರನ್ನು ಗುರುತಿಸಿ, ಫಲಾನುಭವಿ ಆಯ್ಕೆ ಮತ್ತು ಚಟುವಟಿಕೆಗಳನ್ನು ನಿಯಮಾನುಸಾರ ನಡೆಸಬೇಕಾಗಿದೆ. ಪಂಚಾಯಿತಿಯ ವ್ಯವಹರಣೆಗಳಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ, ಸ್ಥಳೀಯ ಹಂತದ ಲೋಪಗಳನ್ನು ಸರಿಪಡಿಸಿಕೊಳ್ಳುವುದೂ ಮುಖ್ಯವಾಗಿರುತ್ತದೆ. ಸ್ಥಳೀಯ ಸಂಪನ್ಮೂಲಗಳು ಮತ್ತು ಉತ್ಪಾದನೆಗಳ ಬಳಕೆಗೆ ಆದ್ಯತೆ ನೀಡಬೇಕಾಗಿದೆ. ಸ್ಥಳೀಯ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಕಲ್ಪಿಸಬೇಕಾಗಿದೆ. ಸ್ಥಳೀಯ ಯುವಜನರಿಗೆ, ಕೌಶಲ್ಯವೃದ್ಧಿ ಕಾರ್ಯಕ್ರಮಗಳಿಗೆ ಜೋಡಣೆ ಮಾಡಬೇಕಾಗಿದೆ.

ದೂರದೃಷ್ಟಿ ಯೋಜನೆಗಳನ್ನು ವೈಜ್ಞಾನಿಕ ರೀತಿಯಲ್ಲಿ ಮತ್ತು ಸಹಭಾಗಿತ್ವ ಸಾಧನಗಳ ಮೂಲಕ ಸಮಗ್ರವಾಗಿ, ಉತ್ಕೃಷ್ಟ ರೀತಿಯಲ್ಲಿ ಸಿದ್ಧಪಡಿಸಬೇಕು. ಯೋಜನೆಯ ಸರಿಯಾದ ಅನುಷ್ಠಾನವನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಿ ಮೂಲ ಆಶಯಗಳ ಸಾಕಾರಗೊಳಿಸಲು ಪ್ರಯತ್ನಗಳು ಬೇಕಾಗಿದೆ. ಎಲ್ಲಾ ಭಾಗೀದಾರರಲ್ಲಿ ಅರಿವು ಮೂಡಿಸುವ ಮತ್ತು ಸ್ಥಳೀಯಾಡಳಿತದೊಂದಿಗೆ ನಂಬಿಕೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕಿದೆ.

ತರಬೇತಿಗಳಲ್ಲಿ ಪೂರ್ಣಪ್ರಮಾಣದಲ್ಲಿ ಎಲ್ಲರೂ ಭಾಗವಹಿಸಬೇಕು. ತರಬೇತಿಯಲ್ಲಿನ ಎಲ್ಲ ವಿಷಯಗಳನ್ನು ತಿಳಿದುಕೊಳ್ಳಬೇಕು. ತಿಳಿಯದ ಸಂಗತಿಗಳನ್ನು ಪ್ರಶ್ನಿಸಿ ತಿಳಿಯಬೇಕು. ಗ್ರಾಮ ಪಂಚಾಯಿತಿಯಲ್ಲಿ ಸಭೆಗಳನ್ನು ನಡೆಸಲು, ವಿವಿಧ ಹಂತದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಇರುವ ನೀತಿ–ನಿಯಮಗಳನ್ನು ಅರಿತುಕೊಳ್ಳಬೇಕು.

ಎಲ್ಲರಿಗೂ ಶುಭವಾಗಲಿ

**ಕೆ.ಎಸ್.ಈಶ್ವರಪ್ಪ**
**ಮಾನ್ಯ ಸಚಿವರು**
**ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ**

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ
ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

# ಸಚಿವಾಲಯದಿಂದ ಸಂದೇಶ



**ಎಲ್.ಕೆ.ಅತೀಕ್**
ಭಾ.ಆ.ಸೇ.
**ಸರ್ಕಾರದ ಪ್ರಧಾನ ಕಾರ್ಯದರ್ಶಿ**

**ಪ್ರಿಯ ಬಂಧುಗಳೇ,**

## ನೂತನವಾಗಿ ಆಯ್ಕೆಯಾಗಿರುವ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳಿಗೆ ಶುಭಾಶಯಗಳು...

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ, ಮೈಸೂರು ಇವರ ವತಿಯಿಂದ ನೂತನವಾಗಿ ಆಯ್ಕೆಯಾಗಿರುವ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ ಕಾರ್ಯಕ್ರಮವನ್ನು ದಿನಾಂಕ:16.02.2021ರಂದು ಏರ್ಪಡಿಸಿದ್ದು, ಇಲಾಖೆಯ ಮಾನ್ಯ ಸಚಿವರಾದ ಸನ್ಮಾನ್ಯ ಶ್ರೀ ಕೆ.ಎಸ್. ಈಶ್ವರಪ್ಪ ರವರು ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)ಗಳಾದ ಶ್ರೀಮತಿ ಉಮಾ ಮಹದೇವನ್, ಪಂ.ರಾಜ್ ಆಯುಕ್ತಾಲಯದ ಆಯುಕ್ತರಾದ ಶ್ರೀಮತಿ ಪ್ರಿಯಾಂಕ ಮೇರಿ ಫ್ರಾನ್ಸಿಸ್, ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ.ಶಿಲ್ಪಾ ನಾಗ್, ನರೇಗಾ ಆಯುಕ್ತರಾದ ಶ್ರೀ.ಅನಿರುದ್ ಶ್ರವಣ್ ಹಾಗೂ ನೂತನವಾಗಿ ಆಯ್ಕೆಯಾದ ಗ್ರಾಮ ಪಂಚಾಯತಿ ಸದಸ್ಯರು ಮತ್ತು ಇಲಾಖೆಯ ಅಧಿಕಾರಿಗಳು ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಐದು ದಿನದ ತರಬೇತಿ ಕಾರ್ಯಕ್ರಮವನ್ನು ಇಡೀ ರಾಜ್ಯದಲ್ಲಿ ಹಮ್ಮಿಕೊಳ್ಳಲಾಗಿದ್ದು, 73ನೇ ತಿದ್ದುಪಡಿಯಾದ ನಂತರ ಪಂಚಾಯತ್ ರಾಜ್ ವ್ಯವಸ್ಥೆ ನಮ್ಮ ದೇಶದಲ್ಲಿ ಬಂದಿದೆ. ದೇಶದಲ್ಲಿ ಅತ್ಯಂತ ಮುಂಚೂಣಿಯಲ್ಲಿರುವ ರಾಜ್ಯ ಕರ್ನಾಟಕವಾಗಿರುತ್ತದೆ. ವಿಕೇಂದ್ರಿಕೃತ ವ್ಯವಸ್ಥೆಯ ಮೂರು ಸ್ಥರಗಳಾದ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿಗಳ ಪೈಕಿ ಅತ್ಯಂತ ಮಹತ್ವವಾದ ಸ್ಥರ ಗ್ರಾಮ ಪಂಚಾಯತಿಯದ್ದು. ಗ್ರಾಮ ಪಂಚಾಯತಿ ಎಂದರೆ ಗ್ರಾಮ ಸರ್ಕಾರ. ಇಂದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳನ್ನು ಬಿಟ್ಟರೆ ತೆರಿಗೆ ವಿಧಿಸುವಂತಹ ಮತ್ತು ಆದಾಯವನ್ನು ಹೆಚ್ಚಿಸುವಂತಹ ಸಂಸ್ಥೆ ಅಂದರೆ ಅದು ಗ್ರಾಮ ಪಂಚಾಯತಿ. ಗ್ರಾಮಕ್ಕೆ ಸಂಬಂದಪಟ್ಟಂತಹ ಗ್ರಾಮದ ಸಮಸ್ಯೆಗಳಿಗೆ ನೇರವಾಗಿ ಗ್ರಾಮ ಮಟ್ಟದಲ್ಲಿಯೇ ಪರಿಹಾರ ಪಡೆದುಕೊಳ್ಳುವಂತಹ ಅವಕಾಶವಿದೆ, ಇದು ಗ್ರಾಮ ಪಂಚಾಯತಿಯಲ್ಲಿ ನೂತನವಾಗಿ ಆಯ್ಕೆಯಾಗಿರುವಂತ ಸದಸ್ಯರುಗಳಿಗೆ ಸಿಕ್ಕಿರುವಂತಹ ಮಹತ್ವವಾದ ಜವಾಬ್ದಾರಿಯಾಗಿದೆ.

15ನೇ ಹಣಕಾಸು ಯೋಜನೆಯಡಿಯಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ 30 ರಿಂದ 35 ಲಕ್ಷ ಅನುದಾನ ಲಭ್ಯವಿದೆ. ಅತ್ಯಂತ ಬೇಡಿಕೆಯ ಕಾರ್ಯಕ್ರಮವಾದ ಎಂ.ಜಿ.ಎನ್.ಆರ್.ಇ.ಜಿ.ಎ ಅಡಿಯಲ್ಲಿ ಗ್ರಾಮದಲ್ಲಿ

ಜಾಬ್ ಕಾರ್ಡ್ ಹೊಂದಿರುವ ಕೂಲಿ ಕಾರ್ಮಿಕರು 100 ದಿನಗಳ ಉದ್ಯೋಗ ಪಡೆಯಬಹುದು. ಇದರಿಂದ ಗ್ರಾಮಾಂತರ ಮಟ್ಟದಲ್ಲಿ ಗ್ರಾಮೀಣ ಆಸ್ತಿಗಳನ್ನು ಸೃಜನೆ ಮಾಡುವಂತಹ ಅವಕಾಶ ಲಭ್ಯವಾಗುತ್ತದೆ. ಸ್ವಚ್ಛ ಭಾರತ ಅಭಿಯಾದಲ್ಲಿ ಕಸ ವಿಲೇವಾರಿಗೆ ಘಟಕ ನಿರ್ಮಾಣ ಮಾಡಲು ಅನುದಾನ ಲಭ್ಯವಿದೆ.  ದ್ರವ ತ್ಯಾಜ್ಯಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡುವುದಕ್ಕೆ ಅವಕಾಶವಿದೆ. ಜೊತೆಗೆ ಜಲ ಜೀವನ್ ಮಿಷನ್ ಅಡಿಯಲ್ಲಿ ಮನೆ ಮನೆಗೆ ಗಂಗೆ ಎಂಬ ಕಾರ್ಯಕ್ರಮದ ಮೂಲಕ ಪ್ರತಿಯೊಂದು ಮನೆಗೆ ಒಂದು ಕಾರ್ಯಾತ್ಮಕ ನಲ್ಲಿಯನ್ನು ನೀಡುವಂತಹ ವ್ಯವಸ್ಥೆ ಕೂಡ ಇದೆ. ಜೊತೆಗೆ ಗ್ರಾಮ ಪಂಚಾಯತಿಯಲ್ಲಿ ತೆರಿಯನ್ನು ವೃದ್ಧಿಸಿ ಬರುವಂತಹ 5 ಲಕ್ಷ, 10 ಲಕ್ಷ, 20 ಲಕ್ಷ ಆದಾಯದಲ್ಲಿ ಗ್ರಾಮದ ಅಭಿವೃದ್ಧಿ ಮಾಡಬಹುದು. ಇಂತಹ ಹಲವಾರು ಕಾರ್ಯಕಮಗಳ ಬಗ್ಗೆ ತರಬೇತಿಯಲ್ಲಿ ತಿಳಿಸಿಕೊಡಲಾಗುವುದು. ಗ್ರಾಮ ಪಂಚಾಯತಿಯಲ್ಲಿ ಕೆಲವೊಮ್ಮೆ ಉದ್ಭವಿಸುವ ಜಟಿಲ ಸಮಸ್ಯೆಗಳಿಗೆ ಎದೆಗುಂದದೆ ಪರಿಹಾರ ಕಂಡುಕೊಳ್ಳಬೇಕಾಗಿದೆ ಮತ್ತು ನೀತಿ ನಿಯಮಗಳ ಪ್ರಕಾರ ಸ್ಥಳೀಯ ಸರ್ಕಾರವನ್ನು ನಡೆಸಬೇಕಾಗುತ್ತದೆ.

ಗ್ರಾಮ ಪಂಚಾಯತಿ ಸದಸ್ಯರು ತಮ್ಮ ಸಂಬಂಧಿಗಳಿಗೆ ಕಾಂಟ್ರಾಕ್ಟ್ ನೀಡಿದಲ್ಲಿ, ತೀರ್ವವಾದ/ ಗಂಭೀರವಾದ ದುರ್ನಡತೆ ಇದ್ದಂತಹ ಸಂದರ್ಭದಲ್ಲಿ ಅವರ ಸದಸ್ಯತ್ವವನ್ನು ರದ್ದುಪಡಿಸಿರುವಂತಹ ಅಧಿಕಾರ ಸರ್ಕಾರಕ್ಕೆ ಇರುತ್ತದೆ. ಈ ಬಗ್ಗೆ ಪಿಡಿಒ ಮತ್ತು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಿಂದ ಮಾಹಿತಿ ಪಡೆಯಬೇಕು. ದುರ್ನಡನೆ, ಅವ್ಯವಹಾರಕ್ಕೆ, ಭ್ರಷ್ಟಾಚಾರಕ್ಕೆ ಅವಕಾಶ ಕೊಡಬಾರದು. ಅನೇಕ ಗ್ರಾಮ ಪಂ.ಗಳು ಅತ್ಯುತ್ತಮ ಕೆಲಸಗಳನ್ನು ಮಾಡಿವೆ. ಅನೇಕ ಸಮಸ್ಯೆಗಳನ್ನು ನಿಮ್ಮ ಮಟ್ಟದಲ್ಲಿ ಪರಿಹರಿಸಿಕೊಳ್ಳಲು ಸಾಧ್ಯವಿದೆ. ಆದುದರಿಂದ ಯೋಜನೆಗಳ ಬಗ್ಗೆ ಸರಿಯಾದ ಮಾಹಿತಿಯನ್ನು ತರಬೇತಿಯಲ್ಲಿ ಪಡೆದುಕೊಳ್ಳಬೇಕು. ಐದು ದಿನದ ತರಬೇತಿ ಅಲ್ಲದೆ ಪ್ರತಿ ತಿಂಗಳು ತರಬೇತಿಯನ್ನು ನೀಡುವುದರ ಜೊತೆಗೆ, ನೇರವಾಗಿ ಮತ್ತು ಸತತವಾಗಿ ಸಂಪರ್ಕದಲ್ಲಿರುತ್ತೇವೆ. ತಮ್ಮ 5 ವರ್ಷದ ಅಧಿಕಾರ ಅವಧಿಯಲ್ಲಿ ಕ್ರಿಯಾತ್ಮಕವಾಗಿ ಮತ್ತು ರಚನಾತ್ಮಕವಾಗಿ ತಮ್ಮ ತಮ್ಮ ಗ್ರಾಮ ಪಂಚಾಯತಿಯಲ್ಲಿ ತಾವು ಕೆಲಸ ಮಾಡುತ್ತೀರ ಹಾಗೂ ದೃಢ ನಿರ್ಧಾರ ತೆಗೆದುಕೊಂಡು ಮುಂದುವರೆಯುತ್ತೀರ ಎಂದು ಅಭಿಲಾಷಿಸುತ್ತೇನೆ.

**(ಎಲ್.ಕೆ.ಅತೀಕ್)**

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ
ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

# ಆಶಯ ನುಡಿ



**ಉಮಾ ಮಹದೇವನ್**
ಸರ್ಕಾರದ ಪ್ರಧಾನ ಕಾರ್ಯದರ್ಶಿ
(ಪಂ.ರಾಜ್.)

**ಸ್ನೇಹಿತರೆ,**

ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ 2021-22ನೇ ಸಾಲಿನ ಆಯವ್ಯಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಬಲಪಡಿಸಲು ಒತ್ತು ನೀಡಲಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆ ಮೂಲಕ ಹಲವಾರು ಮಹತ್ವದ ಯೋಜನೆಗಳ ಅನುಷ್ಠಾನಕ್ಕೆ ಅವಕಾಶ ಮಾಡಲಾಗಿದೆ. ವಿಶೇಷವಾಗಿ ಮಹಿಳೆಯರು ಹಾಗೂ ಮಕ್ಕಳ ಸಬಲೀಕರಣಕ್ಕಾಗಿ ಮಹಿಳಾ ಹಾಗೂ ಮಕ್ಕಳ ಆಯವ್ಯಯವನ್ನು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಳವಡಿಸಲು ತಿಳಿಸಲಾಗಿದೆ.

- ರಾಜ್ಯದ 6010 ಗ್ರಾಮ ಪಂಚಾಯತಿಗಳಲ್ಲಿ ಸಂಜೀವಿನಿ ಯೋಜನೆಯಡಿ ಮಹಿಳಾ ಉದ್ಯಮವನ್ನು ಪ್ರೋತ್ಸಾಹಿಸಲು ಮಹಿಳಾ ಸ್ವಸಹಾಯ ಸಂಘಗಳು ಕೇಟರಿಂಗ್, ಸ್ವಚ್ಚತಾ ಕಾರ್ಯ, ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ, ಘನ ತ್ಯಾಜ್ಯ ನಿರ್ವಹಣೆ, ಸ್ವಚ್ಛತೆ, ನಿರ್ಮಾಣ ಕಾರ್ಯ ಮತ್ತಿತರ ಕ್ಷೇತ್ರಗಳ ತಲಾ ಒಂದು ಅತೀ ಸಣ್ಣ ಉದ್ಯಮವನ್ನು ಸ್ಥಾಪಿಸಲು ತನ್ಮೂಲಕ 60000 ಮಹಿಳೆಯರಿಗೆ ಸ್ವಂತ ಉದ್ಯೋಗ ಕಲ್ಪಿಸಲು ಅವಕಾಶ ಮಾಡಲಾಗಿದೆ.

- ರಾಜ್ಯದ 226 ತಾಲ್ಲೂಕುಗಳಲ್ಲಿ ಪ್ರತಿ ತಾಲ್ಲೂಕಿನಲ್ಲಿ ಹಪ್ಪಳ, ಉಪ್ಪಿನಕಾಯಿ, ರೊಟ್ಟಿ, ಮಸಾಲೆ ಪುಡಿ ಮತ್ತಿತರ ಆಹಾರ ಪದಾರ್ಥಗಳನ್ನು ತಯಾರಿಸುವ, ಆಹಾರ ಸುರಕ್ಷತೆ, ಪ್ಯಾಕೇಜಿಂಗ್, ಬ್ರ್ಯಾಂಡಿಂಗ್, ರಸ್ತೆ ಬದಿ ಮಳಿಗೆಗಳ ಮತ್ತು ಆನ್‌ಲೈನ್ ಮೂಲಕ ಮಾರುಕಟ್ಟೆ ಸಂಪರ್ಕ ಕಲ್ಪಿಸುವ ಮೂಲಕ ತಾಲ್ಲೂಕಿಗೆ 10 ರಂತೆ 2260 ಕಿರು ಉದ್ದಿಮೆಗಳನ್ನು ಸ್ಥಾಪಿಸಲು ತನ್ಮೂಲಕ 25000 ಮಹಿಳೆಯರಿಗೆ ಸ್ವ ಉದ್ಯೋಗ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

- ಮಹಿಳೆಯರು ಸ್ವ ಉದ್ಯೋಗ ಕೈಗೊಂಡು ಉತ್ಪಾದಿಸುವ ಉತ್ಪನ್ನಗಳನ್ನು ಮಾರಾಟ ಮಾಡಲು ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ನಗರಗಳಲ್ಲಿ ಒಂದು ವಾರದ ಅವಧಿಗೆ ವಾರ್ಷಿಕ ಮಾರಾಟ ಮೇಳ ನಡೆಸಲು ತಿಳಿಸಲಾಗಿದೆ ಮತ್ತು ಮಹಿಳೆಯರ ಉತ್ಪನ್ನಗಳಿಗೆ ವ್ಯಾಪಕ ಪ್ರಚಾರ ನೀಡಿ ಮಾರಾಟಕ್ಕೆ ಉತ್ತಮ ಬೆಲೆ ಒದಗಿಸಲು ಇ-ಮಾರುಕಟ್ಟೆ ಸೌಲಭ್ಯ ಕಲ್ಪಿಸಲು ತಿಳಿಸಲಾಗಿದೆ. ಅಲ್ಲದೆ ರಾಜ್ಯದ ಎಲ್ಲಾ ಎಪಿಎಂಸಿ ಗಳಲ್ಲಿ ಶೇ.10 ರಷ್ಟು ಮಳಿಗೆಗಳನ್ನು ಮಹಿಳೆಯರಿಗೆ ಮೀಸಲಿಡಲು ಅವಕಾಶ ಮಾಡಲಾಗಿದೆ.

- ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸಂಜೀವಿನಿ ಯೋಜನೆಯ ಮಹಿಳಾ ಸ್ವಸಹಾಯಕ ಸಂಘಗಳಿಂದ ರಚಿತವಾದ ಒಕ್ಕೂಟದ ಮೂಲಕ ಘನ ತ್ಯಾಜ್ಯ ನಿರ್ವಹಣೆಯನ್ನು ಸಮಗ್ರವಾಗಿ ಹಾಗೂ ವೈಜ್ಞಾನಿಕವಾಗಿ ಮಾಡಲಾಗುವುದೆಂದು ತಿಳಿಸಲಾಗಿದೆ.

- ರಾಜ್ಯದ 5622 ಗ್ರಾಮೀಣ ಗ್ರಂಥಾಲಯಗಳನ್ನು ಗ್ರಾಮೀಣ ಮಾಹಿತಿ ಕೇಂದ್ರ ಹಾಗೂ ಜ್ಞಾನ ಕೇಂದ್ರಗಳನ್ನಾಗಿ ಉನ್ನತೀಕರಿಸಲು ತಿಳಿಸಲಾಗಿದೆ. ಪ್ರತಿ ತಾಲ್ಲೂಕಿಗೆ ಒಂದರಂತೆ ಬ್ರೈಲ್ ಹಾಗೂ ಶ್ರವ್ಯ ಪುಸ್ತಕಗಳನ್ನು ಒಳಗೊಂಡ ಬೀಕನ್ (Beacon) ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುವುದೆಂದು ಘೋಷಿಸಲಾಗಿದೆ.
- ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಮಾಹಿತಿ ವೀಕ್ಷಣೆಗಾಗಿ ಹಾಗೂ ಗ್ರಾಮ ಪಂಚಾಯತಿಗಳ ಆಡಳಿತ ನಿರ್ವಹಣೆಯನ್ನು ಸುಧಾರಿಸಲು ಸಂಯೋಜಿತ ಪಂಚತಂತ್ರ 2.0 ತಂತ್ರಾಂಶವನ್ನು ಪ್ರಚುರಪಡಿಸಿ ಮೊಬೈಲ್ ಅಪ್ಲಿಕೇಷನ್‌ಗಳನ್ನು ಅಭಿವೃದ್ಧಿಪಡಿಸಲಾಗುವುದೆಂದು ತಿಳಿಸಲಾಗಿದೆ.
- ಗ್ರಾಮೀಣ ಜನತೆಗೆ 55 ಎಲ್‌ಪಿಸಿಡಿ ಶುದ್ಧ ಕುಡಿಯುವ ನೀರನ್ನು ಒದಗಿಸುವ 'ಜಲಧಾರೆ' ಯೋಜನೆಯನ್ನು ಭಾರತ ಸರ್ಕಾರದ ಜಲ ಜೀವನ್ ಮಿಷನ್ ಅಡಿ 6201 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ತಿಳಿಸಲಾಗಿದೆ.
- ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆ 'ಜಲ ಜೀವನ್ ಮಿಷನ್' ಯೋಜನೆಯೊಂದಿಗೆ ಒಗ್ಗೂಡಿಸಿ ರಾಜ್ಯದ 21 ಲಕ್ಷ ಗ್ರಾಮೀಣ ಕುಟುಂಬಗಳಿಗೆ ಮನೆ ಮನೆಗೆ ಗಂಗೆ ಯೋಜನೆಯಡಿ 3172 ಕೋಟಿ ರೂ. ವೆಚ್ಚದಲ್ಲಿ 2022–23ನೇ ಸಾಲಿನೊಳಗೆ 55 ಎಲ್‌ಪಿಸಿಡಿ ಕುಡಿಯುವ ನೀರು ಒದಗಿಸಲು ತೀರ್ಮಾನ ಪ್ರಕಟಿಸಲಾಗಿದೆ.

ಗ್ರಾಮೀಣ ಪ್ರದೇಶಗಳ ಜನರ ಜೀವನಮಟ್ಟ ಸುಧಾರಿಸಲು ಸರ್ವರನ್ನು ಒಳಗೊಂಡ ಅಭಿವೃದ್ಧಿ ದೃಷ್ಟಿಕೋನವಿರಿಸಿಕೊಂಡು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳು ನಿಜವಾದ ಅರ್ಥದಲ್ಲಿ ಗ್ರಾಮ ಸ್ವರಾಜ್ ಘಟಕಗಳಲ್ಲಿ ಕಾರ್ಯನಿರ್ವಹಿಸಬೇಕೆಂಬ ಆಶಯವನ್ನು ಈ ಸಾಲಿನ ಆಯವ್ಯಯದಲ್ಲಿ ಕಾಣಬಹುದಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವ ಕಾರ್ಯಕ್ರಮಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅವಶ್ಯ ನೀತಿ ನಿರೂಪಣೆಗಳನ್ನು ಸರ್ಕಾರದ ವತಿಯಿಂದ ಹೊರಡಿಸಲಾಗುವುದು. ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸೇರಿ ಈ ಯೋಜನೆಗಳನ್ನು ಯಶಸ್ವಿಗೊಳಿಸಲು ಶ್ರಮಿಸಬೇಕೆಂದು ಕೋರುತ್ತೇನೆ.

**(ಉಮಾ ಮಹದೇವನ್)**

ವರದಿ




**ಮುರಳಿ**

ಸಂಶೋಧನಾ ಅಧಿಕಾರಿ,
ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರ


**ರಾಜ್ಯದಲ್ಲಿ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯಿದ್ದು, ನೈಜ ಅರ್ಥದಲ್ಲಿ ಜನರಿಂದ ಜನರಿಗಾಗಿ ಜನರಗೋಸ್ಕರ ಇರುವ ಆಡಳಿತ ವ್ಯವಸ್ಥೆಯಾಗಿ ಪಂಚಾಯತ್ ರಾಜ್ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದ ಮುಂಚೂಣಿ ರಾಜ್ಯ ಕರ್ನಾಟಕವಾಗಿದೆ.**

# ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ

“ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸಮನ್ವಯತೆಯನ್ನು ಕಾಪಾಡಿಕೊಳ್ಳುವ ಮೂಲಕ ಗಾಂಧೀಜಿಯವರ ಕನಸಿನ ರಾಮರಾಜ್ಯ ನಿರ್ಮಾಣ ಮಾಡಲು ಸಾಧ್ಯ” ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಾನ್ಯ ಸಚಿವರಾದ ಶ್ರೀ ಕೆ.ಎಸ್. ಈಶ್ವರಪ್ಪ ತಿಳಿಸಿದರು. ಅಬ್ದುಲ್ ನಜೀರ್ ಸಾಬ್ ಸಂಸ್ಥೆಯ ಮೂಲಕ ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರ ಬೆಂಗಳೂರಿನಲ್ಲಿ ಅಯೋಜಿಸಲಾಗಿದ್ದ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಸಚಿವರು ಗ್ರಾಮ ಪಂಚಾಯಿತಿಗಳಿಗೆ ನೂತನವಾಗಿ ಆಯ್ಕೆಯಾಗಿ ಬಂದಿರುವ ಗ್ರಾಮ ಪಂಚಾಯಿತಿ ಸದಸ್ಯರುಗಳಿಗೆ ಐದು ದಿನಗಳ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು 10 ತಂಡಗಳಲ್ಲಿ ರಾಜ್ಯದ 285 ತರಬೇತಿ ಕೇಂದ್ರಗಳಲ್ಲಿ ತರಬೇತಿ ನೀಡಲಾಗುತ್ತಿದ್ದು ಸುಮಾರು 90 ಸಾವಿರ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ.

ರೈತರು ಯಶಸ್ವಿಯಾದರೆ ಗ್ರಾಮಗಳು ಅಭಿವೃದ್ಧಿಯಾಗುತ್ತವೆ, ಗ್ರಾಮಗಳು ಅಭಿವೃದ್ಧಿ ಯಾದರೆ ದೇಶ ಅಭಿವೃದ್ಧಿಯಾಗುತ್ತದೆ ಅದ್ದರಿಂದ ಗ್ರಾಮಗಳ ಅಭಿವೃದ್ಧಿಯಲ್ಲಿ ಚುನಾಯಿತ ಸದಸ್ಯರ ಪಾತ್ರ ಮಹತ್ವದಾಗಿದೆ. ಈ ನಿಟ್ಟಿನಲ್ಲಿ ಗ್ರಾಮಗಳಲ್ಲಿ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ರಸ್ತೆ ನಿರ್ಮಾಣ, ಬೀದಿ ದೀಪ, ಶಿಕ್ಷಣ, ಸ್ವಚ್ಛತೆ ಹೆಚ್ಚಿನ ಒತ್ತನ್ನು ನೀಡಬೇಕಾಗಿದ್ದು ಜೊತೆಗೆ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಗ್ರಾಮೀಣಾ ಪ್ರದೇಶದ ಜನರಿಗೆ ತಲುಪಿಸುವ ಕೆಲಸ ಮಾಡಬೇಕಾಗಿದೆ ಎಂದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಎಲ್.ಕೆ.ಅತೀಕ್‌ರವರು ಮಾತನಾಡಿ, 73ನೇ ತಿದ್ದುಪಡಿಯನ್ವಯ 1993ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವನ್ನು ಜಾರಿಗೆ ತಂದಿದ್ದು, ಅದರಂತೆ ರಾಜ್ಯದಲ್ಲಿ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯಿದ್ದು, ನೈಜ ಅರ್ಥದಲ್ಲಿ ಜನರಿಂದ ಜನರಿಗಾಗಿ ಜನರಗೋಸ್ಕರ ಇರುವ ಆಡಳಿತ ವ್ಯವಸ್ಥೆಯಾಗಿ ಪಂಚಾಯತ್ ರಾಜ್ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದ ಮುಂಚೂಣಿ ರಾಜ್ಯ ಕರ್ನಾಟಕವಾಗಿದೆ. ಶ್ರೀಮತಿ ಉಮಾ ಮಹದೇವನ್, ಮಾನ್ಯ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ರವರು ಮಾತನಾಡಿ, ಗ್ರಾಮ ಪಂಚಾಯಿತಿಗಳು ಸ್ಥಳೀಯ ಸರ್ಕಾರಗಳಾಗಿ ಕೆಲಸ ಮಾಡಬೇಕಾಗಿದ್ದು, ಗ್ರಾಮೀಣಾ ಭಾಗದ ಜನರ ಅಭಿವೃದ್ಧಿ ಅದರಲ್ಲೂ ವಿಶೇಷವಾಗಿ ಮಹಿಳೆಯರು, ಮಕ್ಕಳು, ವಯೋವೃದ್ಧರು ಮತ್ತು ವಿಶೇಷ ಚೇತನರಿಗೆ ಮೂಲಭೂತ ಸೌಲಭ್ಯಗಳು ಸಿಗುವ ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ ಎಂದರು. ◆



# ಧಾರವಾಡ ನೂತನ ಗ್ರಾ.ಪಂ. ಸದಸ್ಯರಿಗೆ ತರಬೇತಿ

ತರಬೇತಿ ಉದ್ಘಾಟನೆಯನ್ನು ಧಾರವಾಡ ಜಿಲ್ಲಾ ಪಂಚಾಯತಿ ಯೋಜನಾಧಿಕಾರಿಗಳಾದ ಶ್ರೀ ಬಿ ಎಸ್ ಮೂಗನೂರಮಠ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಪ್ರಾದೇಶಿಕ ಕೇಂದ್ರ ಧಾರವಾಡ ಉಪನಿರ್ದೇಶಕರಾದ ಕುಮಾರಿ ಪವಿತ್ರ ಪಾಟೀಲ್ ಹಾಗೂ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಎಸ್ ಎಸ್ ಕಾದ್ರೊಳ್ಳಿ ನೂತನ ಸದಸ್ಯರಿಗೆ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿದರು.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಮೈಸೂರು, ಪ್ರಾದೇಶಿಕ ಕೇಂದ್ರ ಧಾರವಾಡ, ಜಿಲ್ಲಾ ಪಂಚಾಯತ್ ಧಾರವಾಡ, ತಾಲ್ಲೂಕು ಪಂಚಾಯತ್ ಧಾರವಾಡ. ಇವರ ಸಹಯೋಗದಲ್ಲಿ ತಾಲ್ಲೂಕಿನ ಸಾಮರ್ಥ್ಯ ಸೌಧದಲ್ಲಿ ನೂತನವಾಗಿ ಆಯ್ಕೆಯಾದ ಗ್ರಾಮ ಪಂಚಾಯಿತಿ ಪ್ರತಿನಿಧಿಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿಯನ್ನು ದಿನಾಂಕ 16 ಫೆಬ್ರುವರಿ 2021ರಿಂದ ಪ್ರಾರಂಭಿಸಲಾಯಿತು. ಮೊದಲನೇ ತಂಡವಾಗಿ ಹೆಬ್ಬಳ್ಳಿ, ಅಮ್ಮಿನಬಾವಿ ಗ್ರಾಮ ಪಂಚಾಯಿತಿ ನಂತರದಲ್ಲಿ ನರೇಂದ್ರ, ಮಂಡಿಹಾಳ, ತೇಗೂರು, ಪುಡಕಲಕಟ್ಟಿ ಗ್ರಾಮ ಪಂಚಾಯಿತಿಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿಯನ್ನು ನೀಡಲಾಯಿತು. ನೂತನವಾಗಿ ಆಯ್ಕೆಯಾದ ಜನಪ್ರತಿನಿಧಿಗಳು ಹಳ್ಳಿಯ ವೇಷಭೂಷಣ ತೊಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತರಬೇತಿಯನ್ನು ತುಂಬಾ ಆಸಕ್ತಿಯಿಂದ ಪಡೆದುಕೊಂಡರು. ತರಬೇತಿಯಲ್ಲಿ ಅಳವಡಿಸಿದ ವಿಷಯಗಳು.* ಪಂಚಾಯಿತಿ ಇತಿಹಾಸ *ಅಧ್ಯಕ್ಷರ, ಉಪಾಧ್ಯಕ್ಷರ, ಸದಸ್ಯರ ಕರ್ತವ್ಯಗಳು.*ಗ್ರಾಮ ಸಭೆ, *ವಾರ್ಡ್ ಸಭೆ, *ಸ್ಥಾಯಿ ಸಮಿತಿಗಳು, ಉಪ ಸಮಿತಿಗಳು *ಮಹಿಳಾ ಸಬಲೀಕರಣ,* ಮಹಿಳಾ ಅಭಿವೃದ್ಧಿಯಲ್ಲಿ ಗ್ರಾಮ ಪಂಚಾಯಿತಿ ಪಾತ್ರ, *ನಾಯಕತ್ವ ನಮ್ಮ ಕನಸಿನ ಗ್ರಾಮಪಂಚಾಯತಿ, ಕ್ರಿಯಾತ್ಮಕ ಕ್ರೀಯಾ ಯೋಜನೆ, ನಮ್ಮ ಗ್ರಾಮ ನಮ್ಮ ಯೋಜನೆಮತ್ತು ಇ-ಪಂಚಾಯತ ರಾಜ್ ವ್ಯವಸ್ಥೆ ಕುರಿತು ಹೀಗೆ ಹಲವಾರು ವಿಷಯಗಳ ಮೇಲೆ ವಿಡಿಯೋ ಹಾಗೂ ಪಿ.ಪಿ.ಟಿ ಮುಕ್ತ ಚರ್ಚೆಯ ಮೂಲಕ ಐದು ದಿನಗಳವರೆಗೆ ತರಬೇತಿಯನ್ನು ನೀಡಲಾಯಿತು. ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಾದ ಮಲ್ಲಪ್ಪ ಹೊಂಗಲ, ಸ್ನೇಹಾ ಸಾವಂತ ಮತ್ತು ಶ್ರೀ ನಿಂಗಪ್ಪ ಕೇಣಿ ತರಬೇತಿ ಸಂಯೋಜಕರು ನೀರಜ ಜಾಧವ, ಪ್ರೇಮಾ ಬಡಿಗೇರ, ಗೀತಾ ಮತ್ತು ನಾಗಪ್ಪ ಅಕ್ಕಿ ಭಾಗವಹಿಸಿದ್ದರು. ತರಬೇತಿ ಕೇಂದ್ರವನ್ನು ತಳಿರು ತೋರಣ ಕಟ್ಟಿ ಸಿಂಗರಿಸಲಾಗಿತ್ತು.

**ಮಲ್ಲಪ್ಪ ಹೊಂಗಲ್**
**ಜಿಲ್ಲಾ ತರಬೇತಿ ಸಂಯೋಜಕರು**
**ಧಾರವಾಡ.**



ಲೇಖನ




ಎಂ.ಕೆ.ಕೆಂಪೇಗೌಡ

ಜಂಟಿ ನಿರ್ದೇಶಕರು
ಸಾಮಾಜಿಕ ಪರಿಶೋಧನಾ
ನಿರ್ದೇಶನಾಲಯ
ಹಾಗೂ ಸಲಹೆಗಾರರು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್
ಇಲಾಖೆ.


# ಕೇಂದ್ರ ಪಂಚಾಯತ್‌ರಾಜ್ ಕಾರ್ಯದರ್ಶಿ ರಾಜ್ಯ ಭೇಟಿ ರಾಜ್ಯ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಮೆಚ್ಚುಗೆ

ಕೇಂದ್ರ ಸರ್ಕಾರದ ಪಂಚಾಯತ್‌ರಾಜ್ ಮಂತ್ರಾಲಯದ ಕಾರ್ಯದರ್ಶಿಗಳಾದ ಶ್ರೀ ಸುನೀಲ್ ಕುಮಾರ್ ರವರು ಫೆಬ್ರವರಿ 25/26ರಂದು ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡಿದ್ದರು. ಅವರೊಡನೆ ಪಂಚಾಯತ್ ರಾಜ್ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳಾದ ಶ್ರೀ ಅಲೋಕ್ ಪ್ರೇಮ್‌ನಗರ್ ರವರು ಇದ್ದರು. ಪ್ರವಾಸದ ವೇಳೆ ಅವರ ಜೊತೆ ರಾಜ್ಯ ಪಂಚಾಯತ್ ರಾಜ್ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಮಾಮಹದೇವನ್, ಪಂಚಾಯತ್ ರಾಜ್ ಆಯುಕ್ತರಾದ ಶ್ರೀಮತಿ ಪ್ರಿಯಾಂಕ ಮೇರಿ ಫ್ರಾನ್ಸಿಸ್ ಹಾಗೂ ಹಿರಿಯ ಅಧಿಕಾರಿಗಳು ಇದ್ದರು. ಎರಡು ದಿನಗಳ ಎಡೆಬಿಡದ ಪ್ರವಾಸದ ವೇಳೆ ರಾಜ್ಯದ ಹಿರಿಯ ಅಧಿಕಾರಿಗಳೊಡನೆ ಸಭೆ ನಡೆಸಿದರು. ಪಂಚಾಯತ್‌ಗಳಿಗೆ ಭೇಟಿ ನೀಡಿದರು. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಸಂಸ್ಥೆಯ ವತಿಯಿಂದ ನಡೆಸಲಾಗುತ್ತಿರುವ ಗ್ರಾಮ ಪಂಚಾಯತ್ ಸದಸ್ಯರ ತರಬೇತಿ ಕೇಂದ್ರಕ್ಕೂ ಭೇಟಿ ನೀಡಿದರು. ಶ್ರೀ ಸುನೀಲ್ ಕುಮಾರ್ ರವರ ಭೇಟಿಯ ಪ್ರಮುಖ ಅಂಶಗಳು ಹಾಗೂ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳ ಸಾರಾಂಶವನ್ನು ನೀಡಲಾಗಿದೆ.

**ಸ್ವಮಿತ್ವ ಯೋಜನೆ ಪ್ರಗತಿ ಪರಿಶೀಲನೆ:** ದಿ:25-02-2021ರಂದು ಬೆಳಿಗ್ಗೆ ಸಮಿತ್ವ ಯೋಜನೆಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಹಿರಿಯ ಅಧಿಕಾರಿಗಳೊಡನೆ ಬೆಂಗಳೂರಿನಲ್ಲಿ ಸಭೆ ನಡೆಸಿದರು.

**ಹೆಮ್ಮನಹಳ್ಳಿ ಗ್ರಾಮ ಪಂಚಾಯತ್ ಭೇಟಿ:** ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಹೆಮ್ಮನಹಳ್ಳಿ ಗ್ರಾಮ ಪಂಚಾಯತ್ ಭೇಟಿ ವೇಳೆ ಹಲವು ಪ್ರಮುಖ ಸಾಧನೆಗಳನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದರು. ಕೇವಲ ರೂ.12 ಲಕ್ಷ ಸ್ವಂತ ವರಮಾನವಿರುವ ಗ್ರಾಮ ಪಂಚಾಯತ್‌ನಲ್ಲಿ ಎಲ್ಲಾ ಶಾಲೆ, ಅಂಗನವಾಡಿಗಳಿಗೆ ಶುದ್ಧ ಕುಡಿಯುವ ನೀರು, ಶೌಚಾಲಯ, ಮಕ್ಕಳಿಗೆ ಆಟದ ಸಾಮಗ್ರಿಗಳು ಒದಗಿಸಲಾಗಿದೆ. ಬೀದಿ ದೀಪಗಳು, ಕುಡಿಯುವ ನೀರಿನ ಘಟಕಗಳು ಹಾಗೂ ಗ್ರಾಮ ಪಂಚಾಯತಿ ಸೌರಶಕ್ತಿ

**ಕರ್ನಾಟಕವು ಪಂಚಾಯತ್ ರಾಜ್ ಕ್ಷೇತ್ರದಲ್ಲಿ 47 ವರ್ಷಗಳ ಸುದೀರ್ಘ ಅನುಭವ ಹೊಂದಿದೆ. ಸಂವಿಧಾನ ತಿದ್ದುಪಡಿ ಪೂರ್ವದಲ್ಲಿಯೇ, 1983ರಲ್ಲಿ ಮೂರು ಹಂತದ ವಿಕೇಂದ್ರೀಕರಣ ವ್ಯವಸ್ಥೆ ಜಾರಿಗೆ ತಂದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ. ಸಂವಿಧಾನ ತಿದ್ದುಪಡಿ ನಂತರವು ಮೂರು ಹಂತದ ವಿಕೇಂದ್ರೀಕರಣ ವ್ಯವಸ್ಥೆ ಜಾರಿಗೆ ತಂದು 37 ವರ್ಷಗಳ ಅನುಭವ ಹೊಂದಿದೆ.**



ಅಳವಡಿಸಲಾಗಿದೆ. ಎಲ್ಲಾ ಗ್ರಾಮಗಳಲ್ಲಿ ಒಣಕಸ ಸಂಗ್ರಹಿಸಿ, ಸಂಸ್ಕರಿಸಲು ವ್ಯವಸ್ಥೆ ಮಾಡಲಾಗಿದೆ. ಮನೆಗಳಿಗೆ ಪೈಪ್ ಕಾಂಪೋಸ್ಟ್ ಅಳವಡಿಸಿ ಕಡಿಮೆ ವೆಚ್ಚದಲ್ಲಿ ಕಸ ಸಂಸ್ಕರಿಸುವ ವ್ಯವಸ್ಥೆ ಜಾರಿ ಮಾಡಲಾಗಿದೆ. ಗ್ರಂಥಾಲಯವನ್ನು ಗಣಕೀಕರಿಸಿ ಮಕ್ಕಳು, ವಯಸ್ಕರು, ಸೇರಿದಂತೆ ಎಲ್ಲಾ ವರ್ಗದ ಓದುಗರಿಗೆ ಅನುಕೂಲ ಕಲ್ಪಿಸಲಾಗಿದೆ. ಕೋವಿಡ್-19ರ ಹಿನ್ನೆಲೆಯಲ್ಲಿ ಆನ್‌ಲೈನ್ ಮೂಲಕ ಗ್ರಾಮಸಭೆ ನಡೆಸಲಾಗಿದೆ. ಗ್ರಾಮ ಪಂಚಾಯತ್ ವ್ಯವಹಾರಗಳಲ್ಲಿ ಗಣಕೀಕೃತ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ಗ್ರಾಮ ಪಂಚಾಯತಿ ವ್ಯಾಪ್ತಿಯ ಸ್ತ್ರೀ-ಶಕ್ತಿ ಸಂಘಗಳ ಒಕ್ಕೂಟ ರಚಿಸಿ, ಸಂಜೀವಿನಿ ಯೋಜನೆಯಡಿ ನೆರವು ಒದಗಿಸಿ, ಸ್ವಯಂ ಉದ್ಯೋಗ ಕೈಗೊಳ್ಳಲು ಕ್ರಮ ವಹಿಸಲಾಗಿದೆ. ಗ್ರಾಮ ಪಂಚಾಯತಿ ಆವರಣದಲ್ಲಿ ಸಾರ್ವಜನಿಕರಿಗೆ ಎಲ್ಲಾ ಯೋಜನೆಗಳ ಮಾಹಿತಿಯನ್ನು ಅಂಕಿ ಅಂಶ ಸಮೇತ ನೀಡಿ ಪಾರದರ್ಶಕತೆಗೆ ಒತ್ತು ನೀಡಲಾಗಿದೆ. ಸಾರ್ವಜನಿಕರ ಕುಂದು ಕೊರತೆ ನಿವಾರಣೆಗೆ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಮಕ್ಕಳ ಸ್ನೇಹಿ ಉಪಕ್ರಮಗಳಿಗಾಗಿ ಈ ಪಂಚಾಯತಿಗೆ 2018-19ನೇ ಸಾಲಿಗೆ ರಾಷ್ಟ್ರ ಪ್ರಶಸ್ತಿ ದೊರೆತಿದೆ. ಗ್ರಾಮ ಪಂಚಾಯತಿ ಸರ್ವಾಂಗೀಣ ಅಭಿವೃದ್ಧಿಗಾಗಿ ಎರಡು ಸಲ ಗಾಂಧಿ ಗ್ರಾಮ ಪುರಸ್ಕಾರ ದೊರೆತಿದೆ. ಗ್ರಾಮ ಪಂಚಾಯತಿಯ ಸಾಧನೆಗಳ ಬಗ್ಗೆ ಚುನಾಯಿತ ಪ್ರತಿನಿಧಿಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಜೊತೆ ಕಾರ್ಯದರ್ಶಿಯವರು ಚರ್ಚಿಸಿ, ಮಾಹಿತಿ ಪಡೆದರು. ಸ್ತ್ರೀ-ಶಕ್ತಿ ಸಂಘಗಳ ಒಕ್ಕೂಟದ ಸದಸ್ಯರು ತಯಾರಿಸಿರುವ ಹಲವು ಉತ್ಪನ್ನಗಳನ್ನು ವೀಕ್ಷಿಸಿದರು. ಗ್ರಾಮ ಪಂಚಾಯತಿ ವತಿಯಿಂದ ಕೈಗೊಂಡಿರುವ ವಿನೂತನ ಚಟುವಟಿಕೆಗಳ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

**ಬೇವಿನಹಳ್ಳಿ ಗ್ರಾಮ ಪಂಚಾಯತ್ ಭೇಟಿ:** ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು ಬೇವಿನಹಳ್ಳಿ ಗ್ರಾಮ ಪಂಚಾಯತ್‌ಗೆ ಭೇಟಿ ನೀಡಿ ಸ್ತ್ರೀ-ಶಕ್ತಿ ಸಂಘಗಳ ಒಕ್ಕೂಟದ ಸದಸ್ಯರು ನಡೆಸುತ್ತಿರುವ ವಿವಿದ್ದೋದ್ದೇಶ ಮಾರಾಟ ಮಳಿಗೆಯನ್ನು ವೀಕ್ಷಿಸಿದರು. ಮಹಿಳಾ ಒಕ್ಕೂಟದ ಸದಸ್ಯರುಗಳ ಜೊತೆ ಚರ್ಚಿಸಿ, ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದರು. ಮಹಿಳಾ ಒಕ್ಕೂಟದ ವತಿಯಿಂದ ನಡೆಸುತ್ತಿರುವ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

**ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗೆ ಭೇಟಿ:** ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದರು. ಸ್ಯಾಟ್‌ಕಾಂ ಸ್ಟೂಡಿಯೋಗೆ ಭೇಟಿ ನೀಡಿ ಪರಿಶೀಲಿಸಿದರು.

**ಕರ್ನಾಟಕ ಪಂಚಾಯತ್‌ರಾಜ್ ಹಿರಿಯ ಅಧಿಕಾರಿಗಳೊಡನೆ ಸಭೆ:** ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಮಾಹಿತಿ ಪಡೆದರು. ಪಂಚಾಯತ್ ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಮಾ ಮಹದೇವನ್‌ರವರು ರಾಜ್ಯದಲ್ಲಿ ಪಂಚಾಯತ್ ರಾಜ್ ಕ್ಷೇತ್ರದಲ್ಲಿ ಕೈಗೊಂಡಿರುವ ಪ್ರಮುಖವಾದ ಸಾಧನೆಗಳ ಬಗ್ಗೆ ವಿವರವಾದ ಮಾಹಿತಿ ನೀಡಿದರು.

ಕರ್ನಾಟಕದಲ್ಲಿ ವಿಕೇಂದ್ರೀಕರಣ ವ್ಯವಸ್ಥೆಗೆ ಒಂದು ಇತಿಹಾಸವಿದೆ. ಸ್ವತಂತ್ರ್ಯಾ ಪೂರ್ವದಿಂದಲೂ ವಿಕೇಂದ್ರೀಕರಣ ವ್ಯವಸ್ಥೆ ಬೇರೆ ಬೇರೆ ರೂಪದಲ್ಲಿ ಅಸ್ತಿತ್ವದಲ್ಲಿತ್ತು. ಸ್ವತಂತ್ರ್ಯಾನಂತರ ವಿಕೇಂದ್ರೀಕರಣ ವ್ಯವಸ್ಥೆಗೆ ಸಾಂಸ್ಥಿಕ ರೂಪ ನೀಡಲಾಯಿತು. 73ನೇ ಸಂವಿಧಾನ ತಿದ್ದುಪಡಿ ಪೂರ್ವದಲ್ಲಿ 1983ರಲ್ಲಿ ಮೂರು ಹಂತದ ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. 73ನೇ ತಿದ್ದುಪಡಿಯ ನಂತರ 1993ರ ಪಂಚಾಯತ್ ರಾಜ್ ಕಾಯ್ದೆ ಜಾರಿಗೆ ಬಂದಿದೆ. ಸಂವಿಧಾನದ 73ನೇ ತಿದ್ದುಪಡಿಯ ಆಶಯದಂತೆ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಜಾರಿಗೊಳಿಸಲಾಗಿದೆ. ಮೂರು ಹಂತದ ಸಂಸ್ಥೆಗಳ ಸದಸ್ಯರು ಹಾಗೂ ಪದಾಧಿಕಾರಿಗಳ ಸ್ಥಾನಗಳಲ್ಲಿ ಮಹಿಳೆಯರಿಗೆ ಶೇಕಡ 50%ರಷ್ಟು ಮೀಸಲು ಇರಿಸಲಾಗಿದೆ. ಎಲ್ಲಾ ಸ್ಥಾನಗಳಲ್ಲಿ ಪ.ಜಾ/ಪ.ಪಂ.ರವರಿಗೆ ಅವರ ಜನಸಂಖ್ಯೆಯ ಅನುಪಾತಕ್ಕನುಗುಣವಾಗಿ ಹಾಗೂ ಹಿಂದುಳಿದ ವರ್ಗದವರಿಗೆ 1/3 ಭಾಗ ಮೀಸಲಿರಿಸಲಾಗಿದೆ.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮಸಭೆಗಳಿಗೆ ವಿಶೇಷ ಮಹತ್ವ ನೀಡಲಾಗಿದೆ. ಎಲ್ಲಾ ಕಾರ್ಯಕ್ರಮಗಳಿಗೆ ಫಲಾನುಭವಿಗಳ ಆಯ್ಕೆ ಗ್ರಾಮಸಭೆಗಳ ಮೂಲಕವೇ ಮಾಡಲಾಗುತ್ತಿದೆ. ಮಹಿಳೆಯರು ಹಾಗೂ ಮಕ್ಕಳಿಗಾಗಿ ವಿಶೇಷ ಗ್ರಾಮಸಭೆಗಳನ್ನು ನಡೆಸಲಾಗುತ್ತಿದೆ. ವಿಶೇಷ ಗ್ರಾಮಸಭೆಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳಿಗೆ ಮನ್ನಣೆ ನೀಡಿ ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮ ಪಂಚಾಯತಿಗಳಲ್ಲಿ ಮೂರು ಸ್ಥಾಯಿ ಸಮಿತಿಗಳನ್ನು ಅವುಗಳಡಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಉಪಸಮಿತಿಗಳನ್ನು ರಚಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಜೀವವೈವಿಧ್ಯ ಸೇರಿದಂತೆ ಹತ್ತು ಉಪಸಮಿತಿಗಳನ್ನು ರಚಿಸಲಾಗಿದೆ.

ಕೋವಿಡ್-19ರ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಾರ್ಯಪಡೆಗಳನ್ನು ರಚಿಸಲಾಗಿತ್ತು. ಕಾರ್ಯಪಡೆಗಳು ಕೋವಿಡ್ ಬಗ್ಗೆ ಅರಿವು ಮೂಡಿಸುವಲ್ಲಿ ಲಾಕ್‌ಡೌನ್‌ನಿಂದ ತೊಂದರೆಗೊಳಗಾದವರಿಗೆ ನೆರವು ನೀಡುವಲ್ಲಿ ಉಪಯುಕ್ತವಾದ ಕಾರ್ಯ ನಿರ್ವಹಿಸಿವೆ.

ಈಗಲೂ ಕಾರ್ಯಪಡೆಗಳು ಸಕ್ರಿಯವಾಗಿವೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ತರುವಲ್ಲಿ ನ್ಯಾಯಾಲಯದ ಆದೇಶದಂತೆ ಗ್ರಾಮ ಪಂಚಾಯತಿಯ ಮಟ್ಟದಲ್ಲಿ ಶಿಕ್ಷಣ ಕಾರ್ಯಪಡೆಗಳನ್ನು ರಚಿಸಲಾಗಿದೆ. ಶಿಕ್ಷಣ ಕಾರ್ಯಪಡೆಗಳು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು ಮನೆ ಮನೆ ಸಮೀಕ್ಷೆ ಕೈಗೊಂಡಿದ್ದು, ನಾನಾ ಕಾರಣಗಳಿಗೆ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ, ಶಾಲೆಗೆ ಸೇರಿಸುವಲ್ಲಿ ಪರಿಣಾಮಕಾರಿ ಪಾತ್ರವಹಿಸುತ್ತಿವೆ.

ಕೋವಿಡ್–19ರ ಹಿನ್ನೆಲೆಯಲ್ಲಿ ಶಾಲೆಗಳು ಮುಚ್ಚಿದಾಗ ಗ್ರಾಮ ಪಂಚಾಯತಿಯ ಗ್ರಂಥಾಲಯಗಳಲ್ಲಿ ಓದುವ ಬೆಳಕು ಕಾರ್ಯಕ್ರಮವನ್ನು ಜಾರಿಗೊಳಿಸಲಾಯಿತು. ಈ ಕಾರ್ಯಕ್ರಮದಡಿ ಎಲ್ಲಾ ಮಕ್ಕಳಿಗೂ ಉಚಿತವಾಗಿ ಗ್ರಂಥಾಲಯಗಳಿಗೆ ಸದಸ್ಯತ್ವ ನೀಡಲಾಯಿತು. ಗ್ರಂಥಾಲಯಗಳನ್ನು ಡಿಜಿಟಲ್ ಗ್ರಂಥಾಲಯಗಳಾಗಿ ಮೇಲ್ದರ್ಜೆಗೇರಿಸಿ, ಮಕ್ಕಳು ತಮ್ಮ ಆಸಕ್ತಿಗನುಗುಣವಾಗಿ ಪುಸ್ತಕಗಳನ್ನು ಓದಲು ಅವಕಾಶ ಕಲ್ಪಿಸಲಾಯಿತು. ಶಾಲೆಗಳು ಮುಚ್ಚಲ್ಪಟ್ಟ ವೇಳೆ ಮಕ್ಕಳ ಜ್ಞಾನಾರ್ಜನೆಗೆ ಗ್ರಾಮ ಪಂಚಾಯತಿಯ ಗ್ರಂಥಾಲಯಗಳು ಹೊಸ ಅವಕಾಶಗಳನ್ನು ಒದಗಿಸಿದವು.

ಸಂವಿಧಾನ ತಿದ್ದುಪಡಿಯ ನಂತರ ಜಾರಿಗೆ ಬಂದ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳು ಐದು ಅವಧಿ ಪೂರ್ಣಗೊಳಿಸಿ, ಆರನೇ ಅವಧಿಗೆ ಗ್ರಾಮ ಪಂಚಾಯತಿಗಳಿಗೆ ಚುನಾವಣೆಗಳು ನಡೆದಿವೆ. ಹೊಸದಾಗಿ ಆಯ್ಕೆಯಾದ 91 ಸಾವಿರ ಗ್ರಾಮ ಪಂಚಾಯತಿ ಸದಸ್ಯರಿಗೆ ತರಬೇತಿ ನೀಡಲಾಗುತ್ತಿದೆ. ಚುನಾವಣೆಗಳು ನಡೆದ ಮೂರು ತಿಂಗಳೊಳಗಾಗಿ ಎಲ್ಲಾ ಸದಸ್ಯರುಗಳಿಗೂ ರಾಜ್ಯದ 285 ಕೇಂದ್ರಗಳಲ್ಲಿ ಐದು ದಿನಗಳ ತರಬೇತಿ ನೀಡಲಾಗುತ್ತಿದೆ ಎಂದು ವಿವರಿಸಿದರು. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಶಿಲ್ಪಾನಾಗ್ ರವರು ತರಬೇತಿ ಕಾರ್ಯಕ್ರಮಗಳ ಸಂಕ್ಷಿಪ್ತ ಮಾಹಿತಿ ನೀಡಿದರು.

ಪಂಚಾಯತ್ ರಾಜ್ ಆಯುಕ್ತರಾದ ಶ್ರೀಮತಿ ಪ್ರಿಯಾಂಕ ಮೇರಿ ಫ್ರಾನ್ಸಿಸ್ ರವರು ರಾಜ್ಯದಲ್ಲಿ ಇ–ಆಡಳಿತದಲ್ಲಿ ತಂದಿರುವ ಸುಧಾರಣೆಗಳ ಬಗ್ಗೆ ಮಾಹಿತಿ ನೀಡಿದರು. ಪಂಚತಂತ್ರ ನೂತನ ಅವತರಿಣಿಕೆ 2.0, ಬಾಪೂಜಿ ಸೇವಾ ಕೇಂದ್ರಗಳು, ಗಾಂಧಿ ಸಾಕ್ಷಿ ಕಾಯಕ ಮತ್ತು ಇ.ಎಫ್.ಎಂ.ಎಸ್ ಗಳ ಬಗ್ಗೆ ತಿಳಿಸಿದರು. ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದ ಜಂಟಿ ನಿರ್ದೇಶಕರು ಹಾಗೂ ಪಂಚಾಯತ್ ರಾಜ್ ಸಲಹೆಗಾರರಾದ ಶ್ರೀ ಎಂ.ಕೆ. ಕೆಂಪೇಗೌಡ ರವರು 14ನೇ ಹಣಕಾಸು ಆಯೋಗದ ಅನುದಾನದ ಅನುಷ್ಠಾನದ ಸಾಮಾಜಿಕ ಪರಿಶೋಧನೆ ಕೈಗೊಂಡಿರುವ ಬಗ್ಗೆ ವಿವರಿಸಿದರು.

ಕೇಂದ್ರ ಸರ್ಕಾರದ ಕಾರ್ಯದರ್ಶಿಗಳಾದ ಶ್ರೀ ಸುನೀಲ್ ಕುಮಾರ್ ರವರು ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾತನಾಡಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಅವರ ಭಾಷಣದ ಪ್ರಮುಖ ಅಂಶಗಳು ಇಂತಿವೆ.

- ಕರ್ನಾಟಕವು ಪಂಚಾಯತ್ ರಾಜ್ ಕ್ಷೇತ್ರದಲ್ಲಿ 47 ವರ್ಷಗಳ ಸುದೀರ್ಘ ಅನುಭವ ಹೊಂದಿದೆ. ಸಂವಿಧಾನ ತಿದ್ದುಪಡಿ ಪೂರ್ವದಲ್ಲಿಯೇ, 1983ರಲ್ಲಿ ಮೂರು ಹಂತದ ವಿಕೇಂದ್ರೀಕರಣ ವ್ಯವಸ್ಥೆ ಜಾರಿಗೆ ತಂದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ. ಸಂವಿಧಾನ ತಿದ್ದುಪಡಿ ನಂತರವು ಮೂರು ಹಂತದ ವಿಕೇಂದ್ರೀಕರಣ ವ್ಯವಸ್ಥೆ ಜಾರಿಗೆ ತಂದು 37 ವರ್ಷಗಳ ಅನುಭವ ಹೊಂದಿದೆ.
- ಐದು ಅವಧಿಯನ್ನು ಪೂರೈಸಿ, ಗ್ರಾಮ ಪಂಚಾಯತಿಗಳಿಗೆ



6ನೇ ಅವಧಿಗೆ ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸಿದವು. ಚುನಾವಣೆ ನಡೆದ ಕೂಡಲೇ ಚುನಾಯಿತ ಸದಸ್ಯರುಗಳಿಗೆ ಐದು ದಿನಗಳ ತರಬೇತಿ ವ್ಯವಸ್ಥೆ ಮಾಡಿರುವುದು ತರಬೇತಿಗಾಗಿ ವ್ಯವಸ್ಥಿತವಾಗಿ ಪೂರ್ವ ಸಿದ್ಧತೆ ಮಾಡಿಕೊಂಡಿರುವುದು ಪ್ರಶಂಸನಿಯ ಅಂಶವಾಗಿದೆ.

- ಪ್ರಸಕ್ತ ಸನ್ನಿವೇಶದಲ್ಲಿ ಜನರ ಆಶೋತ್ತರಗಳು ಬದಲಾಗಿವೆ. ಬದಲಾದ ಸನ್ನಿವೇಶಕ್ಕೆ ಅನುಗುಣವಾಗಿ ನಮ್ಮ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿಯೂ ಬದಲಾವಣೆ ಮಾಡಿಕೊಳ್ಳಬೇಕಿದೆ.
- ಗ್ರಾಮಸಭಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಬೇಕಿದೆ. ಗ್ರಾಮಸಭೆಗಳಲ್ಲಿ ಜನರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬೇಕಿದೆ. ಯೋಜನಾ ಪ್ರಕ್ರಿಯೆಯಲ್ಲಿ ಜನರ ಭಾಗವಹಿಸುವಿಕೆ ಸುನಿಶ್ಚಿತಗೊಳಿಸಬೇಕಿದೆ.
- ರಾಜ್ಯದಲ್ಲಿ ಗ್ರಾಮಸಭೆಗಳು ಅದರಲ್ಲಿಯೂ ಮಹಿಳೆಯರು ಹಾಗೂ ಮಕ್ಕಳಿಗಾಗಿ ವಿಶೇಷ ಗ್ರಾಮ ಸಭೆಗಳನ್ನು ನಡೆಸುತ್ತಿರುವುದು ಹಾಗೂ ಗ್ರಾಮ ಸಭೆಗಳ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಳ್ಳುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ.
- ಕೋವಿಡ್-19ರ ಲಾಕ್‌ಡೌನ್ ಸಮಯದಲ್ಲಿ ಪಂಚಾಯತ್ ಕಾರ್ಯಪಡೆಗಳು ಮಾಡಿರುವ ಉತ್ತಮ ಸಾಧನೆಗಳು ದೇಶಕ್ಕೆ ಮಾದರಿಯಾಗಿವೆ.
- ಗ್ರಾಮ ಪಂಚಾಯತ್ ಗ್ರಂಥಾಲಯಗಳನ್ನು ಡಿಜಿಟಲೀಕರಣ ಮಾಡಿ ಓದುವ ಬೆಳಕು ಕಾರ್ಯಕ್ರಮಗಳ ಮೂಲಕ ಮಕ್ಕಳ ಸ್ನೇಹಿ ಮಾಡಿರುವುದು ಉತ್ತಮ ಪ್ರಯತ್ನವಾಗಿದೆ.
- ಅನುದಾನದ ಬಿಡುಗಡೆ, ಬಳಕೆ ಹಾಗೂ ಲೆಕ್ಕಪತ್ರ ನಿರ್ವಹಣೆಯಲ್ಲಿ ಪಾರದರ್ಶಕತೆ ಹಾಗೂ ಉತ್ತರದಾಯಿತ್ವಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಈ ದಿಸೆಯಲ್ಲಿ ಸಾಮಾಜಿಕ ಪರಿಶೋಧನೆ ಹಾಗೂ ಇ-ಆಡಳಿತ ವ್ಯವಸ್ಥೆಗೆ ವಿಶೇಷ ಮಹತ್ವ ನೀಡಬೇಕಿದೆ. ರಾಜ್ಯದಲ್ಲಿ 14ನೇ ಹಣಕಾಸು ಆಯೋಗದ ಅನುದಾನಕ್ಕೆ ಸಾಮಾಜಿಕ ಪರಿಶೋಧನೆ ಕೈಗೊಂಡಿರುವುದು ಉತ್ತಮವಾಗಿದೆ.
- ರಾಜ್ಯದಲ್ಲಿ ಪಂಚತಂತ್ರ ವ್ಯವಸ್ಥೆ ಉಪಯುಕ್ತವಾಗಿದೆ. ಪಂಚತಂತ್ರಾಂಶವನ್ನು 2.0ಗೆ ಉನ್ನತಿಕರಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ.
- ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನದ ಮಾನದಂಡಗಳನ್ನು ಬದಲಾದ ಕಾಲಮಾನಕ್ಕೆ ತಕ್ಕಂತೆ ಪುನರ್ ರೂಪಿಸಬೇಕಾಗಿದೆ. 15ನೇ ಹಣಕಾಸು ಆಯೋಗದ ಮಾರ್ಗ ಸೂಚಿಗಳನ್ನು ಆದಷ್ಟು ಬೇಗ ಪರಿಷ್ಕರಿಸಿ ಹೊರಡಿಸಲಾಗುತ್ತಿದೆ.
- ಒಟ್ಟಾರೆಯಾಗಿ ಗ್ರಾಮೀಣ ಜನರಿಗೆ ನೀಡುವ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸಬೇಕಿದೆ. ಮಹಿಳೆಯರ ಸಾಮರ್ಥ್ಯಾಭಿವೃದ್ಧಿ ಹಾಗೂ ಕೌಶಲ್ಯಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ.
- ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಸಬಲೀಕರಣಕ್ಕೆ ಪೂರಕವಾದಂತ ವಾತಾವರಣ ಕಂಡುಬರುತ್ತಿದೆ. ಈ ದಿಸೆಯಲ್ಲಿ ಹಲವಾರು ವಿನೂತನ ಪ್ರಯೋಗಗಳು ನಡೆದಿರುತ್ತವೆ. ಇವುಗಳನ್ನು ಮುಂದುವರೆಸಿಕೊಂಡು ಹೋಗುವ ಮೂಲಕ ಕರ್ನಾಟಕ ದೇಶಕ್ಕೆ ಮಾದರಿಯಾಗಲೆಂದು ಆಶಿಸುವುದಾಗಿ ತಿಳಿಸಿದರು.

ದಿನಾಂಕ:26-02-2021ರಂದು ಕೊಡಗು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡರು. ಮಡಿಕೇರಿ ತಾಲ್ಲೂಕು, ಹೊದ್ದೂರು ಗ್ರಾಮ ಪಂಚಾಯತಿಯಲ್ಲಿ ಸ್ಥಾಪಿಸಿರುವ ಡಿಜಿಟಲ್ ಗ್ರಂಥಾಲಯ ಮಹಿಳಾ ಸ್ವ-ಸಹಾಯ ಸಂಘದ ಮೂಲಕ ನಿರ್ವಹಿಸಲಾಗುತ್ತಿರುವ ತ್ಯಾಜ್ಯ ಸಂಗ್ರಹ ಹಾಗೂ ಸಂಸ್ಕರಣಾ ಘಟಕಗಳನ್ನು ವೀಕ್ಷಿಸಿದರು. ಕಡಿಮೆ ವರಮಾನವಿದ್ದರೂ, ಅತ್ಯುತ್ತಮ ಸೇವಾ ವ್ಯವಸ್ಥೆಗಳನ್ನು ವಿನೂತನವಾಗಿ ರೂಪಿಸಿರುವ ಹೊದ್ದೂರು ಗ್ರಾಮ ಪಂಚಾಯತಿಯು ದೇಶಕ್ಕೆ ಮಾದರಿಯಾಗಲೆಂದು ಶ್ಲಾಘಿಸಿದರು. ನಂತರ ಹಾಕತ್ತೂರ್ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆದಿರುವ ಮಹಿಳಾ ಸ್ವ-ಸಹಾಯ ಸಂಘಗಳ ಒಕ್ಕೂಟದ ವತಿಯಿಂದ ಏರ್ಪಡಿಸಲಾಗಿದ್ದ ಉತ್ಪನ್ನಗಳ ಮಾರಾಟ ಮೇಳಕ್ಕೆ ಭೇಟಿ ನೀಡಿದರು. ಮಹಿಳೆಯರು ಸ್ಥಳೀಯವಾಗಿ ಹಲವಾರು ವಿನೂತನ ಉತ್ಪನ್ನಗಳನ್ನು ತಯಾರಿಸಿ, ಮಾರಾಟ ಮಾಡುವ ಮೂಲಕ ಆದಾಯ ಪಡೆದುಕೊಳ್ಳುತ್ತಿರುವ ಮಾಹಿತಿ ಪಡೆದು ಈ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಮಡಿಕೇರಿ ತಾಲ್ಲೂಕು ಪಂಚಾಯತ್‌ನಲ್ಲಿ ನಡೆಯುತ್ತಿದ್ದ ಗ್ರಾಮ ಪಂಚಾಯತ್ ಸದಸ್ಯರ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿದರು. ತರಬೇತಿ ಗುಣಮಟ್ಟದ ಬಗ್ಗೆ ಸದಸ್ಯರು ವ್ಯಕ್ತಪಡಿಸಿದ ಉತ್ತಮ ಅಭಿಪ್ರಾಯಗಳನ್ನು ಕೇಳಿ ಸಂತಸಗೊಂಡರು. ತರಬೇತಿ ಮಹತ್ವ ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯಡಿ ಚುನಾಯಿತ ಪ್ರತಿನಿಧಿಗಳ ಪಾತ್ರದ ಬಗ್ಗೆ ಸದಸ್ಯರನ್ನು ಕುರಿತು ಮಾತನಾಡಿದರು.

ನಂತರ ಸೋಮವಾರಪೇಟೆ ತಾಲ್ಲೂಕು, ಮುಳ್ಳುಸೋಗೆ ಗ್ರಾಮ ಪಂಚಾಯತ್‌ಗೆ ಭೇಟಿ ನೀಡಿ ಅಲ್ಲಿನ ಘನ ತ್ಯಾಜ್ಯ ಘಟಕದ ಕಾರ್ಯಚಟುವಟಿಕೆ ಪರಿಶೀಲಿಸಿದರು. ಘನ ತ್ಯಾಜ್ಯ ಘಟಕದ ನಿರ್ವಹಣೆಯ ಬಗ್ಗೆ ಗ್ರಾಮ ಪಂಚಾಯತ್ ಅಧಿಕಾರಿಗಳು ಉತ್ತಮ ಸಲಹೆಗಳನ್ನು ನೀಡಿದರು.

◆

ವರದಿ




**ಸುರೇಶ್ ಎಸ್. ಜಿ.**

**ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಮತ್ತು ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ಕಾರ್ಯಕರ್ತರು.**


# ಮಕ್ಕಳೇ ಮುನ್ನಡೆಸಿದ ಮಕ್ಕಳ ಹಕ್ಕುಗಳ ಸ್ನೇಹಿ ಅಭಿಯಾನ

ಕೊರೋನಾ ಕಾರಣಕ್ಕೆ ಎಲ್ಲರೂ ಹೆಚ್ಚಿನ ಸಮಯವನ್ನು ಮನೆಯಲ್ಲಿಯೇ ಕಳೆಯಬೇಕಾಗಿದ್ದರಿಂದ ಈ ಸಮಯದಲ್ಲಿ ಪ್ರತಿಯೊಬ್ಬರೂ ಹೊರಗಿನ ಪರಿಸರದಿಂದ ನೇರವಾಗಿ ದೂರವೇ ಉಳಿದಿದ್ದು, ಅದರಲ್ಲೂ ಮುಖ್ಯವಾಗಿ ಮಕ್ಕಳಂತೂ ಹೊರಗಿನ ಆಟ, ತಂಟೆ, ತರಲೆಗಳಿಲ್ಲದೇ, ಮುಚ್ಚಿದ ಶಾಲೆಯು ಆರಂಭವಾಗದೇ, ಆನ್ಲೈನ್ ಶಿಕ್ಷಣದ ಸಮಸ್ಯೆಯಿಂದ ಹೈರಾಣಾಗಿ, ತರಗತಿಯಲ್ಲಿ ಎಲ್ಲರೊಂದಿಗೆ ಬೆರೆತು ಖುಷಿಯಿಂದ ಕಲಿಯುವ, ಕೂಡಿ ಆಡುವ ಸುಖದಿಂದ ವಂಚಿತರಾಗಿದ್ದರು. ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯು 'ಮಕ್ಕಳ ಹಕ್ಕುಗಳ ಸ್ನೇಹಿ ಗ್ರಾಮ ಪಂಚಾಯತ್ ಅಭಿಯಾನ'ವನ್ನು ಆಲೋಚಿಸಿ ಕಾರ್ಯಕ್ರಮ, ರೂಪಿಸಿದ್ದು ಒಂದು ಮಹತ್ತರ ಹೆಜ್ಜೆ.

ಇದನ್ನು ಉತ್ತಮ ಅವಕಾಶಗಳೆಂಬಂತೆ ಬಳಸಿಕೊಂಡ ಹಲವು ಗ್ರಾಮ ಸರ್ಕಾರಗಳು (ಗ್ರಾಮ ಪಂಚಾಯಿತಿ) ಈ ನಿಟ್ಟಿನಲ್ಲಿ ಮಕ್ಕಳಿಗೆ ತಮ್ಮ ಬದ್ಧತೆಯನ್ನು ಪ್ರದರ್ಶಿಸಿದರು. ಕುಂದಾಪುರ ತಾಲ್ಲೂಕಿನ ಹೊಸಾಡು ಗ್ರಾಮ ಪಂಚಾಯಿತಿ ಈ ಕಾರ್ಯಕ್ರಮದ ಸಮಗ್ರ ಮತ್ತು ಅರ್ಥಪೂರ್ಣ ಅನುಷ್ಠಾನದತ್ತ ಹೆಜ್ಜೆಯಿಟ್ಟು ಮಕ್ಕಳ ಹಕ್ಕುಗಳ ಸ್ನೇಹಿ ವಾತಾವರಣ ಸೃಷ್ಟಿಸಿದೆ.

ರಾಜ್ಯ ಸರ್ಕಾರವು ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಹಯೋಗದೊಂದಿಗೆ ಸಂಸ್ಥೆಯು ಇಲ್ಲಿಯವರೆಗೆ ತನ್ನ ಕಾರ್ಯಕ್ಷೇತ್ರದಲ್ಲಿ ಮಕ್ಕಳಿಗೆ ರಕ್ಷಣಾತ್ಮಕವಾಗಿ ಸೃಷ್ಟಿಸಿದ್ದ ವ್ಯವಸ್ಥೆಗಳಾದ 'ಮಕ್ಕಳ ಮಿತ್ರ, ಮಕ್ಕಳ ಅಂಚೆ ಪೆಟ್ಟಿಗೆ' ಮತ್ತು ಗ್ರಾಮ ಸ್ವರಾಜ್ ಕಾಯ್ದೆಯ ತಿದ್ದುಪಡಿಯ ಸಮಯದಲ್ಲಿ ಪ್ರಸ್ತಾಪಿಸಿದ ಪ್ರದೇಶವಾರು ಸಭೆಗಳನ್ನು ಈ ಕಾರ್ಯಕ್ರಮದಲ್ಲಿ ಕ್ರಮವಾಗಿ 'ಬಾಲ ಮಿತ್ರ, ಮಕ್ಕಳ ದನಿ ಪೆಟ್ಟಿಗೆ' ಹಾಗೂ ಮಕ್ಕಳ ಪ್ರದೇಶವಾರು/ವಾರ್ಡ್ ಸಭೆಗಳನ್ನು ಈ ಕಾರ್ಯಕ್ರಮದ ಪ್ರಮುಖ ಅಂಶಗಳಾಗಿ



ಪರಿಗಣಿಸಿ ರಾಜ್ಯಾದ್ಯಂತ ಅನುಷ್ಠಾನಗೊಳಿಸುತ್ತಿದೆ.

ಮಕ್ಕಳಿಗೆ ಓದುವ ಆಸಕ್ತಿ ಮೂಡಿಸುವುದು, ಅವರ ಕಲೆ, ಆಸಕ್ತಿ ಸಾಮರ್ಥ್ಯ, ಕೌಶಲ್ಯಗಳನ್ನು, ಪ್ರತಿಭೆಗಳನ್ನು ಪ್ರದರ್ಶನ ಮಾಡಲು ಗ್ರಾಮ ಪಂಚಾಯತ್ ಗ್ರಂಥಾಲಯವನ್ನು ಸೃಜನಾತ್ಮಕ ಅಥವಾ ಕ್ರಿಯಾತ್ಮಕ ಸ್ಥಳವನ್ನಾಗಿ ಮಾಡುವ 'ಓದುವ ಬೆಳಕು' ಕಾರ್ಯಕ್ರಮವನ್ನು ಇದರಲ್ಲಿ ರೂಪಿಸಿತ್ತು. ಜೊತೆಗೆ ಗ್ರಾಮ ಸಭೆಗಳ ಪೂರ್ವ ಮಕ್ಕಳ ಪ್ರದೇಶವಾರು ಅಥವಾ ವಾರ್ಡ್ ಸಭೆಗಳನ್ನು ನಡೆಸುವುದು, ಆ ಮೂಲಕ ಮಕ್ಕಳ ಭಾಗವಹಿಸುವಿಕೆಗೆ ಒತ್ತು ಕೊಟ್ಟಿತು. ಹೀಗೆ ಅವರ ಬಗ್ಗೆ ಆಗುವ ತೀರ್ಮಾನಗಳಲ್ಲಿ ಅವರೇ ಭಾಗವಹಿಸಿ ನಿರ್ಣಯಿಸುವ ಮೂಲಕ 'ಮಕ್ಕಳು ಇಂದೇ ಪ್ರಜೆಗಳಾಗಿ' ತಮ್ಮ ಹಕ್ಕನ್ನು ಚಲಾಯಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

## ವಿಕೇಂದ್ರೀಕೃತ ಮಕ್ಕಳ ಪ್ರದೇಶವಾರು ಮತ್ತು ವಾರ್ಡ್ ಸಭೆಗಳು

ಗ್ರಾಮ ಪಂಚಾಯಿತಿಯು ತನ್ನ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದ ಅಂಗನವಾಡಿಗಳ ಕಾರ್ಯಕರ್ತರ, ಆಶಾ ಕಾರ್ಯಕರ್ತರ, ಆಯಾ ಶಾಲೆಯ ಶಿಕ್ಷಕರ ಹಾಗೂ ಸಮುದಾಯದ ಸದಸ್ಯರ ಸಹಕಾರವನ್ನು ಪಡೆದು ಮಕ್ಕಳಿರುವ ಅವರವರ ಪ್ರದೇಶದಲ್ಲೇ ಪ್ರದೇಶವಾರು ಸಭೆಗಳು ಹಾಗೂ ವಾರ್ಡ್ ಸಭೆಗಳನ್ನು ನಡೆಸಲಾಯಿತು. ಹೀಗೆ ನಡೆದ 8 ಸಭೆಗಳಲ್ಲಿ ಆಯಾ ಪ್ರದೇಶ/ವಾರ್ಡ್ ನಲ್ಲಿರುವ ಎಲ್ಲಾ ಮಕ್ಕಳನ್ನು ಇದರಲ್ಲಿ ಒಳಗೊಳ್ಳುವಂತೆ ಮಾಡಿ ಅವರ ಸಕ್ರಿಯ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಂಡು ಮುಖ್ಯವಾಗಿ ಹಿಂದುಳಿದ ಪ್ರದೇಶಗಳ, ವಲಸೆ ಸಮುದಾಯ ಹಾಗೂ ದುಡಿಯುವ ಮಕ್ಕಳಿರುವ ಪ್ರದೇಶಗಳಲ್ಲಿ ಅವರಿಗಾಗಿ ಪ್ರದೇಶವಾರು ಮತ್ತು ವಾರ್ಡ್ ಸಭೆಗಳನ್ನು ನಡೆಸಲಾಯಿತು.

ಗ್ರಾಮ ಪಂಚಾಯಿತಿಯು ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ (ನಮ್ಮಭೂಮಿ) ಸಂಸ್ಥೆಯ ಸಹಭಾಗಿತ್ವದಲ್ಲಿ ಪ್ರತಿ ಸಭೆಯನ್ನೂ ವಿವಿಧ ಆಟಗಳು, ಹಾಡು, ಮಕ್ಕಳ ಚಲನಚಿತ್ರಗಳ ಪ್ರದರ್ಶನ, ಚರ್ಚೆ, ಸಂವಾದ, ಕ್ರಾಫ್ಟ್, ಚಿತ್ರಕಲೆ, ಹೀಗೆ ವಿವಿಧ ಚಟುವಟಿಕೆಗಳ ಮೂಲಕ ನಡೆದಿದೆ.

'ಮಕ್ಕಳ ಅಂಚೆ ಪೆಟ್ಟಿಗೆ'ಯನ್ನು ಮಕ್ಕಳು ಗುರುತಿಸಿದ (ಅವರವರ) ಪ್ರದೇಶಗಳಲ್ಲಿ ಸಾಂಕೇತಿಕವಾಗಿ ಹಾಕಲಾಯಿತು. ಮಕ್ಕಳು ಹೇಳಿದ ಎಲ್ಲಾ ಸ್ಥಳಗಳಲ್ಲಿ ಅಂಚೆ ಪೆಟ್ಟಿಗೆಯನ್ನು ತೆರೆಯಲು ಆಯಾ ಪ್ರದೇಶದಲ್ಲಿ ಮಕ್ಕಳು ಗುರುತಿಸಿದ ಜವಾಬ್ದಾರಿ ವ್ಯಕ್ತಿಗಳಾದ ಮಕ್ಕಳಮಿತ್ರರು, ಗ್ರಾಮ ಪಂಚಾಯಿತಿಯ ಆಯಾ ವಾರ್ಡಿನ ಸದಸ್ಯರು ಮುಂತಾದವರನ್ನು ಕರೆದು ಅವರಿಗೆ ಅದರ ಮಹತ್ವ ಮತ್ತು



ಅವರ ಜವಾಬ್ದಾರಿಗಳ ಬಗ್ಗೆ ತಿಳಿಸಿ ಗೌರವ ಪೂರ್ವಕವಾಗಿ ಅವರಿಗೆ ಜವಾಬ್ದಾರಿಯನ್ನು ವಹಿಸುವ ನಿಟ್ಟಿನಲ್ಲಿ ಆಯಾ ಪ್ರದೇಶದಲ್ಲಿ ಹಬ್ಬದಂತೆ ಸಂಭ್ರಮದಿಂದ 'ಧನಿ ಪೆಟ್ಟಿಗೆ' ಹಾಕುವ ಯೋಜನೆಯನ್ನು ಮಾಡಿಕೊಂಡಿದ್ದಾರೆ.

## ಹೊಸ ಗ್ರಂಥಾಲಯಕ್ಕೆ ಮುನ್ನುಡಿ:

ಹೊಸಾಡು ಹೊಸ ಗ್ರಾಮ ಪಂಚಾಯಿತಿ ಆಗಿದ್ದರಿಂದ ಗ್ರಾಮ ಪಂಚಾಯಿತಿಗೆ ಗ್ರಂಥಾಲಯ ಇರಲಿಲ್ಲ. ಆದರೆ ಮಕ್ಕಳಿಂದ ಬಂದ ಬೇಡಿಕೆ ಮತ್ತು ಅವರಿಗೆ ಸಕಾರಾತ್ಮಕವಾಗಿ ಪ್ರತಿಕ್ರಿಯೆ ನೀಡಬೇಕೆಂಬ ಉದ್ದೇಶದಿಂದ ಗ್ರಾಮ ಪಂಚಾಯಿತಿಯವರು ಇರುವ ಪಂಚಾಯಿತಿ ಕಟ್ಟಡದಲ್ಲೇ ಗ್ರಾಮ ಪಂಚಾಯಿತಿ ಗ್ರಂಥಾಲಯ ರೂಪಿಸಲು ಯೋಜನೆ ಮಾಡಿ ಉಡುಪಿ ಜಿಲ್ಲಾ ಪಂಚಾಯತ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ಸಹಭಾಗಿತ್ವದಲ್ಲಿ ಯುಎನ್.ಡಿ.ಪಿ.ಯಿಂದ ಒಂದಷ್ಟು ಪುಸ್ತಕಗಳನ್ನು ಪಡೆದುಕೊಂಡು ಗ್ರಾಮ ಪಂಚಾಯತ್ ತನ್ನದೇ ಖರ್ಚಿನಲ್ಲಿ ಬೆಂಗಳೂರಿನಿಂದ ಅದನ್ನು ತರಿಸಿಕೊಂಡು ಗ್ರಂಥಾಲಯದ ಆರಂಭಕ್ಕೆ ಮುನ್ನುಡಿ ಬರೆದೆ ಬಿಟ್ಟಿತು.

## "ಪುಸ್ತಕ ಜೋಳಿಗೆ":

ಇಲ್ಲಿನ ಮಕ್ಕಳೂ ಕೂಡ ಅದು ಪಂಚಾಯತ್ ಗ್ರಂಥಾಲಯವಷ್ಟೇ ಅಲ್ಲ ನಮ್ಮದೇ ಗ್ರಂಥಾಲಯವಾದ್ದರಿಂದ ಇದನ್ನು ನಾವೂ ರೂಪಿಸಬೇಕೆಂದು "ಪುಸ್ತಕ ಜೋಳಿಗೆ" ಕಾರ್ಯಕ್ರಮದ ಮೂಲಕ ತಮ್ಮ ಊರಿನ ಮನೆ ಮನೆಗಳಿಗೆ ಪುಸ್ತಕ ಜೋಳಿಗೆಯನ್ನು ಹಿಡಿದುಕೊಂಡು ಇದರ ಉದ್ದೇಶವನ್ನು ಪ್ರತಿಯೊಬ್ಬರಿಗೂ ವಿವರಿಸುತ್ತ ಸುಮಾರು 125ಕ್ಕೂ ಹೆಚ್ಚು ಪುಸ್ತಕಗಳನ್ನು ಒಟ್ಟುಗೂಡಿಸಿ ಗ್ರಂಥಾಲಯಕ್ಕೆ ನೀಡಿದ್ದಾರೆ.

## ಸಮಸ್ಯಾ/ಬೇಡಿಕೆಯ ಚೀಲ:

ಪುಸ್ತಕ ಜೋಳಿಗೆಯ ಜೊತೆಗೆ ಮಕ್ಕಳು ಗುಂಪು ಗುಂಪಾಗಿ ಸಮಸ್ಯೆ ಅಥವಾ ಬೇಡಿಕೆಯ ಚೀಲವನ್ನು ಹಿಡಿದುಕೊಂಡು ಮನೆ ಮನೆಗಳಿಗೆ ಭೇಟಿ ಮಾಡಿ ಪ್ರದೇಶವಾರು/ವಾರ್ಡ್ ಸಭೆಗಳಿಗೆ ಬರಲು ಆಗದಿದ್ದ ಮಕ್ಕಳೊಂದಿಗೆ ಅವರ ಸಮಸ್ಯೆಗಳು ಅಥವಾ ಬೇಡಿಕೆಗಳ ಬಗ್ಗೆ ಮಾತನಾಡಿ ಅವರ ಬೇಡಿಕೆಯನ್ನು ಚೀಲದಲ್ಲಿ ಸಂಗ್ರಹಿಸಿದರು.

## ಮಕ್ಕಳೇ ರೂಪಿಸಿದ ಗ್ರಂಥಾಲಯ –

ಗ್ರಂಥಾಲಯದ ಗೋಡೆಗಳಲ್ಲಿ ಮಕ್ಕಳ ಪ್ರತಿಭೆಯ ಅನಾವರಣ: ಬಂದ ಎಲ್ಲಾ ಪುಸ್ತಕಗಳನ್ನು ಇಟ್ಟುಕೊಂಡು ದಾನಿಗಳಿಂದ ಗ್ರಾಮ ಪಂಚಾಯಿತಿಯವರು ಪಡೆದುಕೊಂಡ ಪುಸ್ತಕ ಇಡುವ ಕಪಾಟಿನಲ್ಲಿ ಮಕ್ಕಳೆ ಖುದ್ದಾಗಿ ಪುಸ್ತಕಗಳನ್ನು ಜೋಡಿಸಿದ್ದಾರೆ. ಗ್ರಂಥಾಲಯದ ಗೋಡೆಗಳಲ್ಲಿ ಮಕ್ಕಳು ಪ್ರದೇಶವಾರು ಹಾಗೂ ವಾರ್ಡ್ ಸಭೆಗಳಲ್ಲಿ ಮಾಡಿದ ಕ್ರಾಫ್ಟ್ ವಸ್ತುಗಳು, ಬಿಡಿಸಿದ ಚಿತ್ರಗಳು, ಅವರ ಆಸಕ್ತಿಯ ಬರಹಗಳು ಮುಂತಾದವುಗಳನ್ನು ಆಯಾ ಪ್ರದೇಶದ ಹೆಸರಿನಲ್ಲಿ ವಾಲ್ ಮ್ಯಾಗಜಿನ್ ಮಾಡಿ ಗ್ರಂಥಾಲಯದ ಗೋಡೆಗಳಲ್ಲಿ ಹಾಕಿದ್ದಾರೆ.

ಕೊರೊನಾದ ನೇರ ಪರಿಣಾಮಕ್ಕೆ ಒಳಗಾದವರಲ್ಲಿ ಮಕ್ಕಳು ಮತ್ತು ಮಹಿಳೆಯರು ಮೊದಲ ಸಾಲಿನಲ್ಲಿದ್ದಾರೆ. ಅದರಲ್ಲೂ ಮಕ್ಕಳಿಗೆ, ಸಾಮಾಜೀಕರಣದಲ್ಲಿ ಕುಟುಂಬದ ನಂತರದ ಎಲ್ಲಾ ಕೊಂಡಿಗಳು ಒಮ್ಮೆಲೆ ಕಳಚಿದಂತ ವಾತಾವರಣಕ್ಕೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಇದನ್ನು ಅನುಭವಿಸಿ ನಂತರ ಅದರಿಂದ ಹೊರಬರಬೇಕಾದಾಗ ತನ್ನ ವ್ಯಾಪ್ತಿಯ ಮಕ್ಕಳಿಗೆ ಗ್ರಾಮ ಪಂಚಾಯತ್ ಹೊಸಾಡು ಈ ಅವಕಾಶವನ್ನು ಕೇವಲ ಒಂದು ಕಾರ್ಯಕ್ರಮವಾಗಿ ಪರಿಗಣಿಸದೇ, ಇದು ತಮ್ಮ ಗ್ರಾಮ ಪಂಚಾಯಿತಿಯ ಪ್ರಜೆಗಳಾದ ಮಕ್ಕಳ ಬಗ್ಗೆ ಇರುವ ತಮ್ಮ ಜವಾಬ್ದಾರಿ, ಹೊಣೆಗಾರಿಕೆ ಎಂಬಂತೆ ಕಾರ್ಯನಿರ್ವಹಿಸಿದ್ದು ಗಮನಾರ್ಹ. ನಮ್ಮಭೂಮಿಯ ಸೌಕರ್ಯಕಾರಿಕೆಯನ್ನು ಪಡೆದ ಗ್ರಾಮ ಪಂಚಾಯತ್ ಹೊಸಾಡು ಇಡೀ ಕಾರ್ಯಕ್ರಮವನ್ನು ಅತೀವ ಕಾಳಜಿಯಿಂದ ನಡೆಸಿ, ಯಶಸ್ಸು ಕಂಡಿದೆ. ಗ್ರಂಥಾಲಯವನ್ನು ಸ್ಥಾಪಿಸುವ ಮೊದಲ ಹೆಜ್ಜೆಯನ್ನಿಟ್ಟು ಮುಂದೆಯೂ ಅದನ್ನು ಆಧುನಿಕ ಸೌಲಭ್ಯಗಳೊಂದಿಗೆ, ಡಿಜಿಟಲ್ ರೂಪಕೊಟ್ಟು, ಮಕ್ಕಳಿಗೆ ಸ್ನೇಹಿಯಾದ ಸೃಜನಾತ್ಮಕ, ಕ್ರಿಯಾಶೀಲವಾದ ಮಾಹಿತಿ, ಜ್ಞಾನ, ಕೌಶಲ್ಯ ಕೇಂದ್ರವಾಗಿ ರೂಪಿಸಿ, ಮಕ್ಕಳ ಸ್ನೇಹಿ ಪಂಚಾಯತ್ ಪರಿಕಲ್ಪನೆಗೆ ನಿಜ ಅರ್ಥ ನೀಡುವಲ್ಲಿ ಮುನ್ನುಡಿ ಬರೆದು, ಹಲವು ಯೋಜನೆಗಳನ್ನು ಹಾಕಿಕೊಂಡು ಮುನ್ನಡೆಯುತ್ತಿದೆ. ಅವರ ಈ ಪ್ರಯತ್ನಕ್ಕೆ ಜಿಲ್ಲಾ ಪಂಚಾಯತ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಿಕ್ಷಣ ಇಲಾಖೆ ಹೀಗೆ ಮಕ್ಕಳಿಗೆ ನೇರವಾಗಿ ಸಂಬಂಧಿಸಿದ ಪ್ರತಿಯೊಬ್ಬರು ಕೈಜೋಡಿಸಿ ಇದನ್ನು ಸಾಕಾರಗೊಳಿಸಬೇಕಾಗಿದೆ. ಆದಷ್ಟು ಬೇಗ ಅದು ಕೈಗೂಡಲಿ ಎಂಬ ಆಶಯ. ◆



# ರಾಜ್ಯ ಜೈವಿಕ ಇಂಧನ ಅಭಿವೃದ್ಧಿ

ವರದಿ

ದಯಾನಂದ

ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ

**ಗ್ರಾಮೀಣ ಪ್ರದೇಶದ ಮಹಿಳಾ ಸ್ವ-ಸಹಾಯ ಗುಂಪುಗಳು ಹಾಗೂ ಗ್ರಾಮ ಅರಣ್ಯ ಸಮಿತಿಗಳನ್ನು ತೊಡಗಿಸಿಕೊಂಡು ಬೀಜ ಸಂಗ್ರಹಣೆ ಹಾಗೂ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ತೈಲೋತ್ಪಾದನೆ ಮತ್ತು ಬಳಕೆಯನ್ನು ಪ್ರೋತ್ಸಾಹಿಸಲು ಕಿರು ತೈಲೋತ್ಪಾದನಾ ಯಂತ್ರಗಳ ವಿತರಣೆಯನ್ನು "ಹೊಂಬೆಳಕು" ಯೋಜನೆ ರೂಪಿಸಲಾಗಿದ್ದು. ಈ ಯೋಜನೆಯಡಿ 14 ಕಿರು ತೈಲೋತ್ಪಾದನಾ ಘಟಕ್ರಗಳನ್ನು ಅರ್ಹ ಗುಂಪುಗಳಿಗೆ ವಿತರಿಸಲಾಗಿದೆ.**

## ಜೈವಿಕ ಇಂದನ

ರಾಜ್ಯದಲ್ಲಿ ಕರ್ನಾಟಕ ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿಗೆ ಕೈಗೊಂಡಿರುವ ನೀತಿ – 2009ನ್ನು ಜಾರಿಗೊಳಿಸಲು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯನ್ನು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಇಲಾಖೆಯಡಿ 2010 ರಲ್ಲಿ ರಚಿಸಲ್ಪಟ್ಟಿದೆ. ಮಂಡಳಿಯು ರಚನೆ ನಂತರ ರಾಜ್ಯದಲ್ಲಿ ಜೈವಿಕ ಇಂಧನ ಸಂಶೋಧನೆ, ಮಾಹಿತಿ ಹಾಗೂ ಪ್ರಾತ್ಯಕ್ಷಿಕೆ ಕೇಂದ್ರಗಳು, ಜೈವಿಕ ಇಂದನ ಉದ್ಯಾನಗಳು, ಕ್ಲೋನಲ್ ಆರ್ಚರ್ಡ್‌ಗಳು, ಸಂಶೋಧನೆ ಹಾಗೂ ಅಭಿವೃದ್ಧಿ ಚಟುವಟಿಕೆಗಳು, ಸಮುದಯ ಸಹಭಾಗಿತ್ವ ಇವೇ ಮೊದಲಾದ ಚಟುವಟಿಕೆಗಳು

## ಉದ್ದೇಶಗಳು:

- ಜೈವಿಕ ಇಂಧನ ಮೂಲಗಳ ಅಭಿವೃದ್ಧಿ ಹಾಗೂ ನಿರಂತರ ಪೂರೈಕೆಗೆ ಪೂರಕ ಪರಿಸರ ನಿರ್ಮಾಣ.
- ರಾಜ್ಯ ಜೈವಿಕ ಇಂಧನ ನೀತಿಯ ಸಮರ್ಪಕ ಅನುಷ್ಠಾನ.
- ವಿವಿಧ ಪ್ರಾಂತ್ಯಗಳಿಗೆ ಸೂಕ್ತವಿರುವ ಜೈವಿಕ ಇಂಧನ ಬೆಳೆಗಳನ್ನು ಗುರುತಿಸಿ, ಅಗತ್ಯವಿರುವ ಭೂಮಿ ಗುರುತಿಸಿ ನೆಡುತೋಪನ್ನು ಬೆಳೆಸುವುದು.
- ಆಹಾರ ಭದ್ರತೆಗೆ ಧಕ್ಕೆಯಾಗದಂತೆ ನಿಗಾವಹಿಸಿ ಜೈವಿಕ ಇಂಧನ ಕ್ಷೇತ್ರ ಅಭಿವೃದ್ಧಿಪಡಿಸುವುದು.
- ಜೈವಿಕ ಇಂಧನ ಬೆಳೆ ಬೆಳೆಯಲು ರೈತರನ್ನು ಪ್ರೇರೇಪಿಸುವುದು, ಕೃಷಿಗೆ ಪೂರಕವಾದ ಕಾರ್ಯಕ್ರಮ ಅನುಷ್ಠಾನದಿಂದ ಗ್ರಾಮೀಣ ಪ್ರದೇಶದ ಜನತೆಗೆ ಅಧಿಕ ಉದ್ಯೋಗ ಸೃಷ್ಟಿಸುವುದು.
- ಮೌಲ್ಯವರ್ಧನಾ ಚಟುವಟಿಕೆ ಕೈಗೊಳ್ಳುವ ಮೂಲಕ ರೈತರ ಕೃಷಿ ಆದಾಯ ಹೆಚ್ಚಿಸುವುದು.
- ಜೈವಿಕ ಇಂಧನಕ್ಕೆ ಅಗತ್ಯವಿರುವ ಮಾರುಕಟ್ಟೆ ವ್ಯವಸ್ಥೆ ರೂಪಿಸುವುದು.
- ಸಂಶೋಧನೆಗೆ ಪ್ರೋತ್ಸಾಹ ನೀಡುವುದು.
- ಖಾಸಗಿ ಕಂಪನಿಗಳಿಂದ ಬಂಡವಾಳ ತೊಡಗಿಸುವಿಕೆ, ಸಹಭಾಗಿತ್ವಕ್ಕೆ ರೂಪುರೇಷೆ, ವ್ಯಾಪಾರ ವಹಿವಾಟಿಗೆ ಸಂಬಂಧಿಸಿದ ತೆರಿಗೆ, ಜೈವಿಕ ಎಥೆನಾಲ್ ಹಾಗೂ ಜೈವಿಕ ಡೀಸೆಲ್ ಮಿಶ್ರಿತ ಇಂಧನದ ಬಳಕೆಗೆ ಸಂಬಂಧಿಸಿದ ಸರಳ ಮಾರ್ಗಗಳನ್ನು ಜಾರಿಗೊಳಿಸುವುದು.
- ಮಾಹಿತಿ ಹಾಗೂ ತಂತ್ರಜ್ಞಾನಗಳ ಬಳಕೆಯಿಂದ ಜೈವಿಕ ಇಂಧನ ಕ್ಷೇತ್ರ ಅಭಿವೃದ್ಧಿಗೊಳಿಸುವುದು.

## ಜೈವಿಕ ಇಂಧನ ಅಭಿವೃದ್ಧಿ ಚಟುವಟಿಕೆಗಳ ಅನುಷ್ಠಾನ :

### ■ ಜೈವಿಕ ಇಂಧನ ಅರಣ್ಯೀಕರಣ

ಭಾರತೀಯ ವಿಜ್ಞಾನ ಸಂಸ್ಥೆ (ಐ.ಐ.ಎಸ್‌ಸಿ) ಆವರಣ ಚಳ್ಳಕೆರೆಯಲ್ಲಿ 10000 ಸಸಿಗಳ ನೆಡುತೋಪು ಬೆಳಸಲಾಗಿದ್ದುನೆಡುತೋಪುಗಳನ್ನು ಉತ್ತಮವಾಗಿ ಪೋಷಿಸಿ ನಿರ್ವಹಿಸುವ ಜವಾಬ್ದಾರಿಯನ್ನು ಭಾರತೀಯ ವಿಜ್ಞಾನ ಸಂಸ್ಥೆಗೆ ವಹಿಸಲಾಗಿದೆ.




### ■ ಜೈವಿಕ ಇಂಧನ ಸಂಶೋಧನೆ, ಮಾಹಿತಿ ಹಾಗೂ ಪ್ರಾತ್ಯಕ್ಷಿಕೆ ಕೇಂದ್ರಗಳು

ರಾಜ್ಯದ 30 ಜಿಲ್ಲೆಗಳಲ್ಲಿ 32 ಮಾಹಿತಿ ಹಾಗೂ ಪ್ರಾತ್ಯಕ್ಷಿಕೆ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ ರೈತರಿಂದ ಬೀಜ ಸಂಗ್ರಹಣೆ, ಬಯೋಡೀಸಲ್ ಉತ್ಪಾದನೆ, ಮೌಲ್ಯವರ್ಧನೆ, ಮಾಹಿತಿ, ತರಬೇತಿ ಹಾಗೂ ಸಂಶೋಧನಾ ಚಟುವಟಿಕೆಗಳು ನಡೆಯುತ್ತಿವೆ.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ನೂತನ ಜೈವಿಕ ಇಂಧನ ಸಂಶೋದನೆ, ಮಾಹಿತಿ ಹಾಗೂ ಪ್ರಾತ್ಯಕ್ಷಿಕೆ ಕೇಂದ್ರದ ಆರಂಭ ಕಾರ್ಯ ಪ್ರಗತಿಯಲ್ಲಿದ್ದು ಇದರಿಂದ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳು, ಅನುಷ್ಠಾನಾಧಿಕಾರಿಗಳು ಹಾಗೂ ಇತರರಿಗೆ ಕೇಂದ್ರದ ಪ್ರಯೋಜನ ದೊರೆಯಲಿದೆ.

### ■ ಜೈವಿಕ ಇಂಧನ ಉದ್ಯಾನಗಳು

ಜೈವಿಕ ಇಂಧನ ತರಬೇತಿ, ಸಂಶೋಧನೆ, ಸಂಸ್ಕರಣೆ, ಅಧಿಕ ಇಳುವರಿ ನೀಡುವ ತಳಿಗಳ ಅಭಿವೃದ್ಧಿ, ರೈತರ ಗುಂಪುಗಳ ರಚನೆ ಮೊದಲಾದ ಜೈವಿಕ ಇಂಧನ ಸಮಗ್ರ ಚಟುವಟಿಕೆಗಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವ್ಯಾಪ್ತಿಯ ಹಾಸನದ ಮಡೇನೂರು, ರಾಯಚೂರು ಕೃಷಿ ವಿಶ್ವವಿದ್ಯಾಲಯ ವ್ಯಾಪ್ತಿಯ ಯಾದಗಿರಿ ಜಿಲ್ಲೆ ತಿಂತಿಣಿ ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾಲಯಗಳಲ್ಲಿ 3 ಜೈವಿಕ ಇಂಧನ ಉದ್ಯಾನಗಳು ಕಾರ್ಯನಿರತವಾಗಿರುತ್ತದೆ

### ■ ಕ್ಲೋನಲ್ ಆರ್ಚರ್ಡ್‌ಗಳು

ಉತ್ತಮ ತಳಿಯ ಜೈವಿಕ ಇಂಧನ ಸಸಿಗಳ ಅಭಿವೃದ್ಧಿಗಾಗಿ ಹಾಗೂ ಸಂರಕ್ಷಣೆಗಾಗಿ ಅರಣ್ಯ ಇಲಾಖೆಯ ಸಹಯೋಗದೊಂದಿಗೆ 3 ಅರಣ್ಯ ವಲಯಗಳ 9 ಸ್ಥಳಗಳಲ್ಲಿ ಕ್ಲೋನಲ್ ಆರ್ಚರ್ಡ್‌ಗಳನ್ನು ನಿರ್ಮಾಣ ಮಾಡಲಾಗಿದ್ದು. ಪ್ರತಿ ಕ್ಲೋನಲ್ ಆರ್ಚರ್ಡ್ 25.00 ಹೆ. ಪ್ರದೇಶದಲ್ಲಿ ಗುಣಮಟ್ಟದ ಸಸಿಗಳ ಅಭಿವೃದ್ಧಿ ಮತ್ತು ಸಂಶೋಧನಾ ಕಾರ್ಯಗಳನ್ನು ನಡೆಸುತ್ತಿವೆ.

### ■ "ಹೊಂಬೆಳಕು" ಯೋಜನೆ

ಗ್ರಾಮೀಣ ಪ್ರದೇಶದ ಮಹಿಳಾ ಸ್ವ-ಸಹಾಯ ಗುಂಪುಗಳು ಹಾಗೂ ಗ್ರಾಮ ಅರಣ್ಯ ಸಮಿತಿಗಳನ್ನು ತೊಡಗಿಸಿಕೊಂಡು ಬೀಜ ಸಂಗ್ರಹಣೆ ಹಾಗೂ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ತೈಲೋತ್ಪಾದನೆ ಮತ್ತು ಬಳಕೆಯನ್ನು ಪ್ರೋತ್ಸಾಹಿಸಲು ಕಿರು ತೈಲೋತ್ಪಾದನಾ ಯಂತ್ರಗಳ ವಿತರಣೆಯನ್ನು "ಹೊಂಬೆಳಕು" ಯೋಜನೆ ರೂಪಿಸಲಾಗಿದ್ದು. ಈ ಯೋಜನೆಯಡಿ 14 ಕಿರು ತೈಲೋತ್ಪಾದನಾ ಘಟಕ್ರಗಳನ್ನು ಅರ್ಹ ಗುಂಪುಗಳಿಗೆ ವಿತರಿಸಲಾಗಿದೆ. ಈ ಮೂಲಕ ಗ್ರಾಮೀಣ ಪ್ರದೇಶದಿಂದ ಜೈವಿಕ ಇಂಧನ ಬೀಜಗಳನ್ನು ಬೇರೆ ಸ್ಥಳಗಳಿಗೆ ಸಾಗಿಸುವ ಬದಲಾಗಿ ಸ್ಥಳೀಯವಾಗಿ ತೈಲೋತ್ಪಾದನೆ ಮಾಡುವುದು ಮತ್ತು ಹಿಂಡಿಯನ್ನು ಸಾವಯವ ಗೊಬ್ಬರವಾಗಿ ಬಳಸಲು ಉತ್ತೇಜನ ನೀಡಲಾಗುತ್ತಿದೆ.

### ■ "ಹೊಂಗಿರಣ" ಯೋಜನೆ :

ಜೈವಿಕ ಇಂಧನ ಕ್ಷೇತ್ರಕ್ಕೆ ಸಂಬಂಧಿಸಿದ ಸಮಗ್ರ ಮಾಹಿತಿ ಹಾಗೂ ವ್ಯಾಪಾರ ವಹಿವಾಟಿಗಾಗಿ ಮಳಿಗೆಗಳನ್ನು ಆರಂಭಿಸಲು "ಹೊಂಗಿರಣ" ಯೋಜನೆ ಜಾರಿಗೊಳಿಸಿದ್ದು

ಈ ಮಾರಾಟ ಮಳಿಗೆಯಲ್ಲಿ ಜೈವಿಕ ಇಂಧನ ಬೀಜ, ಎಣ್ಣೆ, ಹಿಂಡಿ ಇತ್ಯಾದಿಗಳಿಗೆ ಮಾರುಕಟ್ಟೆಯನ್ನು ಒದಗಿಸಲಾಗಿದೆ. ವಿಜಯಪುರ ಮತ್ತು ಶಿವಮೊಗ್ಗದಲ್ಲಿ ಪ್ರಾಯೋಗಿಕವಾಗಿ 02 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

### ▪ ಸಂಶೋಧನೆ ಹಾಗೂ ಅಭಿವೃದ್ಧಿ

ಕರ್ನಾಟಕ ರಾಜ್ಯ ವಿಜ್ಞಾನ ಹಾಗೂ ತಂತ್ರ ವಿದ್ಯಾ ಮಂಡಳಿ (ಕೆ.ಎಸ್.ಸಿ.ಎಸ್.ಟಿ)ಯ ಸಹಯೋಗದೊಂದಿಗೆ ರಾಜ್ಯದಲ್ಲಿ ವಿದ್ಯಾರ್ಥಿಗಳ ಸಂಶೋಧನಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದ್ದು. ಬಿ.ಇ. ಎಂ.ಟೆಕ್. ಹಾಗೂ ಎಂ.ಬಿ.ಎ ವಿದ್ಯಾರ್ಥಿಗಳ ಸಂಶೋಧನೆಗಳಿಗೆ ಮಂಡಳಿಯಿಂದ ಆರ್ಥಿಕ ನೆರವು ನೀಡಿದೆ. ಇದುವರೆವಿಗೂ 350ಕ್ಕೂ ಹೆಚ್ಚಿನ ವಿದ್ಯಾರ್ಥಿ ಸಂಶೋಧನೆ ರಾಜ್ಯ ಮಟ್ಟದ ವಿಚಾರ ಸಂಕೀರ್ಣದ ಹಾಗೂ ಸಂಶೋಧನಾ ಚಟುವಟಿಕೆಗಳನ್ನು ದಾಖಲಿಸಿ ಪ್ರಕಟಿಸಲಾಗಿದೆ.

### ▪ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸಮುದಾಯ ಪ್ರೋತ್ಸಹ

ಜೈವಿಕ ಇಂಧನ ಕಾರ್ಯಚಟುವಟಿಕೆಗಳಲ್ಲಿ ಸಮುದಾಯ ವನ್ನು ತೊಡಗಿಸುವ ನಿಟ್ಟಿನಲ್ಲಿ 12 ಜಿಲ್ಲೆಗಳಲ್ಲಿ 12 ಸ್ವಯಂ ಸೇವಾಸಂಸ್ಥೆಗಳು ಕಾರ್ಯನಿರತವಾಗಿವೆ. ರೈತರು, ಸ್ವ ಸಹಾಯ ಗುಂಪುಗಳು, ಗ್ರಾಮ ಅರಣ್ಯ ಸಮಿತಿಗಳು, ಜಲಾನಯನ ಸಮಿತಿಗಳು ಮೊದಲಾದ ಗುಂಪುಗಳೊಂದಿಗೆ ಕಾರ್ಯನಿರತವಾಗಿದ್ದು. ಜಾಗೃತಿ, ತರಬೇತಿ, ಬೀಜ ಸಂಗ್ರಹಣೆ, ಉಪ ಉತ್ಪನ್ನಗಳ ಬಳಕೆ ಮೊದಲಾದ ವಿಷಯಗಳ ಬಗ್ಗೆ ಉದ್ಯಾನವನ ಮತ್ತು ಪ್ರಾತ್ಯಕ್ಷಿಕೆ ಕೇಂದ್ರಗಳ ನೆರವಿನೊಂದಿಗೆ ತಾಂತ್ರಿಕ ತಿಳುವಳಿಕೆಗಳನ್ನು ಕೂಡ ಪಡೆಯುವಂತೆ ಮಾಡಲಾಗುತ್ತಿದೆ.

### ▪ ಜೈವಿಕ ಇಂಧನ ಸಂಶೋಧನೆ ಹಾಗೂ ಗುಣಮಟ್ಟ ಖಾತ್ರಿ ಪ್ರಯೋಗ ಶಾಲೆ

ಮಂಡಳಿ ಹಾಗೂ ಬೆಂಗಳೂರು, ಕೃಷಿ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಜೈವಿಕ ಇಂಧನ ಸಂಶೋಧನೆ ಹಾಗೂ ಗುಣಮಟ್ಟ ಖಾತ್ರಿ ಪ್ರಯೋಗ ಶಾಲೆಯನ್ನು ನೂತನವಾಗಿ ಆರಂಭಿಸಲಾಗಿದ್ದು. ಈ ಪ್ರಯೋಗಾಲಯವು ಜೈವಿಕ ಇಂಧನ ಕಚ್ಚಾವಸ್ತುಗಳು, ಉತ್ಪನ್ನಗಳು ಹಾಗೂ ಮೌಲ್ಯವರ್ಧನೆಗೆ ಸಂಬಂಧಿಸಿದ ಪರೀಕ್ಷೆಗಳನ್ನು ಕೈಗೊಳ್ಳುತ್ತಿದೆ ಹಾಗೂ ಗುಣಮಟ್ಟ ಪ್ರಮಾಣೀಕರಣ ಸಂಬಂಧ ಅಕ್ರಡಿಶನ್ ಕಾರ್ಯ ಪ್ರಗತಿಯಲ್ಲಿದೆ.

### ▪ ಜೈವಿಕ ಇಂಧನ ಉದ್ದಿಮೆ ಪ್ರೋತ್ಸಾಹ

ರಾಜ್ಯದಲ್ಲಿ ಬಯೋಡೀಸೆಲ್ ಉತ್ಪಾದಕ ಕಂಪನಿಗಳ ಪ್ರತಿನಿಧಿಗಳ ಸಭೆಯನ್ನು ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದ್ದು. ಕರಿದ ಎಣ್ಣೆ ಮರು ಬಳಕೆಯ ನಿರ್ಭಂಧ ಮತ್ತು ಬಯೊಡೀಸೆಲ್ ಉತ್ಪಾದನೆ ಸಲುವಾಗಿ ಸಂಗ್ರಹಣೆ ಕುರಿತು ಪುರಕ ವಾತಾವಾರಣಕ್ಕೆ ಪ್ರಯತ್ನಿಸಲಾಗುತ್ತಿದೆ. ಜೈವಿಕ ಇಂಧನ ಉತ್ಪಾದನೆ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಹೆಚ್ಚಿಸಲು ಕರ್ನಾಟಕ ಕೈಗಾರಿಕಾ ನೀತಿ 2020–25ರಲ್ಲಿ ಜೈವಿಕ ಇಂಧನ ಸೇರ್ಪಡೆಗೊಳ್ಳುವಂತೆಯೂ ಮಂಡಳಿಯಿಂದ ಪ್ರೋತ್ಸಾಹಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

### ▪ ಉದ್ಯಮ ಸ್ನೇಹಿ ಕೌಶಲ್ಯ ತರಬೇತಿ

ಬಯೋಡೀಸೆಲ್ ಉತ್ಪಾದನೆ ಹಾಗೂ ಉದ್ಯಮದಲ್ಲಿ ಆಸಕ್ತಿ ಹೊಂದಲಿಚ್ಚಿಸುವ ಯುವಕ ಯುವತಿಯರಿಗೆ ಆರು ದಿನಗಳ ಉದ್ಯಮ ಸ್ನೇಹಿ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಆಯೋಜಿಸಲಾಗಿರುತ್ತದೆ. ಈ ತರಬೇತಿಗಳಲ್ಲಿ ಪರಿಣಿತರಿಂದ ಉಪನ್ಯಾಸ, ಪ್ರಾಯೋಗಿಕ ತರಬೇತಿ, ಕ್ಷೇತ್ರ ವೀಕ್ಷಣೆ, ಮೌಲ್ಯಮಾಪನ ಮತ್ತು ಪ್ರಶಸ್ತಿ ಪ್ರಧಾನ ಮಾಡಲಾಗಿರುತ್ತದೆ.

## ಉಪಸಂಹಾರ

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿಯಲ್ಲಿ ರೈತರು, ಭೂ ರಹಿತರು, ಸ್ವ ಸಹಾಯ ಗುಂಪು, ಜಲಾನಯನ ಅಭಿವೃದ್ಧಿ ಸಂಘಗಳು, ಗ್ರಾಮ ಅರಣ್ಯ ಸಮಿತಿ, ಮೊದಲಾದ ಸಮುದಾಯ ಆಧಾರಿತ ಗುಂಪುಗಳನ್ನು ತೊಡಗಿಸಿಕೊಂಡು ಕಾರ್ಯನಿರ್ವಹಿಸಲು ಮಹತ್ವ ನೀಡಿರುತ್ತದೆ. ಜೈವಿಕ ಇಂಧನ ಸಂಪನ್ಮೂಲಗಳ ಅಭಿವೃದ್ಧಿ, ಸಂಸ್ಕರಣೆ ಹಾಗೂ ಬಳಕೆ ಸಂಬಂಧ ನಿರಂತರ ಕಾರ್ಯಚಟುವಟಿಕೆಗಳನ್ನು ರಾಜ್ಯಾದ್ಯಂತ ನಡೆಸಿಕೊಂಡು ಬಂದಿರುತ್ತದೆ. ಭಾರತ ಸರ್ಕರದ ಜೈವಿಕ ಇಂಧನ ನೀತಿ (National Policy on Biofuels-2018) ಮತ್ತು ಕರ್ನಾಟಕ ಕೈಗಾರಿಕಾ ನೀತಿ – 2020–25ರಲ್ಲಿ ಜೈವಿಕ ಇಂಧನ ಉದ್ಯಮ ಬೆಳವಣಿಗೆಗೆ ಪೂರಕ ವಾತಾವರಣ ಮತ್ತು ಪ್ರೋತ್ಸಹಗಳು ದೊರೆಯುವ ನಿಟ್ಟಿನಲ್ಲಿ ಶ್ರಮಿಸಿರುತ್ತದೆ. ಮುಂದಿನ ದಿನಗಳಲ್ಲಿ ಜೈವಿಕ ಇಂಧನ ಕ್ಷೇತ್ರದ ಬೆಳವಣಿಗೆಗೆ ರಾಜ್ಯವು ಎಲ್ಲಾ ಪಾಲುದಾರರನ್ನು ಒಗ್ಗೂಡಿಸಿ ಪ್ರಗತಿಯತ್ತ ಹೆಜ್ಜೆ ಹಾಕುವ ಗುರಿಯನ್ನು ಹೊಂದಿದೆ.

◆

ವರದಿ




**ಮಲ್ಲಿಕಾರ್ಜುನ್**

ಐಇಸಿ, ಎಕ್ಸ್‌ಪರ್ಟ್,
ಆರ್‌ಡಬ್ಲ್ಯುಎಸ್


**"ದೇಶದ ಪ್ರತಿ ಮನೆಗೆ ಶುದ್ಧ-ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವ ಮಹತ್ವಾಕಾಂಕ್ಷೆಯಿಂದ ಈ 'ಜಲ ಜೀವನ್ ಮಿಷನ್' ಎಂಬ ಯೋಜನೆಯನ್ನು ಜಾರಿಗೊಳಿಸಿದ್ದು, ಇದಕ್ಕಾಗಿ 3.60 ಲಕ್ಷ ಕೋಟಿ ಅನುದಾನವನ್ನು ಮೀಸಲಿಡಲಾಗಿದೆ. ಈ ಮಿಷನ್ ಅನುಷ್ಠಾನವು ಸಮುದಾಯದ ಕೈಯಲ್ಲಿದೆ, ಈ ಮಿಷನ್ ಅನ್ನು ಕಾರ್ಯಗತಗೊಳಿಸಲು ಗ್ರಾಮದ ಎಲ್ಲಾ ಸದಸ್ಯರು ಒಗ್ಗೂಡಬೇಕು. ನೀರಿನ ಪೈಪ್‌ಲೈನ್ ಮಾರ್ಗ, ನೀರಿನ ಕೊಯ್ಲು, ಕಾರ್ಯಾಚರಣೆ ಮತ್ತು ನಿರ್ವಹಣೆ ಕುರಿತು ನಿರ್ಧಾರಗಳನ್ನು ಜನರೇ ಮಾಡುತ್ತಾರೆ.**

# "ಮನೆ ಮನೆಗೆ ಗಂಗೆ ಯೋಜನೆ"

## "ನೀರು ಸಂತೋಷ, ಶಕ್ತಿ, ಆರೋಗ್ಯ ಮತ್ತು ಧರ್ಮಶ್ರದ್ಧೆಯ ಮೂಲ, ಮತ್ತು ಅದು ತಾಯಿಯಂತೆ ಪ್ರಾಣ ರಕ್ಷಕವಾಗಿದೆ "

'ವಿಶ್ವದಲ್ಲಿ ಪ್ರತಿಯೊಂದು ಜೀವಿಗೂ ನೀರು ಜೀವನಾಧಾರ' ನೀರು ಇರುವೆಡೆ ಭೂತಾಯಿಯು ಸದಾ ಹಸಿರಾಗಿರುವುದಲ್ಲದೆ ಸಕಲ ಜೀವಿಗಳಿಗೂ ನೆರವಾಗುತ್ತದೆ. ಜೀವನದ ಅತ್ಯಾವಶ್ಯಕ ವಸ್ತುಗಳಲ್ಲಿ ನೀರು ಕೂಡ ಒಂದಾಗಿದೆ. ಸಮರ್ಪಕ ಪ್ರಮಾಣದ ನೀರಿನ ಲಭ್ಯತೆ ಮಾನವನ ಪ್ರಗತಿಯಲ್ಲಿ ಅತ್ಯಂತ ಮಹತ್ವದ ಅಂಶವಾಗಿದೆ. ವಿಶ್ವದಲ್ಲಿ ಜನಸಂಖ್ಯೆ ಹೆಚ್ಚಳವಾಗುತ್ತಿದೆ. ಜನಸಂಖ್ಯೆ ಜೊತೆ ಜೊತೆಯಲ್ಲೇ ಆರ್ಥಿಕ ಚಟುವಟಿಕೆಗಳು ಕೂಡ ವಿಸ್ತರಣೆಗೊಳ್ಳುತ್ತಿವೆ. ಕೃಷಿ, ಕೈಗಾರಿಕೆ, ಗೃಹಬಳಕೆ, ಮನರಂಜನೆ, ಮೂಲಸೌಕರ್ಯ ಅಭಿವೃದ್ಧಿ ಹೀಗೆ ವಿವಿಧ ಕ್ಷೇತ್ರಗಳಲ್ಲಿ ನೀರಿನ ಬೇಡಿಕೆಯೂ ಹೆಚ್ಚಳವಾಗುತ್ತಿದ್ದು. ನೀರು ಲಭ್ಯವಾಗುವ ಮೂಲ ಎಷ್ಟು ಪ್ರಮಾಣದಲ್ಲಿತ್ತೋ ಅಷ್ಟೇ ಪ್ರಮಾಣದಲ್ಲಿದೆ. ನೀರು ಸೀಮಿತವಾಗಿ ಲಭ್ಯವಿರುವ ಕಾರಣ ಹಾಗೂ ಬೇಡಿಕೆಯಲ್ಲೂ ಏರಿಕೆ ಇರುವುದರಿಂದಾಗಿ ಕುಡಿಯುವ ನೀರಿನ ನಿರ್ವಹಣೆಯು ಸಂಕೀರ್ಣ ಸಮಸ್ಯೆಯಾಗಿದೆ ಇಂತಹ ನೀರನ್ನು ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಸಾರ್ವಜನಿಕ ಆರೋಗ್ಯದ ಅಡಿಪಾಯ ಎಂದರೆ ಶುದ್ಧ, ಕುಡಿಯುವ ನೀರಿನ ಬಳಕೆ. ಬಹುತೇಕ ಪ್ರಮುಖ ರೋಗಗಳು ನೀರಿನ ಮೂಲಕ ಹರಡುತ್ತವೆ. ಸುರಕ್ಷಿತ ನೀರನ್ನು ಉಪಯೋಗಿಸುವ ಮೂಲಕ ಜಗತ್ತಿನಲ್ಲಿ ಲಕ್ಷಾಂತರ ಮಕ್ಕಳ ಸಾವನ್ನು ತಡೆಯಬಹುದೆಂದು ವಿವಿಧ ಅಧ್ಯಯನಗಳು ತೋರಿಸಿಕೊಟ್ಟಿವೆ



### ಜಲ ಜೀವನ್ ಮಿಷನ್ ಗುರಿ:

2024 ರೊಳಗೆ 'ನಳ್ ಸೆ ಜಲ್' ನಳದ ಮೂಲಕ ಪ್ರತಿ ಮನೆಗೆ ಶುದ್ಧ-ಸುರಕ್ಷಿತ ಕುಡಿಯುವ ನೀರನ್ನು ಸಮರ್ಪಕ/ನಿಗದಿತ ಪ್ರಮಾಣದಲ್ಲಿ ಸರಬರಾಜು ಮಾಡುವ ಹಿತದೃಷ್ಟಿಯಿಂದ ಜಲ ಜೀವನ್ ಮಿಷನ್‌ಯಡಿಯಲ್ಲಿ ರಾಜ್ಯದಲ್ಲಿ 'ಮನೆ ಮನಗೆ ಗಂಗೆ'ಎಂಬ ವಿನೂತನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು. ಇದು ಬಡವರ ಆರೋಗ್ಯ ಸುಧಾರಣೆಯ ಪ್ರಮುಖ ಮಾರ್ಗ ಆಗಿದೆ, ಏಕೆಂದರೆ



ಸುರಕ್ಷಿತ ನೀರಿನ ಕೊರತೆಯ ಕರಿನೆರಳಲ್ಲಿ ಇರುವ ಬಡವರು ರೋಗಗಳಿಗೆ ಬಲಿಯಾಗುತ್ತಾರೆ. ಮತ್ತೊಂದು ಪ್ರಯೋಜನ ಎಂದರೆ ದೂರದ ಸ್ಥಳಗಳಿಂದ ಮನೆಗಳಿಗೆ ನೀರು ಹೊರುವ ಗ್ರಾಮೀಣ ಮಹಿಳೆಯರ ಸಂಕಷ್ಟವನ್ನು ಬಗೆಹರಿಸಿದಂತೆ ಆಗುತ್ತದೆ.

## ಯೋಜನೆಗಳ ಇತಿಹಾಸ :

ಸ್ವಾತಂತ್ರ್ಯದ ಬಳಿಕ ದೇಶದಲ್ಲಿ ರಾಜ್ಯಗಳು ಜನರಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ವಿವಿಧ ಗ್ರಾಮೀಣ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು. 1972ರಲ್ಲಿ ಭಾರತ ಸರ್ಕಾರವು ಕನಿಷ್ಠ ಅವಶ್ಯಕತೆ ಕಾರ್ಯಕ್ರಮದ ಭಾಗವಾಗಿ ವೇಗವರ್ಧಿತ ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮದ ಮೂಲಕ (ಎಆರ್‌ಡಬ್ಲ್ಯುಎಸ್‌ಪಿ) ರಾಜ್ಯಗಳಿಗೆ ಬೆಂಬಲವಾಗಿ ಕಾರ್ಯನಿರ್ವಹಿಸಿವೆ. ಗ್ರಾಮಗಳ ಪ್ರತಿಯೊಂದು ಕುಟುಂಬಗಳಿಗೂ ಕುಡಿಯಲು ಯೋಗ್ಯವಾದ ನೀರು ಲಭ್ಯವಾಗುವಂತೆ ಮಾಡುವ ರಾಜ್ಯ ಸರ್ಕಾರಗಳ ಪ್ರಯತ್ನಗಳಿಗೆ ಸಹಾಯಕವಾಗಿ ಭಾರತ ಸರ್ಕಾರವು ಅನೇಕ ಉಪಕ್ರಮಗಳನ್ನು ಕೈಗೊಂಡಿದೆ. ಅದೇ ರೀತಿಯಾಗಿ ಎಲ್ಲಾ ಮನೆಗಳೂ ಸುರಕ್ಷಿತ ಮತ್ತು ಅಗತ್ಯಕ್ಕೆ ತಕ್ಕಷ್ಟು ಪ್ರಮಾಣದ ಕುಡಿಯುವ ನೀರನ್ನು ಸಾಧ್ಯವಿರುವಷ್ಟು ತಮ್ಮ ಮನೆ ಅಂಗಳದಲ್ಲೇ ಒದಗಿಸುವಂತೆ ಮಾಡುವುದು ಅಂದಿನ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ (ಎನ್‌ಆರ್‌ಡಿಡಬ್ಲ್ಯೂಪಿ) 2017ರ ಆಶಯಗಳ ಲ್ಲೊಂದಾಗಿತ್ತು. 2030ರಲ್ಲಿ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯ (ಯುಎನ್ ಎಸ್‌ಡಿಜಿ6) ಜೊತೆಗೆ ಇದನ್ನು ಸಾಧಿಸುವ ಗುರಿಹೊಂದಲಾಗಿದೆ.

ಮಾನ್ಯ ಪ್ರಧಾನಮಂತ್ರಿಗಳು ಆಗಸ್ಟ್ -15, 2019 ರಂದು ಸ್ವಾತಂತ್ರ್ಯೋತ್ಸವದ ದಿನದಂದು ತಮ್ಮ ಭಾಷಣದಲ್ಲಿ "ದೇಶದ ಪ್ರತಿ ಮನೆಗೆ ಶುದ್ಧ-ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವ ಮಹತ್ವಾಕಾಂಕ್ಷೆಯಿಂದ ಈ 'ಜಲ ಜೀವನ್ ಮಿಷನ್' ಎಂಬ ಯೋಜನೆಯನ್ನು ಜಾರಿಗೊಳಿಸಿದ್ದು, ಇದಕ್ಕಾಗಿ 3.60 ಲಕ್ಷ ಕೋಟಿ ಅನುದಾನವನ್ನು ಮೀಸಲಿಡಲಾಗಿದೆ. ಈ ಮಿಷನ್ ಅನುಷ್ಠಾನವು ಸಮುದಾಯದ ಕೈಯಲ್ಲಿದೆ, ಈ ಮಿಷನ್ ಅನ್ನು ಕಾರ್ಯಗತಗೊಳಿಸಲು ಗ್ರಾಮದ ಎಲ್ಲಾ ಸದಸ್ಯರು ಒಗ್ಗೂಡಬೇಕು. ನೀರಿನ ಪೈಪ್‌ಲೈನ್ ಮಾರ್ಗ, ನೀರಿನ ಕೊಯ್ಲು, ಕಾರ್ಯಾಚರಣೆ ಮತ್ತು ನಿರ್ವಹಣೆ ಕುರಿತು ನಿರ್ಧಾರಗಳನ್ನು ಜನರೇ ಮಾಡುತ್ತಾರೆ ಮತ್ತು ಈ ಮಿಷನ್‌ನಲ್ಲಿ ನಮ್ಮ ಸಹೋದರಿಯರು ಬಹಳ ಮುಖ್ಯವಾದ ಪಾತ್ರವನ್ನು ವಹಿಸಬೇಕು. ಈ ಮಿಷನ್ ಮೂಲಕ, ನೀವು ಕೇವಲ ನೀರಿನ ಪೂರೈಕೆಯ ಸಮಸ್ಯೆಯನ್ನು ಪರಿಹರಿಸುವುದಷ್ಟೇ ಅಲ್ಲದೇ, ನೀರಿನೊಂದಿಗೆ ಬರುವ ರೋಗಗಳಾದ ಕಾಲರಾ, ಅತಿಸಾರ, ಮಿದುಳಿನ ಉರಿಯೂತ (ಎನ್ಸೆಫಾಲಿಟಿಸ್) ಮುಂತಾದುವುಗಳಿಂದ ಆರೋಗ್ಯಕ್ಕೆ ಆಗುವ ಅಪಾಯಗಳನ್ನು ಸಹ ಪರಿಹರಿಸುತ್ತೀರಿ. ಅಲ್ಲದೆ, ನಮ್ಮ ಜಾನುವಾರುಗಳಿಗೆ



ಸುರಕ್ಷಿತ ಮತ್ತು ಶುದ್ಧ ನೀರನ್ನು ಒದಗಿಸಿದಾಗ, ಅವುಗಳ ಆರೋಗ್ಯ ಸುಧಾರಿಸುವುದಷ್ಟೇ ಅಲ್ಲದೇ ಗ್ರಾಮೀಣ ಆರ್ಥಿಕತೆಗೆ ಲಾಭ ತಂದುಕೊಡುವಲ್ಲಿ ಗಣನೀಯ ಪಾತ್ರ ವಹಿಸುತ್ತದೆ.

## ಸಮುದಾಯದ ಕೊಡುಗೆ/ವಂತಿಗೆ

ನೀರು ಸರಬರಾಜು ವ್ಯವಸ್ಥೆಗಳಿಗೆ ಸಂಬಂಧಿಸಿದ ಎಲ್ಲಾ ನಿರ್ಧಾರಗಳಲ್ಲಿ ಸಮುದಾಯದ ಸಹಭಾಗಿತ್ವ, ಮಾಲೀಕತ್ವ ಮತ್ತು ಕೊಡುಗೆಯ ಅವಶ್ಯಕತೆಯಿದ್ದು. ಹೀಗಾಗಿ, ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳೊಂದಿಗೆ ಸಮುದಾಯ ನೇತೃತ್ವದ ಸಹಭಾಗಿತ್ವವು ಜಲ ಜೀವನ ಮಿಷನ್‌ನ ಉದ್ದೇಶಗಳನ್ನು ಸಾಧಿಸುವ ಪ್ರಮುಖ ಕಾರ್ಯತಂತ್ರವಾಗಿದೆ. ಜಲ ಜೀವನ ಮಿಷನ್‌ನ ವ್ಯಾಪ್ತಿಯಲ್ಲಿ, ಬೆಟ್ಟದ ಪ್ರದೇಶದ ರಾಜ್ಯಗಳು, ಈಶಾನ್ಯ ರಾಜ್ಯಗಳು ಮತ್ತು ಹಿಮಾಲಯದ ತಪ್ಪಲಿನ ರಾಜ್ಯಗಳು ಅಥವಾ ಗ್ರಾಮೀಣ ಜನಸಂಖ್ಯೆಯು 50% ಕ್ಕಿಂತ ಹೆಚ್ಚು ಪ.ಜಾ. / ಪ.ಪಂ. ಇರುವಲ್ಲಿ, ಸಮುದಾಯವು ಗ್ರಾಮ–ಮೂಲಸೌಕರ್ಯದ ಶೇ.5% ಅನ್ನು ನೀಡಬೇಕು ಮತ್ತು ಇತರ ಹಳ್ಳಿಗಳಿಗೆ ಇದು 10% ಆಗಿರುತ್ತದೆ. ಕೊಡುಗೆ ನಗದು ಮತ್ತು / ಅಥವಾ ಪರಿಕರಗಳು ಮತ್ತು / ಅಥವಾ ಕಾರ್ಮಿಕ ಶ್ರಮದ ರೂಪದಲ್ಲಿರಬಹುದು ಸಮುದಾಯಕ್ಕೆ ನಗದು ರೂಪದಲ್ಲಿ ಒಮ್ಮೆಗೆ ಕೊಡುಗೆ ನೀಡಬೇಕಾದ ಹೊರೆಯನ್ನು ಕಡಿಮೆ ಮಾಡಲು, ಗ್ರಾಮ ಪಂಚಾಯಿತಿ ಮತ್ತು / ಅಥವಾ ಅದರ ಉಪಸಮಿತಿ ಅಂದರೆ ಗ್ರಾ.ನೀ.&ನೈ.ಸ. / ಜಲಸಮಿತಿ / ಬಳಕೆದಾರ ಸಮೂಹ, ಮುಂತಾದವು ಮನೆಗಳಿಗೆ ಕಂತುಗಳ ರೂಪದಲ್ಲಿ ಪಾವತಿಸುವ ಅವಕಾಶ ಕಲ್ಪಿಸಬಹುದು. ಮುಂಗಡ ಕೊಡುಗೆ ನೀಡುವಂತೆ ಸ್ಥಳೀಯ ಸಂಸ್ಥೆಗಳು, ಲೋಕೋಪಕಾರಿಗಳು, ಸಮುದಾಯ ಆಧಾರಿತ ಸಂಸ್ಥೆಗಳ ಕೊಡುಗೆಗಳನ್ನು ಪ್ರೋತ್ಸಾಹಿಸಬೇಕು. ಕೆಲಸವನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ನಂತರ, ಸಮುದಾಯವು ಹಂತಹಂತವಾಗಿ ಯೋಜನೆಯನ್ನು ಆಯೋಗದ ನಂತರ ಆಯಾ ಗ್ರಾಮದ ನೀರು ಸರಬರಾಜು ಯೋಜನೆಯಲ್ಲಿ ಬಂಡವಾಳ ವೆಚ್ಚದ 10% ಗೆ ನಿಗದಿಪಡಿಸುತ್ತದೆ



## ಗ್ರಾಮ ಪಂಚಾಯಿತಿಯ ಜವಾಬ್ದಾರಿ

ಜಲ ಜೀವನ ಮಿಷನ್‌ನಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ ಬಹಳ ಮುಖ್ಯ. ಭಾರತದ ಸಂವಿಧಾನದ 73ನೇ ತಿದ್ದುಪಡಿಯಡಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ 'ಕುಡಿಯುವ ನೀರು ಮತ್ತು ನೈರ್ಮಲ್ಯ' ನಿರ್ವಹಣೆಯನ್ನು ನಿಯೋಜಿಸಲಾಗಿದೆ.

## ಗ್ರಾಮ ಪಂಚಾಯಿತಿಯ ಮುಖ್ಯ ಕಾರ್ಯ

- ಜಲ ಸಮಿತಿಯ ರಚನೆ ಮತ್ತು ಗ್ರಾಮ ಮಟ್ಟದಲ್ಲಿ ನೀರು ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುವುದು. ಸದ್ಯದಲ್ಲಿರುವ ನೀರು ಸರಬರಾಜು ಮೂಲ ಸೌಕರ್ಯವನ್ನು ಮರುಹೊಂದಿಸುವ ಮತ್ತು ಹೆಚ್ಚಿಸುವ ಮೂಲಕ ಎಲ್ಲಾ ಮನೆಗಳಿಗೆ ನಲ್ಲಿ ಸಂಪರ್ಕವನ್ನು ಒದಗಿಸುವುದು;
- ತಾಂತ್ರಿಕ ಮತ್ತು ಆರ್ಥಿಕ ಸಹಾಯಕ್ಕಾಗಿ ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿಗೆ ಪ್ರಸ್ತಾವನೆಗಳನ್ನು ಸಲ್ಲಿಸುವುದು;
- ಜಲ ಸಮಿತಿಗಾಗಿ ಬ್ಯಾಂಕ್ ಖಾತೆಗಳನ್ನು ತೆರೆಯುವುದು ಮತ್ತು ಸಮುದಾಯದ ಕೊಡುಗೆಯ ಮತ್ತು ಇನ್ನಾವುದೇ ಕೊಡುಗೆಯನ್ನು ಸ್ವೀಕರಿಸುವುದು. ಸಮುದಾಯದ ವಂತಿಗೆ/ಕೊಡುಗೆಯನ್ನು ಸ್ವೀಕರಿಸಲು (ಗ್ರಾಮದೊಳಗಿನ ಮೂಲಸೌಕರ್ಯ ರಚನೆಗೆ), ಪ್ರೋತ್ಸಾಹ ಧನ ಮತ್ತು ಕಾರ್ಯಾಚರಣೆ ಮತ್ತು ನಿರ್ವಹಣೆಯ ಅವಶ್ಯಕತೆಗಳನ್ನು ಪೂರೈಸಲು ಮನೆಯವರು ಒದಗಿಸುವ ಬಳಕೆದಾರರ ಶುಲ್ಕಕ್ಕಾಗಿ ಪ್ರತ್ಯೇಕ ಬ್ಯಾಂಕ್ ಖಾತೆಗಳನ್ನು ತೆರೆಯಬೇಕಾಗುತ್ತದೆ. ವ್ಯವಹಾರದಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಲು ಬ್ಯಾಂಕುಗಳ ವಿವರಗಳು ಮತ್ತು ಖಾತೆ ಸಂಖ್ಯೆಯನ್ನು ಸಾರ್ವಜನಿಕಗೊಳಿಸಬೇಕಾಗುತ್ತದೆ;
- ನೀರು ಸರಬರಾಜು ಯೋಜನೆಯ ಪೂರ್ವ ಸಿದ್ಧತೆ, ಅನುಷ್ಠಾನ, ಕಾಲಕಾಲಕ್ಕೆ ಉಸ್ತುವಾರಿ ಮತ್ತು ಮೇಲ್ವಿಚಾರಣೆ;
- ಕೆಲಸ ಪೂರ್ಣಗೊಂಡ ನಂತರ, ಜಿಲ್ಲಾ ನೀರು ಮತ್ತು ನೈರ್ಮಲ್ಯ ಇಲಾಖೆಯೊಂದಿಗೆ ಪತ್ರವ್ಯವಹಾರ ನಡೆಸುವುದು ಮತ್ತು ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆಯವ್ಯವಸ್ಥೆ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು; ಮತ್ತು
- ಪ್ರತ್ಯೇಕ ಸಂಸ್ಕರಣಾ ಘಟಕಗಳ (ಆರ್‌ಓ ವ್ಯವಸ್ಥೆಗಳು) ಸ್ಥಾಪನೆಯನ್ನು ತಪ್ಪಿಸಲು ನಿಯಮಿತವಾಗಿ ನೀರಿನ ಗುಣಮಟ್ಟದ ಮೇಲ್ವಿಚಾರಣೆ ಮತ್ತು ಕಣ್ಗಾವಲು. ◆

# ಗ್ರಾಮ ಪಂಚಾಯಿತಿ ಕೆಡಿಪಿ ಸಭೆ

ವರದಿ

ಕೆ. ಯಾಲಕ್ಕಿ ಗೌಡ

ನಿರ್ದೇಶಕರು(ಅಭಿವೃದ್ಧಿ)
ಕರ್ನಾಟಕ ಪಂಚಾಯತ್ ರಾಜ್
ಆಯುಕ್ತಾಲಯ

**ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೋಬಳಿ/ಗ್ರಾಮ ಮಟ್ಟದ ಅಧಿಕಾರಿಗಳು ಗ್ರಾಮ ಪಂಚಾಯಿತಿ ಕೆ.ಡಿ.ಪಿ ಸಭೆಗೆ ಹಾಜರಾಗಲು ತೊಂದರೆಯಾಗದಿರುವಂತೆ ಗ್ರಾಮ ಪಂಚಾಯಿತಿ ಮಟ್ಟದ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ(ಕೆ.ಡಿ.ಪಿ.) ಗಳ ಪ್ರಗತಿ ಪರಿಶೀಲನಾ ಸಮಿತಿಯ ಸಭೆಯ ವೇಳಾಪಟ್ಟಿಯನ್ನು ತಯಾರಿಸಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.**

ಸಂವಿಧಾನದ 73ನೇ ತಿದ್ದುಪಡಿಯ ಆಶೋತ್ತರಗಳಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲಾಗಿದ್ದು, ಅದರಂತೆ ಬಡತನ ನಿರ್ಮೂಲನೆ, ಮಕ್ಕಳ ಮತ್ತು ಮಹಿಳೆಯರ ಆರೋಗ್ಯ, ಶೈಕ್ಷಣಿಕ ಕಾರ್ಯಕ್ರಮಗಳ ಅನುಷ್ಠಾನ, ಪಡಿತರ ಧಾನ್ಯಗಳ ಸಮರ್ಪಕ ವಿತರಣೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಾರ್ಯನಿರ್ವಹಣೆ, ಪಶುಪಾಲನಾ ಚಿಕಿತ್ಸಾ ಕೇಂದ್ರಗಳ ಕಾರ್ಯನಿರ್ವಹಣೆ, ಗ್ರಾಮ ಪಂಚಾಯಿತಿ ಹಂತದಲ್ಲಿನ ವಿವಿಧ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಮತ್ತು ತರಗತಿಗಳ ನಿರ್ವಹಣೆ, ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಕಾರ್ಯಚಟುವಟಿಕೆಗಳ ಅನುಷ್ಠಾನ ಹಾಗೂ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸುವ ಬಗ್ಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು(20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಮಿತಿಯ ಸಭೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿರುತ್ತದೆ. ಅದರಂತೆ ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕ್ರಮ ಕೈಗೊಳ್ಳುವುದು.

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ(ಕೆ.ಡಿ.ಪಿ.)ಗಳ ಪ್ರಗತಿ ಪರಿಶೀಲನಾ ಸಮಿತಿಯ ಸಭೆಯನ್ನು ಏಪ್ರಿಲ್, ಜುಲೈ, ಅಕ್ಟೋಬರ್ ಮತ್ತು ಡಿಸೆಂಬರ್ ತಿಂಗಳ ಮೊದಲ ವಾರದಲ್ಲಿ ಕಡ್ಡಾಯವಾಗಿ ನಡೆಸುವುದು. ಗ್ರಾಮ ಪಂಚಾಯಿತಿ ಮಟ್ಟದ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಮಿತಿಯ ಸಭೆಯ ನಡವಳಿಯನ್ನು ಸಭೆ ನಡೆದ ದಿನಾಂಕದಿಂದ 10 ದಿನಗಳೊಳಗಾಗಿ ಕಡ್ಡಾಯವಾಗಿ ಪಂಚತಂತ್ರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು. ಗ್ರಾಮ ಪಂಚಾಯಿತಿ ಮಟ್ಟದ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಮಿತಿಯ ಸಭೆಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿ/ನೌಕರರು ಕಡ್ಡಾಯವಾಗಿ ಹಾಜರಾಗಲು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿರ್ದೇಶನ ನೀಡುವುದು. ಗೈರುಹಾಜರಾಗುವ ಇಲಾಖೆಗಳ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮಕ್ಕೆ ಶಿಫಾರಸ್ಸು ಮಾಡಲು ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ಕೈಗೊಳ್ಳುವುದು.

ಗ್ರಾಮ ಪಂಚಾಯಿತಿ ಮಟ್ಟದ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಮಿತಿಯ ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸಲು ಕ್ರಮವಹಿಸುವುದು. ಈಗ ಹೊಸದಾಗಿ ಗ್ರಾಮ ಪಂಚಾಯಿತಿ ಸದಸ್ಯರ ಆಯ್ಕೆಯಾಗಿದ್ದು, ಅಧ್ಯಕ್ಷ/ಉಪಾಧ್ಯಕ್ಷರ ಚುನಾವಣೆ ಮುಗಿಯುವ ಹಂತದಲ್ಲಿರುತ್ತದೆ. ಆದ್ದರಿಂದ ನೂತನವಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ ಸಮಿತಿ ರಚಿಸಲು ಮತ್ತು ಕಾರ್ಯನಿರ್ವಹಣೆ ಮಾಡಲು ತ್ವರಿತವಾಗಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಬಂಧಿಸಿದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡುವುದು.

1. ಪ್ರತಿ ತಾಲ್ಲೂಕಿಗೆ ಒಬ್ಬರಂತೆ,

i ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ(ಆಡಳಿತ/ಅಭಿವೃದ್ಧಿ)

ii ಮುಖ್ಯ ಲೆಕ್ಕಾಧಿಕಾರಿ, ಮುಖ್ಯ ಯೋಜನಾಧಿಕಾರಿ

iii ಯೋಜನಾ ನಿರ್ದೇಶಕರು

iv ಸಹಾಯಕ ಕಾರ್ಯದರ್ಶಿ

v ಸಹಾಯಕ ಯೋಜನಾಧಿಕಾರಿ

vi ಲೆಕ್ಕಾಧಿಕಾರಿ ಮತ್ತು ಅಗತ್ಯವಿದ್ದಲ್ಲಿ

vii (ತಾಲ್ಲೂಕುಗಳು ಹೆಚ್ಚಿದ್ದಲ್ಲಿ) ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕೆ.ಡಿ.ಪಿ. ಸಮಿತಿ ಸಭೆಯ ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲು (ಈವರೆಗೆ ಆದೇಶ ಹೊರಡಿಸದಿದ್ದಲ್ಲಿ) ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ವಹಿಸುವುದು.

ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೋಬಳಿ/ಗ್ರಾಮ ಮಟ್ಟದ ಅಧಿಕಾರಿಗಳು ಗ್ರಾಮ ಪಂಚಾಯಿತಿ ಕೆ.ಡಿ.ಪಿ ಸಭೆಗೆ ಹಾಜರಾಗಲು ತೊಂದರೆಯಾಗದಿರುವಂತೆ ಗ್ರಾಮ ಪಂಚಾಯಿತಿ ಮಟ್ಟದ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ(ಕೆ.ಡಿ.ಪಿ.)ಗಳ ಪ್ರಗತಿ ಪರಿಶೀಲನಾ ಸಮಿತಿಯ ಸಭೆಯ ವೇಳಾಪಟ್ಟಿಯನ್ನು ತಯಾರಿಸಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸದರಿ ದಿನಾಂಕಗಳೊಳಗೆ ಗ್ರಾಮ ಪಂಚಾಯಿತಿಗಳು ಕೆ.ಡಿ.ಪಿ ಸಭೆಗಳನ್ನು ಆಯೋಜಿಸಲು ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವುದು. ಈ ವಿಷಯವನ್ನು ತಾಲ್ಲೂಕು ಮಟ್ಟದ ನೋಡಲ್ ಅಧಿಕಾರಿಗಳ ಗಮನಕ್ಕೆ ತಂದು ಪಂಚತಂತ್ರದಲ್ಲಿ ಅಪ್‌ಲೋಡ್ ಮಾಡುವುದು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಂಡ್ಯ ಜಿಲ್ಲಾ ಪಂಚಾಯಿತಿ ಮಾದರಿಯಲ್ಲಿ (276–281 ಪುಟಗಳ ಕೇಂದ್ರ/ರಾಜ್ಯ/ಜಿಲ್ಲಾ ವಲಯಗಳ ಮಾಹಿತಿಯನ್ನು ಈಗಾಗಲೇ ನೀಡಲಾಗಿದ್ದು, ಮತ್ತೊಮ್ಮೆ ಮಾಹಿತಿಗಾಗಿ ಹಾಗೂ ಕೆ.ಡಿ.ಪಿ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಮಂಡ್ಯ ಜಿಲ್ಲೆಯ ಮಾದರಿ ವೇಳಾಪಟ್ಟಿಯನ್ನೂ ಸಹ ಅಡಕವಿರಿಸಿದೆ) ಕೆ.ಡಿ.ಪಿ. ಸಮಿತಿ ಸಭೆಯ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯ ಏರ್ಪಡಿಸಿ ತಮ್ಮ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಇಲಾಖಾವಾರು ಮಾಹಿತಿ ಕ್ರೋಢೀಕರಿಸಲು ನಮೂನೆಗಳನ್ನು ನೀಡುವುದು. ದಿನಾಂಕ: 11.06.2019ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ನಮೂನೆ–1ನ್ನು ನೀಡಲಾಗಿದ್ದು ಉಲ್ಲೇಖ(2)ರ ಪತ್ರದಲ್ಲಿ ದಿನಾಂಕ: 04.11.2019ರಂದು ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಂತೆ 33 ನಮೂನೆಗಳನ್ನು ನೀಡಲಾಗಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ. ರಾಜ್) ರವರು ಆಯಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳೊಂದಿಗೆ ಜಂಟಿಯಾಗಿ ಸುತ್ತೋಲೆಯನ್ನು ಹೊರಡಿಸಲಾಗಿದ್ದು, ಸದರಿ ಸುತ್ತೋಲೆಗಳಲ್ಲಿ ಗ್ರಾ.ಪಂ. ವ್ಯಾಪ್ತಿಗೆ ಸಂಬಂಧಪಟ್ಟಂತೆ ಆಯಾ ಇಲಾಖೆಗಳ ಆದ್ಯತಾ ಪಟ್ಟಿ ಮಾಡುವಾಗ ಯಾವ ಅಂಶಗಳನ್ನು ಕೇಂದ್ರೀಕರಿಸಿ ಕ್ರಮವಹಿಸುವುದು. ಆದ್ದರಿಂದ ಮೇಲಿನ 04 (ಕ್ರ.ಸಂ.10–14) ಅಂಶಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ನೋಡಲ್ ಅಧಿಕಾರಿಗಳ ಗಮನಕ್ಕೆ ತರುವುದು ಮತ್ತು ಗ್ರಾಮ ಪಂಚಾಯಿತಿ ಸ್ಥಾಯಿ ಸಮಿತಿವಾರು ಕ್ರೋಢೀಕರಿಸುವುದು ಹಾಗೂ ತಮ್ಮ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸುವುದು.

ಒಂದು ಕೆ.ಡಿ.ಪಿ ಸಭೆಯ ನಂತರ ಎಲ್ಲಾ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳ ಸಂವಾದ ಕಾರ್ಯಕ್ರಮವನ್ನು ಆಯೋಜಿಸಿ, ಸದರಿ ಸಂವಾದದಲ್ಲಿ ಅಧ್ಯಕ್ಷರುಗಳು ತಮ್ಮ ಅನುಭವ ಮತ್ತು ಅನಿಸಿಕೆಗಳನ್ನು ಹಂಚಿಕೊಳ್ಳಲು ಅವಕಾಶ ನೀಡುವುದು. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ರವರು ಗ್ರಾ.ಪಂ. ಮಟ್ಟದ ಕೆ.ಡಿ.ಪಿ ಸಭೆಗಳಿಗೆ ಸಂಬಂಧಪಟ್ಟಂತೆ ಮೇಲಿಂದ ಮೇಲೆ ಸಭೆಗಳು ನಡೆದಿರುವ ಬಗ್ಗೆ ಮಾಹಿತಿ ಹಾಗೂ ಕೆ.ಡಿ.ಪಿ. ಸಭೆಗಳು ಆಯೋಜಿಸಿದ ನಂತರ ಆಗಿರುವ ಸಕಾರಾತ್ಮಕ ಬದಲಾವಣೆಗಳ ಬಗ್ಗೆ ಮಾಹಿತಿ ಕೋರುತ್ತಿರುವುದರಿಂದ ಸದರಿ ಸಕಾರಾತ್ಮಕ ಬದಲಾವಣೆಗಳ ಮತ್ತು ಯಶೋಗಾಥೆಗಳ ಪಟ್ಟಿ ಮಾಡುವುದು ಮತ್ತು ಕ್ರೋಢೀಕರಿಸಿ ಗ್ರಾ.ಪಂ./ತಾ.ಪಂ./ಜಿ.ಪಂ.ವಾರು ವರದಿಗಳನ್ನು ಸರ್ಕಾರಕ್ಕೆ ಮಾಹಿತಿಗಾಗಿ ಸಲ್ಲಿಸಲು ತಿಳಿಸಿದೆ.

◆

ವರದಿ

**ಕುಸುಮ ಹೆಚ್ ಎಸ್**

ತಾಲ್ಲೂಕು ಐಇಸಿ ಸಂಯೋಜಕರು
ಪಾಂಡವಪುರ ತಾಲ್ಲೂಕು ಪಂಚಾಯಿತಿ
ಜಿಲ್ಲಾ ಪಂಚಾಯತ್

# ಕೆರೆಹೂಳೆತ್ತುವ ಕಾಮಗಾರಿ

ಮಂಡ್ಯ ಜಿಲ್ಲೆಯ ಪ್ರಮುಖ ಧಾರ್ಮಿಕ ಕೇಂದ್ರ ಮೇಲುಕೋಟೆಯು ಐತಿಹಾಸಿಕ ಕಲ್ಯಾಣಿಗಳಿರುವ ಪುಣ್ಯಭೂಮಿ. ಸುಮಾರು 500 ವರ್ಷಗಳ ಹಿಂದೆ ಮೈಸೂರು ಸಂಸ್ಥಾನದ ಮಹಾರಾಜರು ನಿರ್ಮಿಸಿದ್ದ ಕಲ್ಯಾಣಿಯು ಈ ನೆಲದ ಪುಣ್ಯ ತೀರ್ಥಗಳಲ್ಲಿ ಒಂದು. ಸರಿಯಾದ ನಿರ್ವಹಣೆಯಿಲ್ಲದೆ 200 ವರ್ಷಗಳಿಂದ ಹೂಳು ತುಂಬಿದ್ದು. ಸ್ಥಳೀಯ ಯುವಕರ ತಂಡ ಮಹಾತ್ಮ ಗಾಂಧಿ ನರೇಗಾ ಯೋಜನೆಯ ನೆರವಿನಿಂದ ಈ ಕಲ್ಯಾಣಿಗೆ ಪುನಶ್ಚೇತನ ನೀಡಲಾಗಿದೆ.

ಕಲ್ಯಾಣಿಯ ಕಾಯಕಲ್ಪಕ್ಕೆ ಮುಂದಾದ ಗ್ರಾಮದ ಎಂಸಿಸಿ ಕ್ರಿಕೆಟ್ ತಂಡದ ಯುವಕರು ಹಾಗೂ ಗ್ರಾಮದ ಮಹಿಳೆಯರಿಗೆ ಇಲ್ಲಿನ ಗ್ರಾಮ ಪಂಚಾಯತಿಯು ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನೆರವಿನ ಹಸ್ತ ನೀಡಿತು. ಈ ಯೋಜನೆಯಡಿ ಹೊಸದಾಗಿ ಉದ್ಯೋಗ ಚೀಟಿ ಪಡೆದ 10 ಮಂದಿ ಯುವಕರು ಹಾಗೂ 7 ಮಹಿಳೆಯರು ಸೇರಿ 17 ಮಂದಿ ಕಲ್ಯಾಣಿ ಹೂಳೆತ್ತುವ ಕಾಮಗಾರಿಯಲ್ಲಿ ತೊಡಗಿದರು.

ಪಂಚಾಯಿತಿಯು ನೀಡಿದ ರೂ.3.00 ಲಕ್ಷ ಅನುದಾನದ ಜೊತೆಗೆ ಕ್ರಿಕೆಟ್ ತಂಡದ ಯುವಕರೂ ತಮ್ಮ ಕೈಯಿಂದ ಒಂದು ಲಕ್ಷ ರೂಪಾಯಿ ವೆಚ್ಚ ಮಾಡಿ ಕಲ್ಯಾಣಿ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಸ್ಥಳೀಯ ಜನರೂ ಕೈಜೋಡಿಸಿ ಪುಣ್ಯ ತೀರ್ಥದಲ್ಲಿ ತುಂಬಿದ್ದ ಹೂಳು ತೆಗೆಯುವ ಕಾರ್ಯ ಮಾಡಿದ್ದಾರೆ.

ಫಲಶಾ ಕಲ್ಯಾಣಿಯು ಮೇಲುಕೋಟೆಯ ಅಷ್ಟ ತೀರ್ಥಗಳಲ್ಲಿ ಬಹುಮುಖ್ಯವಾದ ಕೊಳ. ಫಲಾಶ ಎಂದರೆ ಮುತ್ತುಗದ ಮರ. ಮುತ್ತುಗದ ಮರಗಳಿರುವ ಈ ಸ್ಥಳದಲ್ಲಿ ತೀರ್ಥವು ಉದ್ಭವವಾಗಿರುವುದರಿಂದ ಫಲಾಶತೀರ್ಥ ಎಂಬ ಹೆಸರು ಬಂದಿದೆ. ಕೊಳದ ಸುತ್ತ ಮಾವು ಮತ್ತು ನೇರಳೆ ಮರದಲ್ಲಿ ಬಿಡುವ ಫಲ ಪ್ರಾಣಿ–ಪಕ್ಷಿಗಳಿಗೆ ಆಹಾರವಾಗಿದೆ. ಪುರಾಣ ಕಾಲದಲ್ಲಿ ಅನೇಕ ಋಷಿ ಮುನಿಗಳು ಕೊಳದ ಬಳಿ ತಪಸ್ಸು ಮಾಡಿರುವ ಐತಿಹ್ಯವಿದ್ದು. ಪ್ರತಿ ವರ್ಷ ಈ ಕೊಳವನ್ನು ಶುದ್ಧೀಕರಿಸಿ ನಂತರ ತೊಟ್ಟಿಲಮಡು ಜಾತ್ರೆಯ ಸಮಯದಲ್ಲಿ ಚೆಲುವನಾರಾಯಣ ದೇವರ ಪಾದುಕೆಗಳನ್ನು ಕೊಳದ ಪಕ್ಕದ ಮಾವಿನ ಮರದ ಅಡಿಯಲ್ಲಿ 'ಬೀಜ ಕೂಡಿ'ಸುವ ಸಂಪ್ರದಾಯವಿದೆ.







'ಫಲಾಶ ತೀರ್ಥದಲ್ಲಿ 18ರಿಂದ 20 ಅಡಿ ಆಳದವರೆಗೆ ಹೂಳು ಮತ್ತು 2 ರಿಂದ 3 ಅಡಿವರೆಗೆ ನೀರು ತುಂಬಿತ್ತು. ಪ್ರವಾಸಿ ತಾಣ ಮೇಲುಕೋಟೆಗೆ ಬರುವ ಪ್ರವಾಸಿಗರು ಬಿಸಾಡುವ ಪ್ಲಾಸ್ಟಿಕ್ ಬಾಟಲಿಗಳು, ಇತರೆ ತ್ಯಾಜ್ಯಗಳಿಂದ ಕೊಳದ ಸುತ್ತಮುತ್ತಲೂ

ಗಲೀಜಿನ ವಾತಾವರಣವಿತ್ತು. ನರೇಗಾ ಯೋಜನೆಯಡಿ ಉದ್ಯೋಗ ಚೀಟಿ ಪಡೆದು ಈ ಕೆಲಸ ಮಾಡಿದ್ದು ನಮಗೆ ಧನ್ಯತೆ ಭಾವ ನೀಡಿದೆ' ಎನ್ನುತ್ತಾರೆ ಯುವಕ ಮುರುಳಿ.

ಮತ್ತೊಬ್ಬ ಫಲಾನುಭವಿ ರಮೇಶ್ 'ಗ್ರಾಮದ ಅಷ್ಟತೀರ್ಥ ಕೊಳದಲ್ಲಿ ಫಲಾಶ ತೀರ್ಥವು ಅತಿದೊಡ್ಡದು. ಸ್ವಯಂ ಪ್ರೇರಿತರಾಗಿ ಗ್ರಾಮದ ಜನರು ಬಿಡುವಿನ ವೇಳೆಯಲ್ಲಿ ಕಲ್ಯಾಣಿ ಅಭಿವೃದ್ಧಿಗೆ ಶ್ರಮದಾನ ಮಾಡಿದ್ದಾರೆ' ಎನ್ನುತ್ತಾರೆ.

'ಹಿಂದೆ 2017–18ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ಇಲ್ಲಿನ ಮೈತ್ರೇಯ ತೀರ್ಥ ಕೊಳವನ್ನು ಅಭಿವೃದ್ಧಿ ಮಾಡಲಾಗಿತ್ತು. ಇದರಿಂದ ಗ್ರಾಮ ಪಂಚಾಯತಿಗೆ 'ಗಾಂಧಿ ಗ್ರಾಮ' ಪುರಸ್ಕಾರದ ಜೊತೆಗೆ, ರೂ.5 ಲಕ್ಷ ನಗದು ಬಹುಮಾನವೂ ದೊರೆತಿದೆ. ಈ ಸಲ ಫಲಾಶ ತೀರ್ಥ ಕೊಳವನ್ನು ಸಮಾನ ಮನಸ್ಕ ಯುವಕರ ತಂಡ ಸೇರಿ ಪುನಶ್ಚೇತನದ ಪುಣ್ಯ ಕಾರ್ಯ ಮಾಡಿದೆ' ಎಂದು ಮತ್ತೊಬ್ಬ ಶ್ರಮದಾನಿಯೂ ಆದ ಯೋಗಾನರಸಿಂಹಸ್ವಾಮಿ ದೇವಸ್ಥಾನ ಅರ್ಚಕರಾದ ನಾರಾಯಣ್ ಅವರು ಸಂತೋಷ ವ್ಯಕ್ತಪಡಿಸಿದರು.

ಮಂಡ್ಯ ಜಿಲ್ಲೆಯ ಮೇಲುಕೋಟೆ ಗ್ರಾಮ ಒಂದು ಐತಿಹಾಸಿಕ ಸ್ಥಳ. ಪುರಾತನ ಕಾಲದ ದೇವಾಲಯಗಳು, ಅಕ್ಕತಂಗಿಯರ ಕೊಳ ಇಲ್ಲಿನ ಜನಪ್ರಿಯತೆಗೆ ಸಾಕ್ಷಿ. ಪ್ರವಾಸಿಗರು ಅತಿ ಹೆಚ್ಚಾಗಿ ಬರುವುದರಿಂದ ಪ್ಲಾಸ್ಟಿಕ್ ಬಾಟಲ್‌ಗಳು, ಕಸದ ರಾಶಿಯಿಂದ ಸ್ವಚ್ಛತೆ ಕಾಪಾಡಿಕೊಳ್ಳಲಾಗದ ಕಾರಣ ತಿಂಗಳಿಗೊಮ್ಮೆ ಎಂಸಿಸಿ ತಂಡದ ಯುವಕರು ಸ್ವಚ್ಛತೆಯ ಕೆಲಸದಲ್ಲಿ ತೊಡಗಿದ್ದಾರೆ.

ಫಲಾಶ ತೀರ್ಥ ಪುನಶ್ಚೇತನದ ಬಳಿಕ 24 ಅಡಿಯವರೆಗೆ ನೀರು ತುಂಬಿಕೊಂಡಿದ್ದು, ಗ್ರಾಮಸ್ಥರು ದನ ಕರುಗಳಿಗೆ ನೀರು ಕುಡಿಸಲು ಮತ್ತು ಜನರು ಕೂಡ ಕೊಳದ ನೀರನ್ನು ಕುಡಿಯಲು ಬಳಸುತ್ತಿದ್ದಾರೆ. ಪ್ರವಾಸಿಗರು ಕೂಡ ಫಲಾಶ ತೀರ್ಥ ವೀಕ್ಷಿಸಲು ಅವಕಾಶವಿದೆ. ವಿಶೇಷವಾಗಿ ತೊಟ್ಟಿಲು ಮಡು ಜಾತ್ರೆ ಸಮಯದಲ್ಲಿ ಅಷ್ಟ ತೀರ್ಥದಲ್ಲಿ ದೇವರ ಕಳಸವನ್ನು ಮುಳುಗಿಸಿ ನಂತರ ಪೂಜೆ ನಡೆಸುವ ಪದ್ಧತಿ ಕೂಡ ಇದೆ. ◆

## 2020ರ ಗ್ರಾಮ ಪಂಚಾಯಿತಿ ಸಾರ್ವತ್ರಿಕ ಚುನಾವಣೆಯಲ್ಲಿ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕಿನ ದೊಮ್ಮಸಂದ್ರ ಗ್ರಾಮ ಪಂಚಾಯಿತಿಗೆ ಪಂಚಾಯಿತಿ ಸದಸ್ಯರಾಗಿ "ಮಂಗಳಮುಖಿ" ಆಯ್ಕೆ

ಸುಮಾರು 50 ವರ್ಷ ವಯಸ್ಸುಳ್ಳ ಆರತಿ ಜವರೇಗೌಡ ಎಂಬ ಇವರು ಮೂಲತಹ ಮೈಸೂರು ಜಿಲ್ಲೆಯ, ಕೆ.ಆರ್.ನಗರದ ಮಾರ್ಚಳ್ಳಿ ಗ್ರಾಮದ ಕುರುಬ ಜನಾಂಗಕ್ಕೆ ಸೇರಿದ 9 ಜನ ಸದಸ್ಯರುಗಳ್ಳ ಕುಟುಂಬದಲ್ಲಿ ಜನಿಸಿದ್ದು, ಇವರು 3 ಜನ ಅಣ್ಣಂದಿರು, 4 ಜನ ಅಕ್ಕಂದಿರು, ಒಬ್ಬ ತಮ್ಮ ರೊಂದಿಗೆ ಬೆಳೆದು ಬಂದವರಾಗಿರುತ್ತಾರೆ. ಇವರು 15ನೇ ವಯಸ್ಸಿನಲ್ಲಿದ್ದಾಗ ಮಂಗಳಮುಖಿ ಎಂದು ತಿಳಿದು ಬಂದ ಕಾರಣದಿಂದಾಗಿ ಕುಟುಂಬದಲ್ಲಿ ಮುಂದುವರಿಯಲು ಆಗದ ಕಾರಣದಿಂದಾಗಿ ಮನೆ ಬಿಟ್ಟುಬಂದಿದ್ದು, ಸುಮಾರು 20 ವರ್ಷಗಳ ಕಾಲ ಬೇರೆ ಬೇರೆ ಸ್ಥಳಗಳಲ್ಲಿ ವಾಸವಾಗಿದ್ದುಕೊಂಡು ಜೀವನೋಪಾಯಕ್ಕಾಗಿ ಟೀ ಮಾರಾಟದ ಅಂಗಡಿಯನ್ನು ತೆರೆದು ಜೀವನೋಪಾಯ ಸಾಗಿಸುತ್ತಿರುತ್ತಾರೆಂದು ತಿಳಿದು ಬಂದಿದೆ.



ತದನಂತರದಲ್ಲಿ ಅಂದರೆ, ಈಗ್ಗೆ 15 ವರ್ಷಗಳ ಹಿಂದೆ ದೊಮ್ಮಸಂದ್ರ ಗ್ರಾಮಕ್ಕೆ ಬಂದು ವಾಸವಾಗಿದ್ದುಕೊಂಡು ಟೀ ವ್ಯಾಪಾರ ಜೊತೆ ಜೊತೆಗೆ ಇವರು ಚುನಾವಣಾ ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದರಲ್ಲಿ ಆಸಕ್ತಿ ಬೆಳೆಸಿಕೊಂಡು ಬಡವರ ಮದುವೆ ಕಾರ್ಯಗಳಲ್ಲಿ ಸಹಾಯ ಮಾಡುವುದು, ನಿರ್ಗತಿಕರು ಯಾರಾದರು ಸತ್ತಲ್ಲಿ ಸಹಾಯ ಮಾಡುವುದು, ಈ ರೀತಿ ಸಮಾಜಮುಖಿ ಕಾರ್ಯಗಳಲ್ಲಿ ಜನರ ಮದ್ಯೆ ಬೆರೆತು ದೊಮ್ಮಸಂದ್ರ ಗ್ರಾಮದ 13ನೇ ವಾರ್ಡ್‌ನಲ್ಲಿ ವಾಸವಾಗಿದ್ದುಕೊಂಡು ಈ ಎಲ್ಲಾ ಹಿನ್ನೆಲೆಯಲ್ಲಿ ಜನರಲ್ಲಿ ವಿಶ್ವಾಸಗಳಿಸಿದ್ದು ಈ ಹಿನ್ನೆಲೆಯಲ್ಲಿ ಈ ಭಾರಿಯ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸದಸ್ಯರಾಗಿ ಸ್ಪರ್ಧಿಸಿ ಗೆಲುವು ಸಾಧಿಸಿ ಆಯ್ಕೆಯಾಗಿರುತ್ತಾರೆ. ◆

ವರದಿ



**ಸಿ. ಕೇಶವಮೂರ್ತಿ**

ಪಂಚಾಯಿತಿ ಅಭಿವೃದ್ದಿ ಅಧಿಕಾರಿ,
ಸಾತನೂರು ಗ್ರಾಮಪಂಚಾಯಿತಿ,
ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ.

**ಗ್ರಾಮದ ಪ್ರತಿ ವಾರ್ಡ್‌ನ ಮನೆ ಮನೆಗೂ ಬೇಟಿ ನೀಡಿ ಕರಪತ್ರದ ಮೂಲಕ ಹಸಿ ಕಸ ಮತ್ತು ಒಣ ಕಸವನ್ನು ವಿಂಗಡಿಸುವುದರ ಕುರಿತು, ಪ್ಲಾಸ್ಟಿಕ್ ಬಳಕೆಯಿಂದಾಗುವ ಸಮಸ್ಯೆಯ ಕುರಿತು ಹಾಗೂ ಪ್ಲಾಸ್ಟಿಕ್ ಬದಲಾಗಿ ಬಟ್ಟೆಯ ಬ್ಯಾಗ್ ಅನ್ನು ಬಳಸುವಂತೆ ಹಾಗೂ ಒಣ ತ್ಯಾಜ್ಯವನ್ನು ಸಾರ್ವಜನಿಕ ಸ್ಥಳಗಳಲ್ಲಿ ಬಿಸಾಡದಂತೆ, ಚರಂಡಿ ಮತ್ತು ಬೀದಿಗಳನ್ನು ಸ್ವಚ್ಚತೆಯಾಗಿ ಇಟ್ಟುಕೊಳ್ಳುವಂತೆ, ಬೀದಿ ನಾಟಕ, ಹಾಗೂ ಜಿಂಗಲ್ಸ್ ಮೂಲಕ ಮಾಹಿತಿಯೊಂದಿಗೆ ಅರಿವು ಮೂಡಿಸುವ ಮೂಲಕ ಯಶಸ್ವಿಯಾಗಿರುತ್ತದೆ.**

# ಸ್ವಚ್ಛ ಶುಕ್ರವಾರ

ಸ್ವಚ್ಚ ಭಾರತ್ ಮಿಷನ್ ಯೋಜನೆಯ ಅಡಿಯಲ್ಲಿ ಪ್ರತಿ ದಿನ ಸಾತನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಾತನೂರು, ನಾಗರಸನಕೋಟೆ, ಚಿಕ್ಕ ಆಲಹಳ್ಳಿ, ಸೋರೆಕಾಯಿದೊಡ್ಡಿ, ಕಾಳೇಗೌಡನದೊಡ್ಡಿ ಗ್ರಾಮಗಳ ಸಾರ್ವಜನಿಕ ಸ್ಥಳಗಳಲ್ಲಿ ಪಂಚಾಯಿತಿಯ ಸಿಬ್ಬಂದಿಯವರ ಸಹಕಾರದೊಂದಿಗೆ ಈಗಾಗಲೇ ಪಂಚಾಯಿತಿಗೆ ನೀಡಲಾಗಿರುವ ಆಟೋ ಮೂಲಕ ಒಣ ತ್ಯಾಜ್ಯವನ್ನು ಸಂಗ್ರಹಿಸಿ ಸರಿಯಾದ ರೀತಿಯಲ್ಲಿ ವಿಂಗಡಿಸಿ ಶೇಖರಿಸಿಡಲಾಗುತ್ತಿದ್ದು ಹಾಗೂ ಗ್ರಾಮದ ಪ್ರತಿ ವಾರ್ಡ್‌ನ ಮನೆ ಮನೆಗೂ ಬೇಟಿ ನೀಡಿ ಕರಪತ್ರದ ಮೂಲಕ ಹಸಿ ಕಸ ಮತ್ತು ಒಣ ಕಸವನ್ನು ವಿಂಗಡಿಸುವುದರ ಕುರಿತು, ಪ್ಲಾಸ್ಟಿಕ್ ಬಳಕೆಯಿಂದಾಗುವ ಸಮಸ್ಯೆಯ ಕುರಿತು ಹಾಗೂ ಪ್ಲಾಸ್ಟಿಕ್ ಬದಲಾಗಿ ಬಟ್ಟೆಯ ಬ್ಯಾಗ್ ಅನ್ನು ಬಳಸುವಂತೆ ಹಾಗೂ ಒಣ ತ್ಯಾಜ್ಯವನ್ನು ಸಾರ್ವಜನಿಕ ಸ್ಥಳಗಳಲ್ಲಿ ಬಿಸಾಡದಂತೆ, ಚರಂಡಿ ಮತ್ತು ಬೀದಿಗಳನ್ನು ಸ್ವಚ್ಚತೆಯಾಗಿ ಇಟ್ಟುಕೊಳ್ಳುವಂತೆ, ಬೀದಿ ನಾಟಕ, ಹಾಗೂ ಜಿಂಗಲ್ಸ್ ಮೂಲಕ ಮಾಹಿತಿಯೊಂದಿಗೆ ಅರಿವು ಮೂಡಿಸುವ ಮೂಲಕ ಯಶಸ್ವಿಯಾಗಿರುತ್ತದೆ. ಇದರ ಪ್ರಯುಕ್ತ "ಸ್ವಚ್ಚ ಸಂಕೀರ್ಣ" ಏಕರೂಪದ ಬ್ರಾಂಡಿಂಗ್ ಅನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲು ಕನಕಪುರ ತಾಲ್ಲೂಕಿನ ಸಾತನೂರು ಗ್ರಾಮ ಪಂಚಾಯಿತಿಯನ್ನು ಆಯ್ಕೆ ಮಾಡಿ ಸದರಿ ಕಾರ್ಯಕ್ರಮವನ್ನು ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನಾಗಿ ಆಯೋಜಿಸಿ ಯಶಸ್ವಿಗೊಳಿಸಲಾಗಿರುತ್ತದೆ.




- ಪ್ರತಿ ಶುಕ್ರವಾರ ಒಂದು ಗ್ರಾಮವನ್ನು ಆಯ್ಕೆ ಮಾಡಿಕೊಳ್ಳುವುದು.
- ಗ್ರಾಮಕ್ಕೆ ಸಂಬಂಧಿಸಿದ ಸರ್ಕಾರಿ ಶಾಲೆ, ಆಸ್ಪತ್ರೆ, ಅಂಗನವಾಡಿ, ಬಸ್ ನಿಲ್ದಾಣ, ರಸ್ತೆಗಳು, ದೇವಸ್ಥಾನ ಇತ್ಯಾದಿ ಸಾರ್ವಜನಿಕ ಸ್ಥಳಗಳಲ್ಲಿ ಅನುಪಯುಕ್ತ ಗಿಡಗೆಂಟೆಗಳನ್ನು ತೆಗಯುವುದು ಮತ್ತು ಕಸವನ್ನು ಸ್ವಚ್ಛ ಗೊಳಿಸುವುದು.
- ಸಾರ್ವಜನಿಕ ಸ್ಥಳಗಳಲ್ಲಿ ಕಂಡು ಬಂದ ಪ್ಲಾಸ್ಟಿಕ್, ಪೇಪರ್ ಇತರೆ ಘನ ತ್ಯಾಜ್ಯಗಳನ್ನು ಸಂಗ್ರಹಿಸುವುದು.
- ಚರಂಡಿಗಳಲ್ಲಿ ಮಣ್ಣು ತೆಗೆದು ಕಟ್ಟಿದ ಚರಂಡಿಯ ಕಸ ಸ್ವಚ್ಚಗೊಳಿಸುವುದು.
- ಗ್ರಾಮಸ್ಥರಿಗೆ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವುದು.




- ಹಸಿ ಕಸ ಹಾಗೂ ಒಣ ಕಸ ವಿಂಗಡಿಸಿ ಪಂಚಾಯಿತಿಯ ಆಟೋಗೆ ನೀಡುವಂತೆ ಮನವೊಲಿಸುವುದು.
- ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿರುವ ಬಗ್ಗೆ ಮತ್ತು ಪ್ಲಾಸ್ಟಿಕ್ ನಿಂದ ಆಗುವ ಹಾನಿಯ ಬಗ್ಗೆ ಅರಿವು ಮೂಡಿಸುವುದರ ಮೂಲಕ ಕಾರ್ಯಕ್ರಮವನ್ನು ಹಮ್ಮಿಕೊಂಡಿರಲಾಗಿರುತ್ತದೆ.

ರಾಮನಗರ ಜಿಲ್ಲಾ ಪಂಚಾಯಿತಿಯಲ್ಲಿ ಸ್ವಚ್ಛ ಶುಕ್ರವಾರ ಕಾರ್ಯಕ್ರಮದ ಪ್ರಯುಕ್ತ ಇದುವರೆವಿಗೂ 25 ಸ್ವಚ್ಛ ಶುಕ್ರವಾರ ಕಾರ್ಯಕ್ರಮ ಚಾಲನೆಯಲ್ಲಿದ್ದು, 25ನೇ ಸ್ವಚ್ಛ ಶುಕ್ರವಾರದಂದು ಪ್ರತಿ ದಿನ ಘನ ತ್ಯಾಜ್ಯ ಸಂಗ್ರಹಣೆ, ವಿಂಗಡಣೆ, ಶೇಖರಣೆ, ಹಾಗೂ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಸಾರ್ವಜನಿಕ ಸ್ಥಳ, ಚರಂಡಿ, ಕಛೇರಿ ಕಟ್ಟಡ, ದೇವಸ್ಥಾನ ಹಾಗೂ ಇತರೆ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವಂತಹ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಸಾತನೂರು ಗ್ರಾಮ ಪಂಚಾಯಿತಿಯ ಶ್ರೀ ಸಿ. ಕೇಶವಮೂರ್ತಿರವರಿಗೆ "ಸ್ವಚ್ಛ ಶುಕ್ರವಾರದ ಶ್ರೇಷ್ಠರು" ಎಂಬ ಬಿರುದಿನೊಂದಿಗೆ ಪ್ರಮಾಣ ಪತ್ರ ಹಾಗೂ ಸ್ವಚ್ಚತಾ ಸಾಮಗ್ರಿ ಹಾಗೂ ನಗದು ಬಹುಮಾನವನ್ನು ಜಿಲ್ಲಾ ಪಂಚಾಯಿತಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಾದ ಶ್ರೀ ಇಕ್ರಮ್, ಭಾ.ಆ.ಸೇ. ರವರು "ಸ್ವಚ್ಛ ಶುಕ್ರವಾರದ ಶ್ರೇಷ್ಠರು" ಎಂಬ ಬಿರುದು ನೀಡಿ ಪ್ರೋತ್ಸಾಹಿಸಿರುತ್ತಾರೆ ಕಾರ್ಯಕ್ರಮದ ರುವಾರಿಯಾದ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯವರಾದ ಶ್ರೀ ಶಿವರಾಂ ಟಿ.ಎಸ್. ಹಾಗೂ ಸಾತನೂರು ಗ್ರಾಮ ಪಂಚಾಯಿತಿಯ ಸಿಬ್ಬಂದಿ/ನೌಕರರ ಸಹಕಾರ ದೊಂದಿಗೆ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಾಧ್ಯವಾಗಿರುತ್ತದೆ. ◆



# ವಿಶ್ವವಿದ್ಯಾಲಯಲ್ಲಿ ಕೈಗೊಂಡ ಚಟುವಟಿಕೆ

ವರದಿ



ಪ್ರಶಾಂತ ಹೆಚ್. ಮೇರವಾಡೆ

ಮಾಧ್ಯಮ ಸಂಯೋಜಕರು ಹಾಗೂ ಉಪನ್ಯಾಸಕರು
ಕ.ರಾ.ಗ್ರಾ. ಮತ್ತು ಪಂ. ರಾಜ್ ವಿಶ್ವವಿದ್ಯಾಲಯ, ಗದಗ

**ವಿಶ್ವವಿದ್ಯಾಲಯದ ಆಂತರಿಕ ಗುಣಮಟ್ಟ ಭರವಸೆ ಕೋಶದ ವತಿಯಿಂದ "ಮೂರನೇ ಸೆಮಿಸ್ಟರನ್ ವಿದ್ಯಾರ್ಥಿಗಳಿಗೆ ಓರಿಯಂಟೆಷನ ಕಾರ್ಯಕ್ರಮ"ವನ್ನು ಆಯೋಜಿಸಲಾಗಿತ್ತು. ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ಸಸಿಗೆ ನೀರು ಎರೆಯುವುದರ ಮೂಲಕ ಉದ್ಘಾಟಿಸಿ ವಿಶ್ವವಿದ್ಯಾಲಯದ ಆರನೇ ಇನ್ಫೋಗ್ರಾಫಿಕ್ಸ್ "ಆಹಾರ ಉತ್ಪಾದನೆಗಳ ಮೌಲ್ಯವರ್ಧನೆ"ಯನ್ನು ಬಿಡುಗಡೆಗೊಳಿಸಿದರು.**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ, ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ರವರ ಹಾಗೂ ಹಣಕಾಸು ಅಧಿಕಾರಿಗಳಾದ ಶ್ರೀ. ಪ್ರಶಾಂತ ಜೆ. ಸಿ ಯವರ ನೇತೃತ್ವದಲ್ಲಿ ವಿಭಿನ್ನವಾಗಿ ಹಾಗೂ ತ್ವರಿತವಾಗಿ ಪ್ರಗತಿ ಹೊಂದಿದ್ದು. ಅದಕ್ಕೆ ಸಾಕ್ಷಿಯಂಬಂತೆ ವಿಶ್ವವಿದ್ಯಾಲಯದಲ್ಲಿ ವಿಶೇಶ ಹಾಗೂ ವಿಭಿನ್ನತೆಯಿಂದ ಕೂಡಿದ ಹತ್ತು ಹಲವಾರು ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳು ಜರುಗುತ್ತಿವೆ. ಅದರಲ್ಲಿ ಖಾದಿ ದಿವಸ, ದೇಸಿ ಯೋಜನೆ, ಸ್ಮೃತಿವನ, ಮಾದರಿ ಸಸ್ಯ ಪಾಲನಾ ಕೇಂದ್ರ ಸಮಗ್ರ ಕೃಷಿ ಯೋಜನೆಗಳಂತಹ ಯೋಜನೆಗಳು ಅದಾಗಲೇ ಅನುಷ್ಠಾನಗೊಂಡ ಹಾಗೂ ಎಲ್ಲರಿಗೂ ತಿಳಿದಂತಹುಗಳಾಗಿವೆ. ವಿಶ್ವವಿದ್ಯಾಲಯವು 2020 ರ ಕೊನೆಯ ತಿಂಗಳಲ್ಲಿ ಕೂಡ ಹಲವಾರು ವಿಶಿಷ್ಟವಾದ ಯೋಜನೆ ಹಾಗೂ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು.

## ವಿಶ್ವ ಮಣ್ಣಿನ ದಿನ:

2014 ನೇ ವರ್ಷದಿಂದ ಪ್ರತೀ ವರ್ಷ ದಿನಾಂಕ. ಡಿಸೆಂಬರ್ 5 ರಂದು ವಿಶ್ವ ಮಣ್ಣಿನ ದಿನವನ್ನು ವಿಶ್ವದೆಲ್ಲೆಡೆ ಆಚರಿಸಲಾಗುತ್ತಿದ್ದು. ಅದರಂತೆ ದಿನಾಂಕ 5. ಡಿಸೆಂಬರ್ 2020 ರಂದು ವಿಶ್ವವಿದ್ಯಾಲದ ನೂತನ ಕ್ಯಾಂಪಸ್‌ನಲ್ಲಿರುವ ಸ್ಮೃತಿವನದಲ್ಲಿ ಎಂ.ಎಸ್.ಸಿ ಜಿಯೋ ಇನ್ಫಾರ್ಮ್ಯಾಟಿಕ್ಸ್ ವಿಭಾಗವು ವಿದ್ಯಾರ್ಥಿಗಳ ಸಹಭಾಗಿತ್ವದೊಂದಿಗೆ ಭೂಮಿ ತಾಯಿಗೆ ಪೂಜೆ ಹಾಗೂ ವಿದ್ಯಾರ್ಥಿಗಳಿಗೆ ಆ ದಿನದ ಮಹತ್ವವನ್ನು ತಿಳಿಸುವುದಲ್ಲದೇ ಮಣ್ಣಿನ ಸಂರಕ್ಷಣೆಯ ಕುರಿತು ಜಾಗೃತಿಯನ್ನು ಮೂಡಿಸುವುದರ ಮೂಲಕ ಸಾಂಪ್ರದಾಯಿಕವಾಗಿ ವಿಶ್ವ ಮಣ್ಣಿನ ದಿನವನ್ನು ಆಚರಿಸಲಾಯಿತು.

## ಧೀಕ್ಷಾರಂಭ

ವಿಶ್ವವಿದ್ಯಾಲಯದ ನೂತನ ಬ್ಯಾಚ್‌ನ ವಿದ್ಯಾರ್ಥಿಗಳಿಗೆ ದಿನಾಂಕ 10. ಡಿಸೆಂಬರ್ 2020 ರಿಂದ ಮೂರು ದಿನಗಳ ಧೀಕ್ಷಾರಂಭ (ಪರಿಚಯ ಮತ್ತು ಸ್ವಾಗತ)



ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ನೂತನ ಆವರಣದಲ್ಲಿ ಆಯೋಜಿಸಲಾಯಿತು. ಉದ್ಘಾಟಕರಾಗಿ ರಾಯಚೂರಿನ ಶ್ರೀಮತಿ. ಕವಿತಾ ಮಿಶ್ರಾ, ಮಹಿಳಾ ಪ್ರಗತಿಪರ ರೈತರು ಇವರು ಆಗಮಿಸಿ ತಮ್ಮ ಅಮೂಲ್ಯವಾದ ಕೃಷಿ ಅನುಭವ, ಕೃಷಿಯಲ್ಲಿ ತಾವು ಕಂಡುಕೊಂಡ ಸಂತಸ ಮತ್ತು ಕೃಷಿಯಲ್ಲಿ ಸಾಧನೆಯ ಕುರಿತಾಗಿ ವಿದ್ಯಾರ್ಥಿಗಳೊಂದಿಗೆ ಸಮಗ್ರವಾಗಿ ಚರ್ಚಿಸುವುದರ ಜೊತೆಗೆ ಅವರನ್ನು ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸಿದರು. ಹಾಗೂ "ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ" ಎಂಬ ವಿಷಯದ ಕುರಿತು ಶ್ರೀ. ಅರುಣ ಪಾಟೀಲ, ಕಾರ್ಯಕಾರಿ ಮತ್ತು ವರ್ಕ್ಸ್ ಕಮಿಟಿ ಸದಸ್ಯರು, ಕ.ರಾ.ಗ್ರಾ.ಪಂ.ರಾ. ವಿಶ್ವವಿದ್ಯಾಲಯ ಗದಗ. ಇವರು "ಎಮೆರ್ಜಿಂಗ್ ಟ್ರೆಂಡ್ಸ್ ಆ್ಯಂಡ್ ಕರಿಯರ್ ಅಪಾರ್ಚುನಿಟೀಸ್" ಎಂಬ ವಿಷಯದ ಕುರಿತು ಚರ್ಚಿಸಿದರು.

## ವಿಶ್ವವಿದ್ಯಾಲದಲ್ಲಿ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಓರಿಯಂಟೇಷನ್ ಕಾರ್ಯಕ್ರಮ

ವಿಶ್ವವಿದ್ಯಾಲಯದ ಆಂತರಿಕ ಗುಣಮಟ್ಟ ಭರವಸೆ ಕೋಶದ ವತಿಯಿಂದ "ಮೂರನೇ ಸೆಮಿಸ್ಟರನ್ ವಿದ್ಯಾರ್ಥಿಗಳಿಗೆ ಓರಿಯಂಟೆಷನ ಕಾರ್ಯಕ್ರಮ"ವನ್ನು ಆಯೋಜಿಸಲಾಗಿತ್ತು. ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ಸಸಿಗೆ ನೀರು ಎರೆಯುವುದರ ಮೂಲಕ ಉದ್ಘಾಟಿಸಿ ವಿಶ್ವವಿದ್ಯಾಲಯದ ಆರನೇ ಇನ್ಪೋಗ್ರಾಫಿಕ್ಸ್ "ಆಹಾರ ಉತ್ಪಾದನೆಗಳ ಮೌಲ್ಯವರ್ಧನೆ"ಯನ್ನು ಬಿಡುಗಡೆಗೊಳಿಸಿದರು. ಪಕ್ಕಿರಮ್ಮ ಮುರಗೋಡ, ಎಂ.ಎಸ್ಸಿ. (ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ) ಕಾರ್ಯಕ್ರಮದ ಸಂಯೋಜಕರು ಇನ್ಪೋಗ್ರಾಫಿಕ್ಸ ಕುರಿತು ವಿವರಿಸಿದರು. ಡಾ. ಅಭಯಕುಮಾರ ಸ. ಗಸ್ತಿ, ಸಂಯೋಜಕರು, ಎಂ.ಕಾಂ. ವಿಭಾಗ ಹಾಗೂ ಆಂತರಿಕ ಗುಣಮಟ್ಟ ಭರವಸೆ ಕೋಶ, ಕ.ರಾ.ಗ್ರಾ. ಮತ್ತು ಪಂ.ರಾ. ವಿ.ವಿ. ಕಾರ್ಯಕ್ರಮದ ಸ್ವರೂಪ ಹಾಗೂ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು. ವಿ.ವಿ.ಯಲ್ಲಿ ಜರಗುತ್ತಿರುವ ವಿವಿಧ ಚಟುವಟಿಕೆಗಳಾದ ನೈಪುಣ್ಯ ಕೇಂದ್ರ, ಉದ್ಯಮಶೀಲತೆ ಕೋಶ, ಆತ್ಮವಿಶ್ವಾಸ ಕೋಶ, ದೇಶಿ ಯೋಜನೆ, ಮಾದರಿ ಸಸ್ಯ ಶಿಶು ಪಾಲನಾ ಯೋಜನೆ, ಯೋಗಕ್ಷೇಮ ಯೋಗ ಕೇಂದ್ರ, ಮೂಕ್ಕುಮ ಯೋಜನೆ, ಸೋಸಿಯಲ್ ಮಿಡಿಯಾ ಕೋಶ, ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ ಹಾಗೂ ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನಾ ಕೇಂದ್ರ, ಇನ್ಪೋಗ್ರಾಫಿಕ್ಸ್ ಮುಂತಾದವುಗಳ ಕುರಿತು ಆಯಾ ಕಾರ್ಯಕ್ರಮಗಳ ಸಂಯೋಜಕರುಗಳು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ವಿದ್ಯಾರ್ಥಿಗಳನ್ನುದ್ದೇಶಿಸಿ ಕಳೆದ 9 ತಿಂಗಳುಗಳಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ದೇಸಿ ಯೋಜನೆ, ಸ್ಮೃತಿವನ, ಸ್ವದೇಶಿ ಯೋಜನೆ, ಸಮಗ್ರ ಪಶು–ಕೃಷಿ ಯೋಜನೆ ಅಂತಹ ಹಲವಾರು ಚಟುವಟಿಕೆಗಳು ಪ್ರಾರಂಭಿಸಿದ್ದು ಎಲ್ಲ ಭೋದಕ ವರ್ಗ ಹಾಗೂ ಭೋದಕೇತರ ಸಿಬ್ಬಂದಿ ವರ್ಗ ಸಕ್ರೀಯವಾಗಿ ಪಾಲ್ಗೊಂಡಿದ್ದು ಹಾಗೆಯೇ ವಿದ್ಯಾರ್ಥಿಗಳು ಸಹ ತಮ್ಮನ್ನು ತಾವು ಈ ಎಲ್ಲ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು. ವಿಶ್ವವಿದ್ಯಾಲಯವನ್ನು ಇಟ್ಟಿಗೆ ಹಾಗೂ ಸಿಮೆಂಟಿನಿಂದ ಕಟ್ಟಲು ಸಾದ್ಯವಿಲ್ಲ, ಬದಲಾಗಿ ಉತ್ತಮ ಭೋದಕರು ಹಾಗೂ ವಿದ್ಯಾರ್ಥಿಗಳಿಂದ ಉತ್ಕೃಷ್ಟ ವಿಶ್ವವಿದ್ಯಾಲಯವನ್ನು ಕಟ್ಟಲು ಸಾಧ್ಯ ಹಾಗಾಗಿ ಎಲ್ಲರೂ NURSE: Nursery, Research, Social Media and Entrepreneurship ಚಟುವಟಿಕೆಗಳ್ಳಲ್ಲಿ ತೊಡಗಿಕೊಳ್ಳುವುದರ ಮೂಲಕ ವಿಶ್ವವಿದ್ಯಾಲಯದ ಅಭಿವೃದ್ಧಿಯಲ್ಲಿ ಕೈಜೋಡಿಸುವಂತೆ ತಿಳಿಸಿದರು.

2020ರ ನವೆಂಬರ್ ತಿಂಗಳಿನಿಂದ ಪ್ರತೀ ತಿಂಗಳ 11 ನೇ ದಿನಾಂಕದಂದು ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್‌ನಲ್ಲಿ ನಿರ್ಮಿಸಲಾದ ಗಾಂಧೀಜಿಯವ ಸಬರಮತಿ ಆಶ್ರಮದ ಪ್ರತಿಕೃತಿಯ ಕಟ್ಟಡದ ಆವರಣದಲ್ಲಿ ಗಾಂಧಿ ಚಿಂತನ – ಮಂಥನ ಹಾಗೂ ಸತ್ಸಂಗ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ವಿಶ್ವವಿದ್ಯಾಲಯದಲ್ಲಿ ಜರುಗಿದ ನೂತನ ಬ್ಯಾಚ್ ನ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮದ ಕಾರಣದಿಂದ ಎರಡನೇ ಗಾಂಧಿ ಚಿಂತನ – ಮಂಥನ ಹಾಗೂ ಸತ್ಸಂಗ ಕಾರ್ಯಕ್ರಮವನ್ನು ದಿನಾಂಕ 14 ಡಿಸೆಂಬರ್ 2020 ರಂದು ವಿಶ್ವವಿದ್ಯಾಲಯದ ಪರಿಶಿಷ್ಟ



**ಸಬರಮತಿ ಆಶ್ರಮದಲ್ಲಿ ಗಾಂಧಿ ಸತ್ಸಂಗ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್ ಟಾಪ್ ವಿತರಣೆ**

ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್‌ಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಯಿತು.



**ಮತದಾನ ಜಾಗೃತಿ ಅಭಿಯಾನ**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ವಿಶ್ವವಿದ್ಯಾಲಯವು ಗಾಂಧೀಜಿಯವರ ಗ್ರಾಮ ಸ್ವರಾಜ್ ಮತ್ತು ವಿಕೇಂದ್ರೀಕರಣದ ತತ್ವದಡಿಯಲ್ಲಿ ಅನೇಕ ಕಾರ್ಯ ಯೋಜನೆಗಳನ್ನು ರೂಪಿಸಿ, ಅವುಗಳ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದೆ.

ಗ್ರಾಮ ಪಂಚಾಯಿತಿ ಚುನಾವಣೆ ಸಂದರ್ಭಗಳಲ್ಲಿ ವಿಶ್ವವಿದ್ಯಾಲಯವು ದತ್ತು ಪಡೆದ ಗ್ರಾಮಗಳಾದ ನಾಗಾವಿ, ಕಳಸಾಪೂರ, ಬಿಂಕದಕಟ್ಟಿ, ಹುಲಕೋಟಿ ಮತ್ತು ಕುರ್ತಕೋಟಿ ಗ್ರಾಮಗಳಲ್ಲಿ ಗ್ರಾಮದ ಜನತೆಗೆ ಮತದಾನದ ಜಾಗೃತಿಯನ್ನು ಮೂಡಿಸುವ ಅಭಿಯಾನವನ್ನು ವಿಶ್ವವಿದ್ಯಾಲಯದ ವತಿಯಿಂದ ಹಮ್ಮಿಕೊಳ್ಳಲಾಗಿತ್ತು. ಇದರ ಜೊತೆಗೆ ಮುಂಡರಗಿ




**ಮುಂಡರಗಿ ತಾಲ್ಲೂಕಿನ ಗ್ರಾಮಗಳ ಮತದಾನದ ಜಾಗೃತಿ ಜಾಥದಲ್ಲಿ ಆರ್.ಡಿ.ಪಿ.ಆರ್. ಮತ್ತು ಸಾರ್ವಜನಿಕ ಆಡಳಿತ ವಿಭಾಗಗಳ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಭಾಗಿಯಾಗಿರುವುದು.**

ತಾಲ್ಲೂಕಿನ ಗ್ರಾಮಗಳಲ್ಲಿ ಗ್ರಾಮದ ಜನತೆಗೆ ಮತದಾನದ ಮಹತ್ವವನ್ನು ತಿಳಿಸುವ ಹಿನ್ನಲೆಯಲ್ಲಿ ಸ್ಥಳೀಯ ಗ್ರಾಮ ಪಂಚಾಯತಿಗಳ ಸಹಕಾರದೊಂದಿಗೆ ಗ್ರಾಮಗಳ ಮುಖ್ಯ ಬೀದಿಗಳಲ್ಲಿ ಜಾಥಗಳನ್ನು ನಡೆಸುವ ಮೂಲಕ ಮತದಾನದ ಜಾಗೃತಿಯನ್ನು ಮೂಡಿಸಲಾಯಿತು.

ಈ ಅಭಿಯಾನದಲ್ಲಿ ವಿಶ್ವವಿದ್ಯಾಲಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಾರ್ವಜನಿಕ ಆಡಳಿತ ವಿಭಾಗಗಳ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಭಾಗವಹಿಸಿದ್ದು. ಚುನಾವಣೆ ಮತ್ತು ಮತದಾನ ಜಾಗೃತಿ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ವತಿಯಿಂದ ಕೈಗೊಂಡ ಈ ಅಭಿಯಾನವು ಪಂಚಾಯತ್ ವ್ಯವಸ್ಥೆಯನ್ನು ಬಲಪಡಿಸುವ ಮತ್ತು ಈ ವ್ಯವಸ್ಥೆಯಲ್ಲಿ ಜನರ ಸಂಪೂರ್ಣ ಭಾಗವಹಿಸುವಿಕೆಯನ್ನು ಹೆಚ್ಚಿಸುವ ದೃಷ್ಟಿಕೋನದಲ್ಲಿ ವೈಯಕ್ತಿಕವಾಗಿ ತೃಪ್ತಿಯನ್ನುಂಟು ಮಾಡಿದೆ.

## ವಿಶ್ವವಿದ್ಯಾಲಯದಲ್ಲಿ ವಿವೇಕ ಸತ್ಸಂಗ ಹಾಗೂ ಸಂಕ್ರಾಂತಿ ಸಡಗರ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಯುವ ದಿನದ ಅಂಗವಾಗಿ ಸಬರಮತಿ ಆಶ್ರಮದ ವತಿಯಿಂದ ವಿವೇಕ ಸತ್ಸಂಗ ಕಾರ್ಯಕ್ರಮ ಹಾಗೂ ಮನೋಚೇತನ ಆಪ್ತಸಮಾಲೋಚನಾ ಕೇಂದ್ರದ ಉದ್ಘಾಟಿಸಿ ಕರ್ನಾಟಕ ಪಂಚಾಯತ್ ಪರಿಷತ್‌ನ ಉಪಾಧ್ಯಕ್ಷರಾದ ಸನ್ಮಾನ್ಯ ಶ್ರೀ. ಡಿ. ಆರ್. ಪಾಟೀಲ್ ಅವರು ಗಾಂಧೀಜಿಯವರ ಸರಳ ಜೀವನ ಮತ್ತು ವ್ಯಕ್ತಿತ್ವವು ತುಂಬಾ ಪ್ರಭಾವಿತವಾದದ್ದು ಅವರು ವಿಶ್ವದ ಅನೇಕ ಮಹಾನ್ ವ್ಯಕ್ತಿಗಳ ಮೇಲೆ ಪ್ರಭಾವವನ್ನು ಬೀರಿದ್ದಾರೆ. ವಿವೇಕಾನಂದರು ನಮ್ಮ ದೇಶದ ಸಂಸ್ಕೃತಿಯನ್ನು ಇಡೀ ವಿಶ್ವಕ್ಕೆ ತಲುಪಿಸಿದ ಮಹಾನ್ ಚೇತನರು. ಗಾಂಧೀಜಿ ಮತ್ತು ವಿವೇಕಾನಂದರು ಮಾನವ ಜೀವನದ ಅಭಿವೃದ್ಧಿ ಅಲ್ಲದೇ ದೇಶದ ಅಭಿವೃದ್ಧಿ ದೃಷ್ಟಿಕೋನದಲ್ಲಿಯೂ ಸ್ಫೂರ್ತಿಯ ಸೆಲೆಯಾಗಿದ್ದಾರೆ ವಿದ್ಯಾಭಾರತೀಯ ದಕ್ಷಿಣ ಮಧ್ಯ ಕ್ಷೇತ್ರದ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಜಗದೀಶ ಜಿ. ಆರ್. ಅವರು ವಿವೇಕಾನಂದರು ದೇಶವನ್ನು ಸದೃಢಗೊಳಿಸುವಲ್ಲಿ ಹಾಗೂ ದೇಶದ ಜನರನ್ನು ಸಬಲಗೊಳಿಸುವಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡ ಮಹಾ ಪುರುಷರಾಗಿದ್ದು ತಮ್ಮ ದೇಹವನ್ನು ಮಾತ್ರ ತೊರೆದಿದ್ದಾರೆ ಆದರೆ ಅವರು ಇಂದಿಗೂ ದೇಶದ ಯುವ ಜನತೆಯನ್ನು ಸಬಲಗೊಳಿಸುವಲ್ಲಿ ತಮ್ಮ ಆತ್ಮವನ್ನು ಅವರ ಕೃತಿಗಳಲ್ಲಿ ತೊಡಗಿಸಿದ್ದಾರೆ.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ವಿಶ್ವವಿದ್ಯಾಲಯದ ವಿತ್ತಾಧಿಕಾರಿಗಳಾದ ಶ್ರೀ ಪ್ರಶಾಂತ ಜೆ. ಸಿ ಅವರು



**ಅತಿಥಿಗಳು ಪುಸ್ತಕ ಪ್ರದರ್ಶನಕ್ಕೆ ಚಾಲನೆ ನೀಡುತ್ತಿರುವುದು.**

ಮಾತನಾಡಿ ಆತ್ಮ ಅಭಿವೃದ್ಧಿ ಮತ್ತು ಆತ್ಮ ಸಾಕ್ಷಾತ್ಕಾರವೇ ನಿಜವಾದ ಮನವ ಅಭಿವೃದ್ಧಿಯಾಗಿದೆ. ಈ ವಿಷಯದಲ್ಲಿ ಸ್ವಾಮಿ ವಿವೇಕಾನಂದರು ಎಂದೆಂದಿಗೂ ಪ್ರಸ್ತುತ ಎಂದರು ವಿಶ್ವವಿದ್ಯಾಲಯದ ಮನೋಚೇತನ ಎಂಬ ಆಪ್ತಸಮಾಲೋಚನಾ ಕೇಂದ್ರವನ್ನು ಉದ್ಘಾಟಿಸಿ ಗದಗ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮನೋವೈದ್ಯರಾದ ಡಾ. ಸೋಮಶೇಖರ ಬಿಜ್ಜಳರವರು ಮನುಷ್ಯ ತನ್ನ ವಿಚಾರ ಆಚಾರ ಮತ್ತು ಇವುಗಳ ಪ್ರವೃತ್ತಿಯಲ್ಲಿ ಸಾಮ್ಯತೆಯನ್ನು ಸಾಧಿಸುವುದೇ ಪಕ್ವ ಮನಸ್ಸಿನ ರೂಪವಾಗಿದೆ. ಅನೇಕ ಜನರು ಇವುಗಳ ಸಾಮ್ಯತೆಗೆ ಸಂಭಂದಪಟ್ಟಂತೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಈ ದೃಷ್ಟಿಕೋನದಿಂದ ವಿಶ್ವವಿದ್ಯಾಲಯದ ಈ ಕೇಂದ್ರವು ವಿದ್ಯಾರ್ಥಿಗಳನ್ನೊಳಗೊಂಡಂತೆ ಗ್ರಾಮೀಣ ಜನರಿಗೂ ಪ್ರಯೋಜನಕಾರಿಯಾಗಲಿ ಎಂದರು.

ಪೂರಕವಾಗಿ ವಿಶ್ವವಿದ್ಯಾಲಯದ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರದ ವತಿಯಿಂದ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರವನ್ನು ಹಮ್ಮಿಕೊಳ್ಳಲಾಗಿತ್ತು ಹಾಗೂ ಯೋಗಕ್ಷೇಮ ಯೋಗ ಕೇಂದ್ರದ ಯೋಗ ಶಿಬಿರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಈ ಸಮಾರಂಭದ ತರುವಾಯ ವಿಶ್ವವಿದ್ಯಾಲಯದ ಮಾದರಿ ಸಸ್ಯ ಶಿಶುಪಾಲನಾ ಕೇಂದ್ರದಲ್ಲಿ ಏರ್ಪಡಿಸಿದ್ದ ಸಂಕ್ರಾಂತಿ ಸಂಭ್ರಮದಲ್ಲಿ ಕುಲಪತಿಗಳು ಸಮಸ್ತ ಜನತೆಗೆ ಶುಭಾಷಯ ಕೋರಿ ವಿಶ್ವವಿದ್ಯಾಲಯದಲ್ಲಿ ಅನುಷ್ಠಾನಗೊಳಿಸಲಾದ ಹಲವು ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವ ಉದ್ದೇಶದಿಂದ ರಚಿಸಲಾದ ತಂಡಗಳು ಹಾಗೂ ಪ್ರತಿ ತಂಡದಲ್ಲಿ ಸೇರಿರುವ ವಿದ್ಯಾರ್ಥಿಗಳ ಹೆಸರುಗಳನ್ನು ಘೋಷಿಸುವುದರ ಜೊತೆಗೆ ಅವರವರ ತಂಡಗಳು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ತಿಳಿಸಿದರು.

## ಗದಗ ಜಿಲ್ಲೆಯಲ್ಲಿ 'ದತ್ತು ಸ್ವೀಕರಿಸಿದ' ಸರ್ಕಾರಿ ಶಾಲೆಗಳ ಅಭಿವೃದ್ಧಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ್ ಹಾಗೂ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಗದಗ ಇವರ ಸಹಯೋಗದೊಂದಿಗೆ ದತ್ತು ಶಾಲೆಗಳ ಕುರಿತು ದಿನಾಂಕ: 21/01/2021 ರಂದು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಸಭೆ ಆಯೋಜಿಸಲಾಗಿತ್ತು. ಸರ್ಕಾರಿ ಶಾಲೆಗಳ ದತ್ತು ಸ್ವೀಕಾರ ಕಾರ್ಯಕ್ರಮದಲ್ಲಿ ಕುಲಸಚಿವರಾದ ಪ್ರೊ.ಬಸವರಾಜ ಎಲ್. ಲಕ್ಕಣ್ಣವರ್, ಸ್ವಾಗತಿಸಿ, ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ಪ್ರಾಸ್ತಾವಿಕ ಮತ್ತು ಉದ್ದೇಶಗಳ ಕುರಿತು ಮಾತನಾಡಿದರು. ಸರಕಾರಿ ಶಾಲೆಗಳ ಪ್ರಸ್ತುತ ಸ್ಥಿತಿಗತಿ ಕುರಿತು ಮತ್ತು ಸರಕಾರಿ ಶಾಲೆಗಳಲ್ಲಿರುವ ಸಮಸ್ಯೆ ಬಗ್ಗೆ ವಿವರಿಸಿದರು. ಸರ್ಕಾದ ಆದೇಶದ ಮೇರೆಗೆ ನಮ್ಮ ವಿಶ್ವವಿದ್ಯಾಲಯವು 20 ಶಾಲೆಗಳನ್ನು ದತ್ತು ತೆಗೆದುಕೊಂಡು ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುವುದಕ್ಕೆ ವಿಶ್ವವಿದ್ಯಾಲಯವು ಕೈಜೋಡಿಸುತ್ತದೆ. ಸರ್ಕಾರ ನೀಡುವಷ್ಟು ಸೌಲಭ್ಯಗಳನ್ನು ಯಾವ ಸಂಸ್ಥೆಯು ನೀಡಲಾಗದೆಂದು. ಆ ಸೌಲಭ್ಯಗಳನ್ನು ಬಳಸಿಕೊಂಡು ಮಕ್ಕಳ ಸರ್ವತೋಮುಖ ಅಭಿವೃದ್ಧಿ ಮಾಡಬೇಕೆಂದು ವಿಶ್ವವಿದ್ಯಾಲಯದ ಕುಲಪತಿಗಳು ಹೇಳಿದರು.ಗುಣಮಟ್ಟದ ಶಿಕ್ಷಣಕ್ಕಾಗಿ ಅವಶ್ಯಕ ಸೌಲಭ್ಯಗಳನ್ನು ಒದಗಿಸಿ, ಎಸ್.ಎಸ್. ಎಲ್.ಸಿ ವಿದ್ಯಾರ್ಥಿಗಳನ್ನು ಕೇಂದ್ರವಾಗಿಟ್ಟುಕೊಂಡು ಗಣಿತ, ಇಂಗ್ಲೀಷ್ ಹಾಗೂ ಇನ್ನಿತರೆ ಅಗತ್ಯವಿರುವ ವಿಷಯಗಳ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವುದರ ಮೂಲಕ ಕಳೆದ ವರ್ಷಕ್ಕಿಂತ ಈ ವರ್ಷದ ಫಲಿತಾಂಶವನ್ನು ಸುಧಾರಿಸುವ ನಿಟ್ಟಿನಲ್ಲಿ ಪರೀಕ್ಷೆಗೆ ಪ್ರಾಧನ್ಯತೆ ನೀಡಬೇಕೆಂದರು

ಶ್ರೀ ಬಸಲಿಂಗಪ್ಪ, ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಗದಗ ಇವರು ದತ್ತು ಶಾಲಾ ಸಭೆಯಲ್ಲಿ ಶಿಕ್ಷಣದ ಮಹತ್ವ ಕುರಿತು ಮತ್ತು ಶಾಲೆಗಳನ್ನು ದತ್ತು ಪಡೆದುಕೊಂಡಿದ್ದಕ್ಕೆ ಸಂತೋಷ ವ್ಯಕ್ತಪಡಿಸಿದರು. ಸರ್ಕಾರಿ ಶಾಲೆಗಳಲ್ಲಿರುವ ವ್ಯವಸ್ಥೆ ಬಗ್ಗೆ ವೈದಿಕ ಕಾಲದ ಶಿಕ್ಷಣವನ್ನು ಉದಾಹರಣೆಯಾಗಿ ತೆಗೆದುಕೊಂಡು ಪ್ರಸ್ತುತ ಶಿಕ್ಷಣಕ್ಕೆ ಹೋಲಿಕೆ ಮಾಡಿ ಹೇಳಿದರು ಹಾಗೂ ಶ್ರೀ ಮಹೇಶ ಅಣ್ಣಿಗೇರಿ ಉಪನ್ಯಾಸಕರು ಎಮ್. ಎಸ್.ಡಬ್ಲ್ಯೂ ಕಾರ್ಯಕ್ರಮ ಇವರು 20 ಸರಕಾರಿ ದತ್ತು ಶಾಲೆಯ ದತ್ತಾಂಶಗಳ ವಿವರಣೆಯನ್ನು ಪ್ರಸ್ತುತ ಪಡಿಸಿದರು.

ನಂತರ ಸರಕಾರಿ ಶಾಲೆಗಳಲ್ಲಿರುವ ವ್ಯವಸ್ಥೆ, ಸಮಸ್ಯೆ ಮತ್ತು ಸೌಲಭ್ಯಗಳ ಕುರಿತು ಮುಖ್ಯೋಪಾಧ್ಯಾಯರೊಂದಿಗೆ ಕುಲಪತಿಗಳು, ಕುಲಸಚಿವರು, ಮತ್ತು ಉಪನಿರ್ದೇಶಕರು ಸಂವಾದವನ್ನು (ಚರ್ಚೆಯನ್ನು) ನಡೆಸಿದ್ದು. ಚರ್ಚೆಯಲ್ಲಿ

ಮುಖ್ಯೋಪಾಧ್ಯಾಯರು ತಮ್ಮ ಸಮಸ್ಯೆ ಮತ್ತು ಆ ಶಾಲೆಗಳಲ್ಲಿರುವ ಸೌಲಭ್ಯಗಳ ಬಗ್ಗೆ ತಿಳಿಸಿದರು. ಶಾಲೆಗಳಲ್ಲಿರುವ ಸಮಸ್ಯೆಗಳ ಕುರಿತು ಪರಿಶೀಲಿಸಿ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳೋಣವೆಂದರು. ಕೃಷಿ ಬಗ್ಗೆ ನಮ್ಮ ವಿಶ್ವವಿದ್ಯಾಲಯವು ಪ್ರಾಯೋಗಿಕವಾಗಿ ಹಾಗೂ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಇತರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳವದರ ಮೂಲಕ ವಿಶ್ವವಿದ್ಯಾಲಯದವು ಕೈಜೋಡಿಸುತ್ತದೆಂದರು.

ಸರ್ಕಾರಿ ಶಾಲೆಗಳ "ದತ್ತು ಸ್ವೀಕಾರ" ಪ್ರಮಾಣ ಪತ್ರವನ್ನು ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್ ಚಟಪಲ್ಲಿಯವರು ಮುಖ್ಯೋಪಾಧ್ಯಾಯರಿಗೆ ವಿತರಿಸಿ ಗದಗ್ ಜಿಲ್ಲೆಯ ರೋಣ ತಾಲ್ಲೂಕು ಮತ್ತು ಗದಗ್ ಗ್ರಾಮೀಣ ವಿಭಾಗದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ದತ್ತು ಪಡೆದಿರುವ ಗದಗ್ ಜಿಲ್ಲೆಯ 20 ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರು, ಸರ್ಕಾರಿ ದತ್ತು ಶಾಲೆಯ ಸಂಚಾಲನ ಸಮಿತಿಯ ಸದಸ್ಯರೆಲ್ಲರೂ ಭಾಗವಹಿಸಿದ್ದರು.

## ವಾರ್ಷಿಕ ಚಟುವಟಿಕೆಗಳ ಸಮಾರಂಭ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಕೋಶ ಹಾಗೂ ದೈಹಿಕ ಶಿಕ್ಷಣ ಮತ್ತು ಕ್ರೀಡಾ ನಿರ್ದೇಶನಾಲಯದ ವತಿಯಿಂದ ನೇತಾಜಿ ಸುಭಾಸ್ ಚಂದ್ರ ಬೋಸ್ ರವರ ಜಯಂತಿ ಅಂಗವಾಗಿ NSS ವಾರ್ಷಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ನಾಗಾವಿ ಗ್ರಾಮದಲ್ಲಿ ಜರುಗಿದ್ದು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀ ಸುಧೀರಸಿಂಹ ರಾ. ಘೋರ್ಪಡೆರವರು ಕಾರ್ಯಕ್ರಮವನ್ನು ಉದ್ಘಾಟಿಸಿ ರಾಷ್ಟ್ರ ಪ್ರೇಮ, ರಾಷ್ಟ್ರ ಅಭಿವೃದ್ಧಿಯ ವಿಷಯದಲ್ಲಿ ಓಖಖ ಮಹತ್ವದ ಪಾತ್ರವನ್ನು ವಹಿಸುತ್ತದೆ. NSS ನಿಂದ ವಿವಿಧ ರೀತಿಯಲ್ಲಿ ಸಾಮಾಜಮುಖಿ ಚಟುವಟಿಕೆಗಳನ್ನು ಕೈಗೊಳ್ಳಬಹುದು ಮತ್ತು ಯೋಜನಾಬದ್ಧವಾಗಿ ನಿರ್ವಹಿಸಬಹುದು.

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತದಾರ ಜಾಗೃತ ದಿನದ ಅಂಗವಾಗಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದು ಗಣರಾಜ್ಯೋತ್ಸವದ ವಿಶೇಶವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ದಾಖಲೆಗೈದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು ವಿದ್ಯಾರ್ಥಿಗಳಿಂದ ವಿವಿಧ ಕಾರ್ಯಕ್ರಮಗಳು ಬಹುಮಾನ ಪಡೆದ ವಿದ್ಯಾರ್ಥಿ ಗಳಿಂದ ಭಾಷಣ ದೇಶ ಭಕ್ತಿಗೀತೆ ನೃತ್ಯ ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣಗಳನ್ನು ಏರ್ಪಡಿಸ ಲಾಗಿತ್ತು ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕಂಚಿನ ಕಂಠದಿಂದ ಗಣರಾಜ್ಯದ ಅರ್ಥ ಸಂವಿಧಾನದ ಮಹತ್ವ ದೇಶದ ಐಕ್ಯತೆಯನ್ನು ಕಾಪಾಡುವಲ್ಲಿ ಸಂವಿಧಾನದ ಪಾತ್ರ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ಜಾಗೃತಿ ಮೂಡಿಸಿದರು. ◆



**ಕ.ರಾ.ಗ್ರಾ.ಮತ್ತು ಪಂ.ರಾಜ್ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತಎಸ್‌ಚಟಪಲ್ಲಿ, ಕುಲಸಚಿವರಾದ ಪ್ರೊ.ಬಸವರಾಜಎಲ್. ಲಕ್ಕಣ್ಣವರ್ ಶ್ರೀ ಬಸಲಿಂಗಪ್ಪಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಗದಗ, ಗದಗಜಿಲ್ಲೆಯ 20 ಸರಕಾರಿದತ್ತು ಶಾಲೆಯ ಮುಖ್ಯೋಪಾಧ್ಯಾಯರು, ಹಾಗೂ ಸಂಚಾಲನ ಸಮಿತಿ ಸದಸ್ಯರು ಭಾಗವಹಿಸಿದ್ದರು.**



**ಕರ್ನಾಟಕ ಸರ್ಕಾರ**

ಸಂಖ್ಯೆ:ಕಪಂರಾಅ/ಅಭಿವೃದ್ಧಿ/110/2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:20-02-2021.

# ಸುತ್ತೋಲೆ

**ವಿಷಯ : ಮಹಿಳಾ ಸಶಕ್ತೀಕರಣ ಹಾಗೂ ಸ್ಥಳೀಯ ಆಡಳಿತದಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಗಾಗಿ 08 ಮಾರ್ಚ್ ರಿಂದ 30 ಜೂನ್ 2021 ರವರೆಗೆ "ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು "ಮಹಿಳಾ ಗ್ರಾಮ ಸಭೆ"ಗಳನ್ನು ನಡೆಸುವ ಕುರಿತು.**

**ಉಲ್ಲೇಖ: 1. ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ:3ಹೆಚ್**
**2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 364 ಗ್ರಾಪಂಅ 2014, ದಿನಾಂಕ:12-06-2014.**
**3. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 225 ಗ್ರಾಪಂಅ 2020, ದಿನಾಂಕ:28-02-2020.**

***

ತಮಗೆ ತಿಳಿದಿರುವಂತೆ, ಜಾಗತಿಕವಾಗಿ ಹಾಗೂ ನಮ್ಮ ದೇಶದಲ್ಲಿ ಮಹಿಳೆಯರು ಶೈಕ್ಷಣಿಕ, ತಾಂತ್ರಿಕ, ವೈದ್ಯಕೀಯ, ಸಂಶೋಧನೆ, ಕೈಗಾರಿಕಾ, ರಾಜಕೀಯ ಕ್ಷೇತ್ರ, ಆಡಳಿತ ಇತ್ಯಾದಿ ಕ್ಷೇತ್ರಗಳಲ್ಲಿ ಪುರುಷರಷ್ಟೆ ಸಮಾನವಾಗಿ ಕಾರ್ಯ ನಿರ್ವಹಿಸುವುದನ್ನು ಕಾಣುತ್ತೇವೆ. ಸಾಂಸ್ಕೃತಿಕ, ಸಾಹಿತ್ಯ, ಕ್ರೀಡೆ ಮುಂತಾದ ಕ್ಷೇತ್ರಗಳಲ್ಲಿಯೂ ಉತ್ತಮ ಸಾಧನೆಗಳು ಮಾಡಿರುವುದನ್ನು ಕಾಣಬಹುದು. ಈ ಎಲ್ಲಾ ಕ್ಷೇತ್ರಗಳಲ್ಲಿನ ಮಹಿಳೆಯರ ಸಾಧನೆಗಳನ್ನು ಗಮನಿಸಿದರೆ, ಮಹಿಳೆಯರ ಭಾಗವಹಿಸುವಿಕೆ ಮತ್ತು ನಿರ್ಣಯತೆಗೆದುಕೊಳ್ಳುವ ಹಕ್ಕುಗಳು ಸಮಾಜದ ಸರ್ವೋತೋಮುಖ ಅಭಿವೃದ್ಧಿಯಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿರುವುದನ್ನು ಅರ್ಥಮಾಡಿಕೊಳ್ಳಬಹುದು.

ಈ ಪರಿಕಲ್ಪನೆಯಲ್ಲಿ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಕಾರ್ಯಗಳಲ್ಲಿ, ಸ್ಥಳೀಯ ಆಡಳಿತದಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯು ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿರುವುದು ಹಾಗೂ ಸಾರ್ವಜನಿಕ/ಸಮುದಾಯಿಕ ನಿರ್ಧಾರಗಳಲ್ಲಿ ಮಹಿಳೆಯರ ಪಾತ್ರಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು ಲಿಂಗ ಅಸಮಾನತೆಗೆ ದಾರಿಯಾಗಿದೆ, ಕೆಲಸ ಹಾಗೂ ವೇತನಗಳಲ್ಲಿ ತಾರತಮ್ಯ, ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಶೋಷಣೆಗೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ 2015ರ ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳು 2030ರನ್ನು ಭಾರತ ಸರ್ಕಾರವೂ ಒಪ್ಪಿಕೊಂಡಿದ್ದು, ಲಿಂಗಸಮಾನತೆಯ ಗುರಿಯಡಿ, ಲಿಂಗಸಮಾನತೆಯನ್ನು ಸಾಧಿಸಿ ಹೆಣ್ಣು ಮಕ್ಕಳನ್ನು ಹಾಗೂ ಮಹಿಳೆಯರನ್ನು ಸಶಕ್ತರನ್ನಾಗಿಸಬೇಕಾಗಿದೆ.

ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ನಿಜ ಅರ್ಥದಲ್ಲಿ ಸಾಕಾರಗೊಳಿಸಲು ಸ್ಥಳೀಯ ಆಡಳಿತದಲ್ಲಿ ಗ್ರಾಮ ಪಂಚಾಯತಿ ಮತ್ತು ಗ್ರಾಮ ಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಒತ್ತು ನೀಡಬೇಕಾಗಿದೆ. ಗ್ರಾಮದ ಸರಿಸುಮಾರು ಅರ್ಧದಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವ ಮಹಿಳೆಯರು ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಭಾಗವಹಿಸಿ ತಮ್ಮ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಮಂಡಿಸುವುದು ಬಹಳ ಪ್ರಾಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಉಲ್ಲೇಖ (1), (2), (3) ರ ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 3-ಹೆಚ್ ರನ್ವಯ ಮಹಿಳೆಯರಿಗಾಗಿ ಗ್ರಾಮ ಸಭೆಗಳನ್ನು ಆಯೋಜಿಸಲು ಅವಕಾಶ ಕಲ್ಪಿಸಲಾಗಿದೆ ಹಾಗೂ ಪ್ರತೀ ವರ್ಷವೂ ಮಹಿಳೆಯರ ಗ್ರಾಮ ಸಭೆಗಳನ್ನು ನಡೆಸಲಾಗುತ್ತಿದೆ.

ಮುಂದುವರೆದು, ಪ್ರಸಕ್ತ ಕೋವಿಡ್–19ರ ಸಾಂಕ್ರಾಮಿಕ ಪಿಡುಗಿನ ಸಂದರ್ಭದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ, ಬಾಲ್ಯವಿವಾಹ, ಬಾಲಕಾರ್ಮಿಕತೆ, ಅಪೌಷ್ಟಿಕತೆ ಹೆಚ್ಚಿರುವುದು ವರದಿಯಾಗಿದೆ. ಆದಕಾರಣ ಪ್ರಸ್ತುತ ಸಂದರ್ಭದಲ್ಲಿ ಮಹಿಳೆಯರ ಗ್ರಾಮ ಸಭೆ ವಿಶೇಷ ಮಹತ್ವ ಪಡೆದಿದೆ. ಕೋವಿಡ್–19 ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿ ಮಹಿಳಾ ಗ್ರಾಮ ಸಭೆಗಳನ್ನು ಅರ್ಥಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸಬೇಕಾಗಿದೆ. ಈ ಮೂಲಕ ಮಹಿಳೆಯರ ಅಗತ್ಯತೆಗಳಿಗೆ ಸ್ಪಂದಿಸಿ ಅವರ ಅಭಿವೃದ್ಧಿಗೆ ಪೂರಕವಾಗಿ, ಮಹಿಳೆಯರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟುವ ನಿಟ್ಟಿನಲ್ಲಿ ಮತ್ತು ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಗಾಗಿ ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿಗಳನ್ನಾಗಿಸಲು ಇಲಾಖೆಗಳು/ ಇಲಾಖೇತರರು/ ಸ್ಥಳೀಯ ಸಂಘ ಸಂಸ್ಥೆಗಳು ಮತ್ತು ಸಮುದಾಯದ ಸಹಭಾಗಿತ್ವದಲ್ಲಿ 08 ಮಾರ್ಚ್ ರಿಂದ 30 ಜೂನ್ 2021 ರವರೆಗೆ "ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ವನ್ನು ನಡೆಸುವುದು ಉದ್ದೇಶವಾಗಿದೆ.

**ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಭಾಗೀದಾರರ ವಿಶೇಷವಾಗಿ ಸ್ಥಳೀಯ ಮಹಿಳಾ ಸ್ವಸಹಾಯ/ಸ್ತ್ರೀಶಕ್ತಿ ಸಂಘಗಳ ಸಹಭಾಗಿತ್ವದಲ್ಲಿ ಈ ಸುತ್ತೋಲೆಯಲ್ಲಿ ತಿಳಿಸಿರುವಂತೆ ಅಗತ್ಯ ಪೂರ್ವ ಸಿದ್ಧತೆಯೊಂದಿಗೆ ಮಹಿಳೆಯರಿಗಾಗಿ ವಿಶೇಷ ಕಾರ್ಯಕ್ರಮ/ ಚಟುವಟಿಕೆಗಳನ್ನು ಆಯೋಜಿಸಿ, ಅರ್ಥಪೂರ್ಣವಾಗಿ ಮಹಿಳಾ ಗ್ರಾಮ ಸಭೆಗಳನ್ನು ನಡೆಸಿ, ಮಹಿಳೆಯರಿಂದ ಮೂಡಿಬಂದ ಬೇಡಿಕೆ/ಸಮಸ್ಯೆ/ಪ್ರಶ್ನೆಗಳಿಗೆ ಸಂಬಂಧಿಸಿದ ಇಲಾಖೆಗಳು ಸ್ಪಂದಿಸಿ, ಯೋಜನೆ ತಯಾರಿಸಿ ಅನುಷ್ಠಾನಗೊಳಿಸುವ ಮೂಲಕ "ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ವನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಆದೇಶಿಸಿದೆ.**

## "ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ದ ಪೂರ್ವ ತಯಾರಿ:

- ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸಂಬಂಧಿಸಿದ ಉಪ ಸಮಿತಿಗಳಾದ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ, ಬಾಲ ವಿಕಾಸ ಸಮಿತಿ, ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಬಾಲ್ಯ ವಿವಾಹ ತಡೆ ಸಮಿತಿ, ಗ್ರಾಮ ಪಂಚಾಯತಿ ಗ್ರಂಥಾಲಯ, ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶ ಸಮಿತಿ, ಆರೋಗ್ಯ ರಕ್ಷಣೆ ಸಮಿತಿ, ಗ್ರಾಮೀಣ ನೀರು ಸರಭರಾಜು ಮತ್ತು ಸ್ವಚ್ಛತಾ ಸಮಿತಿ ಸೇರಿದಂತೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 (ತಿದ್ದುಪಡಿ 2015)ರ ಪ್ರಕರಣ 61–ಎ ರಡಿಯಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರಚಿಸಲಾದ ವಿವಿಧ ಉಪಸಮಿತಿಯ ಪ್ರತಿನಿಧಿಗಳ ಮತ್ತು ವಿವಿಧ ಇಲಾಖೆ/ಇಲಾಖೇತರ ಭಾಗೀದಾರರ ಸಭೆಯನ್ನು 2021 ಮಾರ್ಚ್ 05 ರೊಳಗೆ ನಡೆಸುವುದು.
- ಈ ಸಭೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಒತ್ತು ನೀಡಿ 08 ಮಾರ್ಚ್ ರಿಂದ 30 ಜೂನ್ 2021ರ ವರೆಗೆ ಗ್ರಾಮ ಪಂಚಾಯಿತಿಯಿಂದ "ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಕುರಿತು ಚರ್ಚಿಸಿ 16 ವಾರಗಳಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳನ್ನು ಸಿದ್ಧಪಡಿಸಿಕೊಳ್ಳುವುದು. (ಅನುಬಂಧ–ಎರಲ್ಲಿ ಮಾದರಿ ತಾತ್ಕಾಲಿಕ ಕಾರ್ಯಕ್ರಮ/ ಚಟುವಟಿಕೆಗಳ ವಿವರವನ್ನು ನೀಡಿದೆ.)
- ಹಿಂದಿನ ವರ್ಷದ ಮಹಿಳಾ ಗ್ರಾಮ ಸಭೆಯ ನಡಾವಳಿಗಳನ್ನು ಪರಾಮರ್ಶಿಸಿ, ಅನುಪಾಲನಾ ವರದಿಯನ್ನು ಗ್ರಾಮವಾರು ಸಿದ್ಧಪಡಿಸಿ, ಸ್ಥಳೀಯ ಸ್ವಸಹಾಯ ಸಂಘಗಳು ಮತ್ತು ಮಕ್ಕಳ ಹಕ್ಕುಗಳ ಹಾಗೂ ಮಹಿಳೆಯರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳೊಂದಿಗೆ ಮುಂಚಿತವಾಗಿ ಹಂಚಿಕೊಂಡು ಅವರುಗಳ ಪ್ರತಿಕ್ರಿಯೆ ಮತ್ತು ಶಿಫಾರಸ್ಸುಗಳನ್ನು ಪಡೆದು ಅಂತಿಮಗೊಳಿಸುವುದು. ಸದರಿ ವರದಿಯನ್ನು ಆಯಾ ಗ್ರಾಮದ 2021ರ ಮಹಿಳಾ ಗ್ರಾಮ ಸಭೆಯಲ್ಲಿ ಪ್ರಸ್ತುತ ಪಡಿಸುವುದು.
- ಪ್ರತಿ ಗ್ರಾಮದ ಮಹಿಳೆಯರ ಜನವರಿ–2020 ರಿಂದ ಡಿಸೆಂಬರ್– 2020ರ ಅಂತ್ಯದವರೆಗೆ ಇರುವಂತೆ ಅಂಕಿ–ಸಂಖ್ಯೆಯ ವಿವರಗಳನ್ನು ಶಾಲಾ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆಯರ ಸಮನ್ವಯತೆಯಲ್ಲಿ ಸಿದ್ಧಪಡಿಸಬೇಕು. ಈ ವಿವರಗಳನ್ನು ಮಹಿಳಾ ಗ್ರಾಮ ಸಭೆಯಲ್ಲಿ ಮಂಡಿಸಬೇಕು. (ಅನುಬಂಧ–ಬಿ, ಮಹಿಳೆಯರ ಸ್ಥಿತಿ ಕುರಿತು ಅಂಕಿ ಸಂಖ್ಯೆಯ ಮಾಹಿತಿ ಸಂಗ್ರಹಿಸಲು ಮಾದರಿ).

- ಕರಪತ್ರದ ಮೂಲಕ ಮತ್ತು ಸ್ಥಳೀಯ ವಿವಿಧ ಪ್ರಕಾರಗಳನ್ನು ಬಳಸಿ "ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ" ಮತ್ತು ಮಹಿಳಾ ಗ್ರಾಮ ಸಭೆ ನಡೆಸುವ ಕುರಿತು ವ್ಯಾಪಕ ಪ್ರಚಾರ ಮಾಡುವುದು.
- ಗ್ರಾಮಗಳಲ್ಲಿನ ಎಲ್ಲಾ ಮಹಿಳಾ ಸ್ವಸಹಾಯ/ಸ್ತ್ರೀಶಕ್ತಿ ಸಂಘಗಳ ಮಹಿಳೆಯರಿಗೆ ತಿಳಿಯಪಡಿಸಿ, ಸ್ವ-ಸಹಾಯ ಸಂಘದ ಎಲ್ಲಾ ಸದಸ್ಯರು ಮಹಿಳಾ ಗ್ರಾಮ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಖಾತರಿ ಪಡಿಸಿಕೊಳ್ಳುವುದು.
- ಈಗಾಗಲೇ ಸರ್ಕಾರದ ಸುತ್ತೋಲೆ ಸಂಖ್ಯೆ:ಕಪಂರಾಅ/ಅಭಿವೃದ್ಧಿ/93/2020 ದಿನಾಂಕ: 04.11.2020ರ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದ ಸುತ್ತೋಲೆಯಲ್ಲಿ ತಿಳಿಸಿರುವಂತೆ ಎಲ್ಲಾ ಗ್ರಾಮ ಪಂಚಾಯಿತಿಗಳು ಫೇಸ್ ಬುಕ್ ಪೇಜ್ ರಚಿಸಲಾಗಿರುವ ಫೇಸ್ಬುಕ್ ಪೇಜ್ನಲ್ಲಿ ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದ ಉದ್ದೇಶಗಳು ಮತ್ತು ಮಹಿಳಾ ಗ್ರಾಮ ಸಭೆ ನಡೆಸುವ ಕುರಿತು ವ್ಯಾಪಕ ಪ್ರಚಾರ ಮಾಡುವುದು.

2. **ಇಲಾಖೆ ಮತ್ತು ಇಲಾಖೇತರರ ಸಮನ್ವಯತೆ:** ಅಭಿಯಾನವನ್ನು ಪರಿಣಾಮಕಾರಿಯಾಗಿ ನಡೆಸಲು ಸಂಬಂಧಿಸಿದವರ ಸಮನ್ವಯತೆ ಬಹಳ ಮುಖ್ಯವಾಗಿದೆ,

- ಮಹಿಳೆಯರಿಗಾಗಿ ತಮ್ಮ ಇಲಾಖೆಯಲ್ಲಿರುವ ಯೋಜನೆಗಳು, ಕಾರ್ಯಕ್ರಮಗಳನ್ನು ಆಯಾ ಇಲಾಖೆಗಳು ಪ್ರತ್ಯೇಕವಾಗಿ ಆಯೋಜಿಸದೆ, ಪೂರ್ವ ಭಾವಿ ಸಿದ್ಧತೆ ಸಭೆಯಲ್ಲಿ ಚರ್ಚಿಸಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸುವುದು.
- ಇಲಾಖೇತರರು, ಸ್ವಯಂ ಸೇವಾ ಸಂಸ್ಥೆಗಳು, ಮಹಿಳಾ ಸಂಘಗಳು ಮಹಿಳೆಯರಿಗಾಗಿ ಪ್ರತ್ಯೇಕ ಕಾರ್ಯಕ್ರಮಗಳನ್ನು ಆಯೋಜಿಸದೆ, ತಮ್ಮ ಕಾರ್ಯಕ್ರಮಗಳನ್ನು ಅಥವಾ ತಾವು ದೇಣಿಗೆದಾರರಿಂದ ಈ ಉದ್ದೇಶಕ್ಕಾಗಿ ಸ್ವೀಕರಿಸಿದ ಅನುದಾನವನ್ನು ಹಾಗೂ ತಾಂತ್ರಿಕ ಬೆಂಬಲದೊಂದಿಗೆ ಈ ಅಭಿಯಾನದಲ್ಲಿ ಸಮನ್ವಯಗೊಳಿಸುವುದು.

3. **ಕಾರ್ಯಚಟುವಟಿಕೆ/ಕಾರ್ಯಕ್ರಮಗಳು:** ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನದ 16 ವಾರಗಳ ಅವಧಿಯಲ್ಲಿ ಪ್ರತೀ ವಾರದಲ್ಲಿ ಒಂದು ಕಾರ್ಯಕ್ರಮ/ಚಟುವಟಿಕೆಯನ್ನು ಕಡ್ಡಾಯವಾಗಿ ನಡೆಸುವುದು. ಸಾಂಸ್ಕೃತಿಕ, ಮನರಂಜನೆ, ಕ್ರೀಡೆ, ಆರೋಗ್ಯ/ ಪೌಷ್ಟಿಕಾಂಶ/ನೈರ್ಮಲ್ಯ, ಮಹಿಳಾ ಕಾನೂನುಗಳು ಮುಂತಾದವುಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳು ಸ್ಥಳೀಯವಾಗಿ ಮಹಿಳೆಯರ ಅಗತ್ಯತೆ ಅನುಸರಿಸಿ ಅಥವಾ ಅವರ ಸಶಕ್ತೀಕರಣಕ್ಕೆ ಉಪಯುಕ್ತವಾಗುವ ಕಾರ್ಯಕ್ರಮ/ಚಟುವಟಿಕೆಗಳನ್ನು ಆಯೋಜಿಸುವುದು. (ಅನುಬಂಧ-ಎರಲ್ಲಿ ತಿಳಿಸಿರುವಂತೆ ಕಾರ್ಯಕ್ರಮ/ಚಟುವಟಿಕೆಗಳನ್ನು ಆಯೋಜಿಸುವುದು.)

**"ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ-08 ಮಾರ್ಚ್ 2021": ಪ್ರತೀ ಗ್ರಾಮ ಪಂಚಾಯತಿಯಲ್ಲಿ "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ" ಯನ್ನು ಆಯೋಜಿಸುವುದು ಹಾಗೂ ಈ ಮೂಲಕ "ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಕ್ಕೆ ಚಾಲನೆ ನೀಡುವುದು.**

4. **ಮಹಿಳಾ ಗ್ರಾಮ ಸಭೆಗಳ ಆಯೋಜನೆ:**

- ಆಯಾ ತಾಲ್ಲೂಕು ಕಾರ್ಯನಿರ್ವಾಹಕಾಧಿಕಾರಿಯವರು ನಿಗದಿಗೊಳಿಸಿದ ದಿನ ಮಹಿಳಾ ಗ್ರಾಮ ಸಭೆಯನ್ನು ನಡೆಸುವುದು.
- ಮಹಿಳಾ ಗ್ರಾಮಸಭೆಯಮುಂಚಿತವಾಗಿ ಮಹಿಳಾ ವಾರ್ಡ್ ಸಭೆಗಳನ್ನು ಪೂರ್ಣಗೊಳಿಸುವುದು.
- ಮಹಿಳಾ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳಿಗೆ ಮಹಿಳೆಯರು ಸ್ಥಳೀಯ ವಿಶೇಷ ಸಾಂಪ್ರದಾಯಿಕ ಉಡುಪುಗಳನ್ನು ತೊಟ್ಟು ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸುವುದು.

**4.1. ಸಲಹಾ ಪೆಟ್ಟಿಗೆ: ಬೇಡಿಕೆ/ಸಮಸ್ಯೆ/ಪ್ರಶ್ನೆಗಳನ್ನು ಬರೆದು ಹಾಕಲು**

- "ಸಲಹಾ ಪೆಟ್ಟಿಗೆ" ಯನ್ನು ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಜನವಸತಿ ಪ್ರದೇಶದಲ್ಲಿರುವ ಅಂಗನವಾಡಿ ಕೇಂದ್ರ, ಪಡಿತರ ವಿತರಣ ಕೇಂದ್ರ, ಸಹಕಾರ ಸಂಘಗಳಲ್ಲಿ, ಶಾಲೆ, ಗ್ರಾಮ ಪಂಚಾಯತಿ ಗ್ರಂಥಾಲಯ, ಗ್ರಾಮ ಪಂಚಾಯತಿ ಕಚೇರಿ ಆವರಣ ಸೇರಿದಂತೆ ಇತರೆ ಸುರಕ್ಷಿತ ಸಾರ್ವಜನಿಕ ಸ್ಥಳಗಳಲ್ಲಿ ವ್ಯವಸ್ಥೆ ಮಾಡುವುದು.

- ಮಹಿಳೆಯರು ಮತ್ತು ಮಹಿಳೆಯರ ಪರವಾಗಿ ಬೇಡಿಕೆ/ಸಮಸ್ಯೆ/ಪ್ರಶ್ನೆಗಳನ್ನು ಬರೆದು ಹಾಕಲು ಅನುಕೂಲವಾಗುವಂತೆ ಸಲಹಾ ಪೆಟ್ಟಿಗೆಯನ್ನು ಆಕರ್ಷಣ ೀಯವಾಗಿ ತಯಾರಿಸುವುದು ಹಾಗೂ ಪೆಟ್ಟಿಗಿಗೆ ಮೇಲೆ ಉದ್ದೇಶ ಮತ್ತು ಕೋರಿಕೆ ಪತ್ರ ವಿವರ ಇರುವ ಪೋಸ್ಟರ್ನ್ನು ಬರೆದು ಅಂಟಿಸುವುದು. (ಅನುಬಂಧ–ಸಿ)
- "ಸಲಹಾ ಪೆಟ್ಟಿಗೆ"ಯ ಮೇಲೆ ಮಹಿಳೆಯರಿಗೆ ಸಂಬಂಧಿಸಿದ ಬೇಡಿಕೆ/ಸಮಸ್ಯೆ/ಪ್ರಶ್ನೆಗಳನ್ನು ಬರೆದು ಹಾಕಲು ಕೊನೆಯ ದಿನಾಂಕವನ್ನು ಪ್ರಕಟಿಸಬೇಕು ಹಾಗೂ ಈ ಕುರಿತು ವ್ಯಾಪಕ ಪ್ರಚಾರ ಮಾಡುವುದು.
- ಗ್ರಾಮ ಪಂಚಾಯಿತಿಯಿಂದ ಅಗತ್ಯವಿರುವಷ್ಟು ಕೋರಿಕೆ ಪತ್ರಗಳನ್ನು ಮುದ್ರಿಸಿ ಸಲಹಾ ಪೆಟ್ಟಿಗೆ ಇಡುವ ಸ್ಥಳದಲ್ಲಿ ಲಭ್ಯವಿರುವಂತೆ ಮಾಡುವುದು ಹಾಗೂ ಸ್ಥಳೀಯ ಅಂಗನವಾಡಿ, ಆಶಾ ಮತ್ತು ಆರೋಗ್ಯ ಕಾರ್ಯಕರ್ತೆಯರ ಹತ್ತಿರ ಲಭ್ಯವಿರುವಂತೆ ನೋಡಿಕೊಳ್ಳುವುದು.
- ಕೋರಿಕೆ ಪತ್ರಗಳನ್ನು ಸಾಮಾಜಿಕ ಜಾಲತಾಣ, ವಾಟ್ಸಾಪ್ ಇತ್ಯಾದಿಗಳ ಮೂಲಕ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯಕ್ಕೆ ತಲುಪುವಂತೆ ಹಾಗೂ ಮುದ್ರಿಸಲಾದ ಕೋರಿಕೆ ಪತ್ರಗಳು ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರಿಗೆ ಲಭ್ಯವಿರುವಂತೆ ಮಾಡುವುದು.
- ಮಹಿಳೆಯರಿಂದ "ಸಲಹಾ ಪೆಟ್ಟಿಗೆ"ಯಲ್ಲಿ ಬರೆದು ಹಾಕಲಾದ ಸಮಸ್ಯೆಗಳು/ ಬೇಡಿಕೆಗಳು/ ಪ್ರಶ್ನೆಗಳನ್ನು ಪಟ್ಟಿ ಮಾಡಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ನಮೂನೆ–2ರಲ್ಲಿ ತಯಾರಿಸುವುದು ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಮಹಿಳಾ ಗ್ರಾಮ ಸಭೆಯಲ್ಲಿ ಮಂಡಿಸುವುದು.

**4.2. ಮಹಿಳಾ ವಾರ್ಡ್ ಸಭೆ:**

- ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಜನವಸತಿ ಪ್ರದೇಶಗಳನ್ನು ಒಳಗೊಂಡಂತೆ ಮಹಿಳೆಯರ ವಾರ್ಡ್ ಸಭೆಗಳನ್ನು ನಡೆಸುವುದು. ಕೋವಿಡ್–19 ಹರಡದಂತೆ ಎಲ್ಲಾ ಮುಂಜಾಗ್ರತ ಕ್ರಮಗಳನ್ನು (ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಪಾಲಿಸುವುದು, ಸ್ಯಾನಿಟೈಜರ್ ಬಳಸುವುದು) ಅನುಸರಿಸುವುದು.
- **ಮಹಿಳೆಯರ ವಾರ್ಡ್ ಸಭೆಗಳ ನಿರ್ವಹಣೆಯ ಜವಬ್ದಾರಿಯನ್ನು ಸ್ಥಳೀಯ ಅಂಗನವಾಡಿ ಕಾರ್ಯಕರ್ತೆಯರಿಗೆ ವಹಿಸುವುದು. ಅಂಗನವಾಡಿ ಕಾರ್ಯಕರ್ತೆಯರು ಮಹಿಳಾ ವಾರ್ಡ್ ಸಭೆ ಕುರಿತು ವ್ಯಾಪಕ ಪ್ರಚಾರದ ಮೂಲಕ ಮಹಿಳೆಯರಿಗೆ ತಿಳಿಯಪಡಿಸುವುದು ಹಾಗೂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಈ ಸಂಬಂಧ ಅಗತ್ಯ ಕ್ರಮ ವಹಿಸುವುದು.**
- ಮಹಿಳಾ ವಾರ್ಡ್ ಸಭೆಗಳಿಗೆ ಮಹಿಳೆಯರು ಸ್ಥಳೀಯ ವಿಶೇಷ ಸಾಂಪ್ರದಾಯಿಕ ಉಡುಪುಗಳನ್ನು ತೊಟ್ಟು ವಾರ್ಡ್ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು.
- ಆಯಾ ವಾರ್ಡ್ ಸಂಬಂಧಪಡುವ ಗ್ರಾಮ ಪಂಚಾಯಿತಿ ಚುನಾಯಿತ ಸದಸ್ಯರು ಮೆಲುಸ್ತುವಾರಿ ವಹಿಸುವುದು ಮತ್ತು ಮಹಿಳಾ ವಾರ್ಡ್ ಸಬೆಯಲ್ಲಿ ಕಡ್ಡಾಯವಾಗಿ ಭಾಗವಹಿಸುವುದು.
- ಮಹಿಳಾ ವಾರ್ಡ್ ಸಭೆಯನ್ನು ಸ್ವಸಹಾಯ/ಸ್ತ್ರೀಶಕ್ತಿ ಸಂಘಗಳ, ವಿವಿಧ ಸಮುದಾಯದ ಮತ್ತು ದುಡಿಯುವ ಮಹಿಳೆಯರ ಅನುಕೂಲವಾಗುವ ದಿನ ಮತ್ತು ಸಮಯಕ್ಕೆ ನಡೆಸುವುದು.
- ಸಭೆಗಳಲ್ಲಿ ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ವಿಶೇಷವಾಗಿ ವಿಕಲಚೇತನ ಮಹಿಳೆಯರಿಗೆ ಭಾಗವಹಿಸಲು ಮತ್ತು ಚರ್ಚಿಸಲು ಸಮಾನ ಅವಕಾಶ ನೀಡುವುದು.
- ಅಂಗನವಾಡಿ, ಆಶಾಕಾರ್ಯಕರ್ತೆಯರು ತಮ್ಮ ಬೇಡಿಕೆಗಳು/ಸಮಸ್ಯೆಗಳು/ಪ್ರಶ್ನೆಗಳನ್ನು ಸಹ ವ್ಯಕ್ತಪಡಿಸಲು, ಚರ್ಚಿಸಲು ಸಮಾನ ಅವಕಾಶ ಕಲ್ಪಿಸುವುದು.

**ಮಹಿಳಾ ವಾರ್ಡ್ ಸಭೆಯಲ್ಲಿ,**

- ಮಹಿಳೆಯರ ಹಕ್ಕುಗಳು, ಮಹಿಳೆಯರಿಗಾಗಿ ಸರ್ಕಾರದಿಂದ ಇರುವ ವಿವಿಧ ಯೋಜನೆಗಳು, ಸೌಲಭ್ಯಗಳ ಕುರಿತು ಸಂಕ್ಷಿಪ್ತವಾಗಿ ತಿಳಿಸುವುದು.
- ವಾರ್ಡ್ ಸಭೆಯಲ್ಲಿ ಮಹಿಳೆಯರಿಗೆ, ತಮ್ಮ ವೈಯಕ್ತಿಕ ಸಮಸ್ಯೆಗಳು, ಕೌಟುಂಬಿಕ ಸಮಸ್ಯೆಗಳು, ಮಕ್ಕಳ ಶಿಕ್ಷಣ/ಶಾಲೆ, ಆರೋಗ್ಯ ಸೇವೆ, ರಕ್ಷಣೆ ವ್ಯವಸ್ಥೆ, ಆಹಾರ ಮತ್ತು ಪೌಷ್ಟಿಕತೆ, ವಿಪತ್ತು ನಿರ್ವಹಣೆ, ನೀರು/ನೈರ್ಮಲ್ಯ/ಶುಚಿತ್ವ/ ರಸ್ತೆ/ಸಾರ್ವಜನಿಕ ಕಟ್ಟಡ, ಶಾಲೆ/ಅಂಗನವಾಡಿ, ವಸತಿ ಸೌಲಭ್ಯ, ಮಾನವ ಸಂಪನ್ಮೂಲ ಮುಂತಾದ ಕ್ಷೇತ್ರ/ವಿಷಯಗಳಿಗೆ ಸಂಬಂಧಿಸಿದ ತಮ್ಮ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳ ಕುರಿತು ಮಾತನಾಡಲು ಮುಕ್ತ ಅವಕಾಶ ನೀಡುವುದು.
- ಪ್ರಮುಖವಾಗಿ ಕೋವಿಡ್–19ರ ಲಾಕ್ಡೌನ್ ಸಮಯದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಅಪೌಷ್ಟಿಕತೆ ಹಾಗೂ ಬಾಲ್ಯವಿವಾಹಗಳ ಕುರಿತು ಚರ್ಚಿಸಲು ತಿಳಿಸುವುದು.
- ಮಹಿಳೆಯರು ಪಡೆಯುತ್ತಿರುವ ಸೌಲಭ್ಯಗಳು ಹಾಗೂ ವ್ಯವಸ್ಥೆಗಳ ಕುರಿತು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ತಿಳಿಸುವುದು.
- ಮಹಿಳಾ ವಾರ್ಡ್ ಸಭೆಯ ಚರ್ಚೆಯಲ್ಲಿ ಮಹಿಳೆಯರಿಂದ ಮೂಡಿಬಂದ ಸಮಸ್ಯೆಗಳು/ಬೇಡಿಕೆಗಳ/ಪ್ರಶ್ನೆಗಳು ಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ನಮೂನೆ–2ರಲ್ಲಿ ತಯಾರಿಸುವುದು.
- ಗ್ರಾಮ ಪಂಚಾಯತಿ ಮಟ್ಟದ ಮಹಿಳಾ ಗ್ರಾಮ ಸಬೆಯಲ್ಲಿ ಆಯಾ ವಾರ್ಡ್ ಪ್ರತಿನಿಧಿಸಿ ಭಾಗವಹಿಸಲು, ಸ್ವಸಹಾಯ/ಸ್ತ್ರೀಶಕ್ತಿ ಸಂಘಗಳ ಹಾಗೂ ಎಲ್ಲಾ ಸಮುದಾಯ/ವಿಭಾಗದ ಮಹಿಳೆಯರನ್ನು ಪ್ರತಿನಿಧಿಸುವಂತೆ ಹಾಗೆ ವಾರ್ಡ್ ಸಭೆಯಲ್ಲಿಯೇ ಗುರುತಿಸುವುದು. ಮಹಿಳಾ ವಾರ್ಡ್ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಮಹಿಳೆಯರ ಮತ್ತು ಇತರರ ಸಹಿಗಳನ್ನು ಸಂಬಂಧಿಸಿದ ನಡಾವಳಿ/ಹಾಜರಾತಿ ವಹಿಯಲ್ಲಿ ಪಡೆಯುವುದು.

**4.3. ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಿಳಾ ಗ್ರಾಮ ಸಭೆ:**

- ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ನಿಗದಿಪಡಿಸಲಾದ ದಿನಾಂಕ ಮತ್ತು ಗ್ರಾಮ ಪಂಚಾಯಿತಿ ನಿಗದಿಪಡಿಸಿದ ಸ್ಥಳದಲ್ಲಿ ಗ್ರಾಮ ಪಂಚಾಯಿತಿ ಮಟ್ಟದ ಮಹಿಳಾ ಗ್ರಾಮ ಸಭೆಯನ್ನು ನಡೆಸುವುದು.
- ಗ್ರಾಮ ಸಭೆ ನಡೆಸುವ ಸಮಯದಲ್ಲಿ ಸಾಮಾನ್ಯ ಆರೋಗ್ಯ ತಪಾಸಣೆ ವಿಶೇಷವಾಗಿ ರಕ್ತಹೀನತೆ (Anemia) ತಪಸಣಾ ಆರೋಗ್ಯ ಶಿಬಿರಾ ಕಾರ್ಯಕ್ರಮವನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳ ಸಹಕಾರದೊಂದಿಗೆ ಕಡ್ಡಾಯವಾಗಿ ಆಯೋಜಿಸುವುದು.
- ಮಹಿಳೆಯರ ಗ್ರಾಮ ಸಭೆಗಳಲ್ಲಿ ಆಯಾ ವಾರ್ಡ್ ಸಭೆಯಲ್ಲಿ ಗುರುತಿಸಲಾದ ಮಹಿಳೆಯರು ಭಾಗವಹಿಸಲು ವಾರ್ಡ್ ಸಭೆಯನ್ನು ನಿರ್ವಹಿಸಿದ ಅಂಗನವಾಡಿ ಕಾರ್ಯಕರ್ತೆಯರು ಸೂಕ್ತ ಕ್ರಮವಹಿಸುವುದು.
- ವಿವಿಧ ಇಲಾಖೆಗಳ ಸ್ಥಳೀಯ ಅಧಿಕಾರಿಗಳು ಹಾಜರಾಗುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಗೈರು ಹಾಜರಾದ ಇಲಾಖಾ ಅಧಿಕಾರಿಗಳ ವಿವರಗಳನ್ನು ದಾಖಲಿಸಿ ಮೇಲಾಧಿಕಾರಿಗಳ ಗಮನಕ್ಕೆ ತರುವುದು.
- ಗ್ರಾಮ ಪಂಚಾಯಿತಿಯ ಚುನಾಯಿತ ಸದಸ್ಯರು ಭಾಗವಹಿಸುವಂತೆ ನೋಡಿಕೊಳ್ಳುವುದು.
- ಮಹಿಳಾ ಗ್ರಾಮ ಸಭೆಗಳಿಗೆ ಮಹಿಳೆಯರು ಸ್ಥಳೀಯ ವಿಶೇಷ ಸಾಂಪ್ರದಾಯಿಕ ಉಡುಪುಗಳನ್ನು ತೊಟ್ಟು ಗ್ರಾಮ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು.
- ಮಹಿಳೆಯರ ಹಕ್ಕುಗಳನ್ನು ಸಂಕ್ಷಿಪ್ತವಾಗಿ ತಿಳಿಸುವುದು.
- ಮಹಿಳೆಯರಿಗಾಗಿ ಸರ್ಕಾರದಿಂದ ಇರುವ ವಿವಿಧ ಯೋಜನೆಗಳು, ಸೌಲಭ್ಯಗಳ ಕುರಿತು RDPR WebSite ನಲ್ಲಿ ಪ್ರಕಟಿಸಲಾದ PPTನ್ನು ಮತ್ತು ವಿವಿಧ ಇಲಾಖೆಯ ಯೋಜನೆಗಳ ಪೋಸ್ಟರ್ ಗಳನ್ನು ಪ್ರಸ್ತುತಪಡಿಸುವುದು ಹಾಗೂ ಸಂಕ್ಷಿಪ್ತವಾಗಿ ತಿಳಿಸುವುದು.
- ಹಿಂದಿನ ವರ್ಷದ ಮಹಿಳಾ ಗ್ರಾಮ ಸಭೆಯ ನಿರ್ಣಯಗಳನ್ನು ಹಾಗೂ ಅನುಪಾಲನಾ ವರದಿಯನ್ನು ಮಂಡಿಸುವುದು ಹಾಗೂ ಚರ್ಚಿಸಿ ನಡಾವಳಿಗಳನ್ನು ದಾಖಲಿಸುವುದು.

- ಮಹಿಳಾ ವಾರ್ಡ್ ಸಭೆಗಳಲ್ಲಿ ಮತ್ತು ಸಲಹಾ ಪೆಟ್ಟಿಗೆಯ ಮೂಲಕ ಮೂಡಿಬಂದ ಸಮಸ್ಯೆಗಳು/ಬೇಡಿಕೆಗಳ/ ಪ್ರಶ್ನೆಗಳು ಪಟ್ಟಿಯನ್ನು ಗ್ರಾಮ/ವಾರ್ಡ್ ವಾರು ಕ್ರೋಢೀಕರಿಸಿ ಸಭೆಯಲ್ಲಿ ಮಂಡಿಸುವುದು.
- ಮಹಿಳಾ ವಾರ್ಡ್ ಸಭೆಯಲ್ಲಿ ಮತ್ತು ಸಲಹಾ ಪೆಟ್ಟಿಗೆ ಮೂಲಕ ಮೂಡಿಬಂದ ಮಹಿಳೆಯರ ಬೇಡಿಕೆ/ಸಮಸ್ಯೆ/ಪ್ರಶ್ನೆಗಳ ಪಟ್ಟಿಯನ್ನು ಚರ್ಚಿಸಿ ಸರ್ವಾನುಮತದಿಂದ ಆದ್ಯತೀಕರಿಸಿ ಅಂತಿಮ ಬೇಡಿಕೆ/ಸಮಸ್ಯೆ/ಪ್ರಶ್ನೆಗಳ ಪಟ್ಟಿಯನ್ನು ತಯಾರಿಸುವುದು. (ನಮೂನೆ–2ರಲ್ಲಿ ದಾಖಲಿಸುವುದು)
- ಮಹಿಳಾ ಗ್ರಾಮ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಮಹಿಳೆಯರ ಮತ್ತು ಇತರರ ಸಹಿಗಳನ್ನು ಸಂಬಂಧಿಸಿದ ನಡವಳಿ/ ಹಾಜರಾತಿ ವಹಿಯಲ್ಲಿ ಪಡೆಯುವುದು.
- **ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವ–ಸಹಾಯ ಸಂಘಗಳು/ಸ್ತ್ರೀ ಶಕ್ತಿ ಸಂಘಗಳು/ ಮಹಿಳೆಯರು ಸ್ಥಳೀಯವಾಗಿ ತಯಾರಿಸಲಾದ ಬಟ್ಟೆ ಬ್ಯಾಗ್/ಉಡುಪುಗಳು/ ಆಟಿಕೆಗಳು/ ಆಕರ್ಷಣ ೀಯ ವಸ್ತುಗಳನ್ನು ಪ್ರದರ್ಶಿಸಲು ಗ್ರಾಮ ಸಭೆಯಲ್ಲಿ ಅವಕಾಶ ಕಲ್ಪಿಸುವುದು.**
- ಅಂಗನವಾಡಿ, ಆಶಾಕಾರ್ಯಕರ್ತೆಯರು ತಮ್ಮ ಬೇಡಿಕೆಗಳು/ಸಮಸ್ಯೆಗಳು/ಪ್ರಶ್ನೆಗಳನ್ನು ಸಹ ವ್ಯಕ್ತಪಡಿಸಲು ಚರ್ಚಿಸಲು ಸಮಾನ ಅವಕಾಶ ಕಲ್ಪಿಸುವುದು.

### 4.4 ಗ್ರಾಮ ಪಂಚಾಯಿತಿ ಡೆಸ್ಕ್ (GP Desk)

- ಮಹಿಳಾ ವಾರ್ಡ್ ಸಭೆ ಮತ್ತು ಗ್ರಾಮ ಸಭೆ ನಡೆಯುವ ಸಂದರ್ಭದಲ್ಲಿ ಮಹಿಳೆಯರಿಗೆ ವಿವಿಧ ಯೋಜನೆಗಳ ಮಾಹಿತಿ ಪಡೆಯಲು ಅನುಕೂಲವಾಗುವಂತೆ ಗ್ರಾಮ ಪಂಚಾಯಿತಿ ಡೆಸ್ಕ್ ವ್ಯವಸ್ಥೆ ಮಾಡುವುದು. ಈ ಡೆಸ್ಕ್ ಜವಾಬ್ದಾರಿಯನ್ನು ಆಶಾ ಕಾರ್ಯಕರ್ತೆಯರಿಗೆ ವಹಿಸುವುದು. ಅನುಬಂಧ–ಡಿ ರಲ್ಲಿ ತಿಳಿಸಿರುವ ಕಿರು–ಪುಸ್ತಕ/ಪೋಸ್ಟರ್‌ಗಳನ್ನು ಮುದ್ರಿಸಿ ಮಹಿಳೆಯರಿಗೆ ಲಭ್ಯವಿರುವಂತೆ ನೋಡಿಕೊಳ್ಳುವುದು.
- ಈ ಗ್ರಾಮ ಪಂಚಾಯಿತಿ ಡೆಸ್ಕ್‌ನ ಮೂಲಕ NRLM ಅಡಿಯಲ್ಲಿ ದಾಖಲಾಗದೇ ಇರುವ ಮಹಿಳೆಯರನ್ನು ಗುರುತಿಸಿ ಸ್ವ–ಸಹಾಯ ಸಂಘಗಳ ಗುಂಪಿನಲ್ಲಿ ದಾಖಲಿಸಲು ಪಟ್ಟಿ ಮಾಡುವುದು.
- ಈ ಗ್ರಾಮ ಪಂಚಾಯಿತಿ ಡೆಸ್ಕ್‌ನ ಮೂಲಕ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ದಾಖಲಾಗದೇ ಇರುವ ಮಹಿಳೆಯರನ್ನು ಗುರುತಿಸಿ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಜಾಬ್ ಕಾರ್ಡ್‌ನಲ್ಲಿ ದಾಖಲಿಸಲು ಪಟ್ಟಿ ಮಾಡುವುದು.
- ಈ ಗ್ರಾಮ ಪಂಚಾಯಿತಿ ಡೆಸ್ಕ್‌ನ ಮೂಲಕ ಮಹಿಳೆಯರಿಗೆ ಸರ್ಕಾರದ ವಿವಿಧ ಇಲಾಖೆಯ ಯೋಜನೆಗಳ ಸೌಲಭ್ಯಗಳನ್ನು ತಿಳಿಸುವುದು ಹಾಗೂ ಸಂಬಂಧಿಸಿದ ಯೋಜನೆಗಳಿಗೆ ಅರ್ಹ ಇರುವ ಮಹಿಳೆಯರ ಫಲಾನುಭವಿಗಳ ಪಟ್ಟಿಯನ್ನು ತಯಾರಿಸುವುದು.
- ಸಾಂಪ್ರದಾಯಿಕ/ಆಧುನಿಕ ಜೀವನ ಕೌಶಲ್ಯ ತರಬೇತಿ ಪಡೆಯಲು ಇಚ್ಛಿಸುವ ಮಹಿಳೆಯರು ಮತ್ತು ಕಿಶೋರಿಯರ ಪಟ್ಟಿಯನ್ನು ತಯಾರಿಸುವುದು ಹಾಗೂ ಬೇಡಿಕೆ ಆಧಾರಿಸಿ NRLMನ RESETI/RuDSETI ರಡಿಯಲ್ಲಿ ತರಬೇತಿಗಳನ್ನು ನಡೆಸಲಾಗುವುದು ಎಂದು ತಿಳಿಸುವುದು.
- ವಿವಿಧ ಯೋಜನೆಗಳಲ್ಲಿ ಫಲಾನುಭಿವಗಳಾದ ಗ್ರಾಮ ಪಂಚಾಯಿತಿಯ ಮಹಿಳೆಯರ ಪ್ರಸ್ತುತ ದಾಖಲಾದ ವಿವರಗಳು ಮತ್ತು ಗ್ರಾಮ ಪಂಚಾಯಿತಿಯ ಡೆಸ್ಕ್ ಮುಖಾಂತರ ನೋಂದಣಿಗೆ ಗುರುತಿಸಿದ ಮಹಿಳೆಯರ ಸಂಖ್ಯೆಗಳನ್ನು ನಮೂನೆ–4ರಲ್ಲಿ ದಾಖಲಿಸುವುದು ಹಾಗೂ ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿದ ನಮೂನೆಯಲ್ಲಿ ದಾಖಲಿಸುವುದು.

## 5. ಚಟುವಟಿಕೆಗಳ ಯೋಜನೆ ತಯಾರಿ ಮತ್ತು ಅನುಷ್ಠಾನ:

- ಈ ಅಭಿಯಾನದ ಪೂರ್ವ ಸಿದ್ಧತಾ ಸಭೆಯಲ್ಲಿ ಯೋಜಿಸಲಾದ ಕಾರ್ಯಚಟುವಟಿಕೆಗಳ ತಾತ್ಕಾಲಿಕ ವೇಳಾಪಟ್ಟಿಯನ್ನು ನಮೂನೆ–1ರಲ್ಲಿ ದಾಖಲಿಸುವುದು.

- ಮಹಿಳಾ ಗ್ರಾಮ ಸಭೆಯಲ್ಲಿ ಅಂತಿಮಗೊಳಿಸಲಾದ ಮಹಿಳೆಯರ ಬೇಡಿಕೆ/ಸಮಸ್ಯೆ/ಪ್ರಶ್ನೆಗಳ ಅನುಷ್ಠಾನಕ್ಕೆ ಯೋಜನೆಯನ್ನು ಗ್ರಾಮ ಪಂಚಾಯಿತಿಯಿಂದ ತಯಾರಿಸಿ ಅಗತ್ಯ ಕ್ರಮ ಕೈಗೊಳ್ಳುವುದು. (ನಮೂನೆ-3ರಲ್ಲಿ ದಾಖಲಿಸುವುದು)
- ಮಹಿಳೆಯರ ಬೇಡಿಕೆ/ಸಮಸ್ಯೆ/ಪ್ರಶ್ನೆಗಳನ್ನು ಆದ್ಯತೆ ಮತ್ತು ನಿರ್ಣಯಗಳ ಅನುಸಾರ ಪರಿಹರಿಸಲು ಕ್ರಮವಹಿಸುವುದು.

**6. ಅನುಷ್ಠಾನ ಮತ್ತು ಉಸ್ತುವಾರಿ ಪ್ರಕ್ರಿಯೆ:**

**ಗ್ರಾಮ ಪಂಚಾಯಿತಿ:**

- ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಮಹಿಳೆಯರಿಗಾಗಿ ವಾರ್ಡ್ ಮಟ್ಟದ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಮಹಿಳಾ ವಾರ್ಡ್/ಗ್ರಾಮ ಸಭೆಗಳನ್ನು ನಡೆಸಲು ಸುತ್ತೋಲೆಯಲ್ಲಿ ತಿಳಿಸಿರುವಂತೆ ಸೂಕ್ತ ಕ್ರಮ ವಹಿಸುವುದು.
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯಿತಿ ಗ್ರಂಥಾಲಯ ಆವರಣದಲ್ಲಿ ಮಹಿಳಾ ಸಶಕ್ತೀಕರಣದ ಬಗ್ಗೆ ಕನಿಷ್ಠ 06 ವಿಚಾರಣಾ ಸಂಕಿರಣ (ಸೆಮಿನಾರ್)/ಚರ್ಚೆ/ಉಪನ್ಯಾಸ ಕಾರ್ಯಕ್ರಮಗಳನ್ನು ಮುಖಾ-ಮುಖಿ, Youtube live ಮತ್ತು Facebook live ಮೂಲಕ ಆಯೋಜಿಸುವಂತೆ ಕ್ರಮಕೈಗೊಳ್ಳವುದು.
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಮಹಿಳಾ ಗ್ರಾಮ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ ಕುರಿತು ಮಹಿಳೆಯರಿಗೆ, ಎಲ್ಲಾ ಇಲಾಖೆಗಳ ಸ್ಥಳೀಯ ಸಿಬ್ಬಂದಿಗಳಿಗೆ, ಸ್ಥಳೀಯ ಮಹಿಳೆಯರಿಗೆ, ಮಹಿಳಾ ಸ್ವಸಹಾಯ/ಸ್ತ್ರೀಶಕ್ತಿ ಗುಂಪುಗಳಿಗೆ, ಸಂಜೀವಿನಿ ಕಾರ್ಯಕ್ರಮದ ಸಿಬ್ಬಂದಿಗಳಿಗೆ, ಸ್ಥಳಿಯ ಮಹಿಳಾ ಮತ್ತು ಯುವತಿ ಸಂಘಗಳಿಗೆ ಮಾಹಿತಿ ನೀಡುವುದು.
- ಪ್ರಸ್ತುತ NRLM ಅಡಿಯಲ್ಲಿ ನೋಂದಾಯಿತ ಸ್ವ-ಸಹಾಯ ಗುಂಪುಗಳ ಮಹಿಳೆಯರನ್ನು ಗ್ರಾಮ ಪಂಚಾಯಿತಿಯ ಗ್ರಂಥಾಲಯಕ್ಕೆ ಸದಸ್ಯತ್ವ ಮಾಡಿಸಿಕೊಳ್ಳುವುದು.
- ಮಹಿಳೆಯರ ಗ್ರಾಮ ಸಭೆಯ ಫೋಟೋ, ವೀಡಿಯೋ, ನಡವಳಿಗಳ ದಾಖಲೀಕರಣ ಮಾಡುವುದು ಹಾಗೂ ಸೂಚಿಸಲಾದ ನಮೂನೆಗಳಲ್ಲಿ ಮಾಹಿತಿಯನ್ನು ನಿಗದಿತ ಸಮಯದಲ್ಲಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು ಮತ್ತು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.
- ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ ಕುರಿತು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿದ ನಮೂನೆಗಳಲ್ಲಿ ನಮೂದಿಸುವುದು.

**ತಾಲ್ಲೂಕು ಪಂಚಾಯಿತಿ:**

- ತಾಲ್ಲೂಕು ಮಟ್ಟದಲ್ಲಿ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಇವರು ತಮ್ಮ ತಾಲ್ಲೂಕಿನ ಅಭಿಯಾನದ ನೋಡಲ್ ಅಧಿಕಾರಿಯಾಗಿ ಜವಬ್ದಾರಿ ನಿರ್ವಹಿಸುವುದು.
- ಜಿಲ್ಲೆಯ NRLMನ ಜಿಲ್ಲಾ ಯೋಜನಾ ವ್ಯವಸ್ಥಾಪಕರ ಸಹಯೋಗದಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲೆಯಲ್ಲಿರುವ ಕೌಶಲ್ಯ ತರಬೇತಿ (DDUGKY) ಸಂಬಂಧಿಸಿದ ಯೋಜನಾ ಅನುಷ್ಠಾನದ ಸಂಸ್ಥೆಗಳ (PIA) ಮೂಲಕ ಆಯೋಜಿಸುವ ತರಬೇತಿಗಳು, ತರಬೇತಿಗೆ ನೋಂದಾಯಿಸಿಕೊಳ್ಳುವ ವಿಧಾನ, ತರಬೇತಿಯ ಅವಧಿ, ತರಬೇತಿಯ ಸ್ಥಳ, ತರಬೇತಿಯಿಂದ ಪ್ರಯೋಜನಗಳ ಕುರಿತು ಕಾರ್ಯಾಗಾರವನ್ನು ಎಲ್ಲಾ ಹೋಬಳಿ ಮಟ್ಟಗಳಲ್ಲಿ ಮಹಿಳಾ ವಾರ್ಡ್/ಗ್ರಾಮ ಸಭೆ ನಡೆಸುವ ಮುಂಚೆಯೇ ಆಯೋಜಿಸುವುದು(ಮಹಿಳಾ ವಾರ್ಡ್/ಗ್ರಾಮ ಸಭೆಗಳಲ್ಲಿ ಮಹಿಳೆಯರು ಸಾಂಪ್ರದಾಯಿಕ/ ಆಧುನಿಕ ಕೌಶಲ್ಯ ತರಬೇತಿ ಪಡೆಯಲು ಇಚ್ಛಿಸುವವರು ತಮ್ಮ ಬೇಡಿಕೆಗಳನ್ನು ಗ್ರಾಮ ಪಂಚಾಯಿತಿ ಡೆಸ್ಕ್ನಲ್ಲಿ ಸಲ್ಲಿಸಲು ಸಹಾಯವಾಗುವಂತೆ). ವಿಶೇಷವಾಗಿ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮಹಿಳಾ ಕೂಲಿ ಕಾರ್ಮಿಕರುಗಳಿಗೆ ಅದರಲ್ಲಿಯೂ 90 ದಿವಸ ಮೇಲ್ಪಟ್ಟುಪೂರೈಸಿದ (RDPR Websiteನಲ್ಲಿ ಅವಳವಡಿಸಿದ ಪಟ್ಟಿಯನ್ನು ಆಧರಿಸಿ ಪರಿಗಣಿಸುವುದು.) ಮಹಿಳಾ ಕೂಲಿ ಕಾರ್ಮಿಕರಿಗೆ ಆದ್ಯತೆ ನೀಡಿ ಇತರೆ ಮಹಿಳೆಯರಿಗೂ ಈ ಕಾರ್ಯಾಗಾರದ ಸದುಪಯೋಗ ಪಡೆಯುವಂತೆ ಕ್ರಮಕೈಗೊಳ್ಳುವುದು.

- **ಮಹಿಳಾ ಗ್ರಾಮ ಸಭೆಗಳ ದಿನಾಂಕಗಳನ್ನು ನಿಗಧಿಗೊಳಿಸಿ, ವೇಳಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸುವುದು ಹಾಗೂ ಸಂಬಂಧಿಸಿದ ಗ್ರಾಮ ಪಂಚಾಯಿತಿಗೆ ತಿಳಿಸುವುದು.**
- ತಮ್ಮ ತಾಲ್ಲೂಕಿನಲ್ಲಿನ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ 08 ಮಾರ್ಚ್ ರಿಂದ 30 ಜೂನ್ 2021 ವರೆಗೆ 16 ವಾರಗಳ ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದ ಮತ್ತು ಮಹಿಳಾ ಗ್ರಾಮ ಸಭೆಗಳು ನಡೆಯುವಂತೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಈ ಪ್ರಕ್ರಿಯೆಯ ಉಸ್ತುವಾರಿ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪ್ರತಿ ಗ್ರಾಮ ಪಂಚಾಯಿತಿಗೆ ನೋಡಲ್ ಅಧಿಕಾರಿಯನ್ನು ನಿಯೋಜಿಸುವುದು.
- ಮಹಿಳಾ ಗ್ರಾಮ ಸಭೆಗಳು ನಡೆಯುವ ದಿನ ವಿವಿಧ ಇಲಾಖೆಗಳ ಸ್ಥಳೀಯ ಅಧಿಕಾರಿಗಳು/ಹೋಬಳಿ/ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಜರಿರಲು ಮತ್ತು ಮಹಿಳೆಯರಿಂದ ಮೂಡಿಬಂದ ಬೇಡಿಕೆ/ಸಮಸ್ಯೆ/ಪ್ರಶ್ನೆಗಳ ಪರಿಹಾರಕ್ಕೆ ಕಾಲಾವಧಿಯನ್ನು ನಿಗಧಿಗೊಳಿಸಿ ಅನುಷ್ಠಾನಗೊಳಿಸುವ ಸಂಬಂಧ ತಮ್ಮ ಅಧೀನ ಇಲಾಖಾ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವುದು.
- **ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪನೆ:** ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ರಡಿಯಲ್ಲಿನ ಮಹಿಳಾ ಸ್ವಸಹಾಯ ಸಂಘಗಳಿಂದ ಪ್ರತೀ ತಾಲ್ಲೂಕಿನಲ್ಲಿ ಕನಿಷ್ಠ ಒಂದು ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಘಟಕವನ್ನು ಪ್ರಾರಂಭಿಸುವುದು.
- **ಶಿಶುಪಾಲನಾ ಕೇಂದ್ರ ಮತ್ತು ಮಹಿಳಾ ವಿಶ್ರಾಂತಿ ಗೃಹ:** ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಮಕ್ಕಳ ಶಿಶುಪಾಲನಾ ಕೇಂದ್ರ ಮತ್ತು ಮಹಿಳೆಯರ ವಿಶ್ರಾಂತಿ ಗೃಹವನ್ನು ವ್ಯವಸ್ಥೆಗೊಳಿಸಿ 24 ಏಪ್ರಿಲ್ 2021ರಂದು ಉದ್ಘಾಟಿಸುವುದು.
- **ವಸ್ತು ಪ್ರದರ್ಶನ:** ಮಹಿಳಾ ಸ್ವಸಹಾಯ ಸಂಘಗಳಿಂದ ತಯಾರಿಸಿದ/ಉತ್ಪಾದಿಸಿದ ಸಾಮಾಗ್ರಿಗಳ/ಪದಾರ್ಥಗಳ ವಸ್ತು ಪ್ರದರ್ಶನವನ್ನು ತಾಲ್ಲೂಕು ಪಂಚಾಯಿತಿಯಿಂದ ಆಯೋಜಿಸುವುದು.
- **ಜೀವ–ವೈವಿಧ್ಯ ಸಸ್ಯಕ್ಷೇತ್ರ ಸ್ಥಾಪನೆ:** ತಾಲ್ಲೂಕಿನ ಒಂದು ಗ್ರಾಮ ಪಂಚಾಯಿತಿಯಲ್ಲಿ ಸ್ಥಳವನ್ನು ಗುರುತಿಸಿ ವಿವಿಧ ಬಗೆಯ ಔಷಧಿ ಮತ್ತು ಇತರೆ ಸಸ್ಯಗಳನ್ನು ಬೆಳೆಸಲು ಸಾಮಾಜಿಕ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಜೀವ–ವೈವಿಧ್ಯ ಸಸ್ಯಕ್ಷೇತ್ರ ಸ್ಥಾಪನೆಯನ್ನು ಮೇ–22ರಂದು ಚಾಲನೆ ನೀಡುವುದು ಹಾಗೂ ಇದರ ಸಂಪೂರ್ಣ ನಿರ್ವಹಣೆಯನ್ನು ದಾಖಲಾದ ಪಂಚಾಯಿತಿಯ ಖಊಊಉ/ಉಕಐಈಗಳಿಗೆ ವಹಿಸುವುದು.

**ಜಿಲ್ಲಾ ಪಂಚಾಯಿತಿ:**

- ಜಿಲ್ಲಾ ಮಟ್ಟದಲ್ಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಮ್ಮ ಜಿಲ್ಲೆಯಲ್ಲಿ 08 ಮಾರ್ಚ್ ರಿಂದ 30 ಜೂನ್ 2021 ವರೆಗೆ 16 ವಾರಗಳ ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನದ ನೋಡಲ್ ಅಧಿಕಾರಿಯಾಗಿ ಜವಬ್ದಾರಿ ನಿರ್ವಹಿಸುವುದು.
- ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರದಲ್ಲಿ ಹಾಗೂ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳನ್ನು ಗುರುತಿಸಿ ಅವರಿಗೆ ತಾಲ್ಲೂಕು/ಗ್ರಾಮ ಪಂಚಾಯಿತಿಗಲ್ಲಿ ತೊಡಗಿಸಿಕೊಳ್ಳಲು ಹಾಗೂ ತಾಂತ್ರಿಕ ಬೆಂಬಲ ನೀಡಲು ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮವಹಿಸುವುದು. (ಸ್ವಯಂ ಸೇವಾ ಸಂಸ್ಥೆಗಳಿಗೆ ಈ ಅಭಿಯಾನದಡಿಯಲ್ಲಿ ಯಾವುದೇ ಆರ್ಥಿಕ ಸಹಾಯ/ಬೆಂಬಲ ನೀಡಲಾಗುವುದಿಲ್ಲ)
- ಅಭಿಯಾನದ ಅವಧಿಯಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಚಟುವಟಿಕೆ/ಕಾರ್ಯಕ್ರಮಗಳು, ಮಹಿಳಾ ಗ್ರಾಮ ಸಭೆ, ಯೋಜನೆ ತಯಾರಿ ಮತ್ತು ಅನುಷ್ಠಾನ ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿಗಳನ್ನಾಗಿಸಲು ಖಾತರಿ ಪಡಿಸಿಕೊಳ್ಳುವುದು.
- **ಶಿಶುಪಾಲನಾ ಕೇಂದ್ರ ಮತ್ತು ಮಹಿಳಾ ವಿಶ್ರಾಂತಿ ಗೃಹ:** ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಮಕ್ಕಳ ಶಿಶುಪಾಲನಾ ಕೇಂದ್ರ ಮತ್ತು ಮಹಿಳೆಯರ ವಿಶ್ರಾಂತಿ ಗೃಹವನ್ನು ವ್ಯವಸ್ಥೆಗೊಳಿಸಿ 24 ಏಪ್ರಿಲ್ 2021ರಂದು ಉದ್ಘಾಟಿಸುವುದು.
- **ವಸ್ತು ಪ್ರದರ್ಶನ:** ಮಹಿಳಾ ಸ್ವಸಹಾಯ ಸಂಘಗಳಿಂದ ತಯಾರಿಸಿದ/ಉತ್ಪಾದಿಸಿದ ಸಾಮಾಗ್ರಿಗಳ/ಪದಾರ್ಥಗಳ ವಸ್ತು ಪ್ರದರ್ಶನವನ್ನು ಜಿಲ್ಲಾ ಪಂಚಾಯಿತಿಯಿಂದ ಆಯೋಜಿಸುವುದು.

- **ಸಸಿ ನೆಡುವ ಕಾರ್ಯಕ್ರಮ:** ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದ 13 ವಾರಗಳ ಅವಧಿಯಲ್ಲಿ ಯಾವುದಾದರೂ ಒಂದು ದಿನ ಸಸಿ ನೆಡುವ ಕಾರ್ಯಕ್ರಮವನ್ನು ಆಯೋಜಿಸಿ ನುಗ್ಗೇಕಾಯಿ ಸೇವನೆಯಿಂದ ಆರೋಗ್ಯ ಅನುಕೂಲತೆಗಳು ಮತ್ತು ಪೌಷ್ಠಿಕಾಂಶದ ಮಹತ್ವದ ಕುರಿತು ಸಮುದಾಯದಲ್ಲಿ ಅರಿವು ಮೂಡಿಸುವುದು.

**NRLM ವತಿಯಿಂದ ತರಬೇತಿ ಕಾರ್ಯಕ್ರಮ:**

- ಜಿಲ್ಲೆಯ NRLMನ ಜಿಲ್ಲಾ ಯೋಜನಾ ವ್ಯವಸ್ಥಾಪಕರ ಸಹಯೋಗದಲ್ಲಿ ಜಿಲ್ಲೆಯಲ್ಲಿರುವ ಕೌಶಲ್ಯ ತರಬೇತಿ (DDUGKY) ಸಂಬಂಧಿಸಿದ ಯೋಜನಾ ಅನುಷ್ಠಾನದ ಸಂಸ್ಥೆಗಳ (PIA) ಮೂಲಕ ಆಯೋಜಿಸುವ ತರಬೇತಿಗಳು, ತರಬೇತಿಗೆ ನೋಂದಾಯಿಸಿಕೊಳ್ಳುವ ವಿಧಾನ, ತರಬೇತಿಯ ಅವಧಿ, ತರಬೇತಿಯ ಸ್ಥಳ, ತರಬೇತಿಯಿಂದ ಪ್ರಯೋಜನಗಳ ಕುರಿತು ವಿವರವಾದ ಮಾಹಿತಿಯನ್ನು youtube live ಮೂಲಕ ಎಲ್ಲಾ ಗ್ರಾಮ ಪಂಚಾಯಿತಿಯಲ್ಲಿ ಮಹಿಳೆಯರು ಭಾಗವಹಿಸಿ ವೀಕ್ಷಿಸಲು/ಕೇಳಲು ಅನುಕೂಲವಾಗುವಂತೆ ಏಕಕಾಲದಲ್ಲಿ ಮಾರ್ಚ್–8ರಂದು ಜಿಲ್ಲಾ ಪಂಚಾಯಿತಿಯಿಂದ ಸಂಘಟಿಸಿ ಆಯೋಜಿಸುವುದು. ಹಾಗೂ ಈ ತರಬೇತಿ ಕಾರ್ಯಕ್ರಮವನ್ನು ANSSIRD & PR youtube ಚಾನಲ್‌ನಲ್ಲಿ ಅಳವಡಿಸುವುದು.
- ಈ ವಿವಿಧ ತರಬೇತಿಗಳ ಮಾಹಿತಿಯನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಮಹಿಳೆಯರು ಸದುಪಯೋಗ ಪಡೆದುಕೊಳ್ಳಲು ಕ್ರಮಕೈಗೊಳ್ಳುವುದು.

ರಾಜ್ಯ ಮಟ್ಟದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳು: ಪಂಚಾಯತ್ ರಾಜ್ ಆಯುಕ್ತಾಲಯ ಬೆಂಗಳೂರು ವತಿಯಿಂದ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳ ಉಪ ನಿರ್ದೇಶಕರುಗಳು, ಆಯಾ ವಿಭಾಗಗಳಲ್ಲಿನ ಗ್ರಾಮ ಪಂಚಾಯಿತಿಗಳಲ್ಲಿ 08 ಮಾರ್ಚ್ ರಿಂದ 30 ಜೂನ್ 2021 ವರೆಗೆ 16 ವಾರಗಳ ಕಾಲ ನಡೆಸಲಾಗುವ "ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"ದ ಪೂರ್ವ ತಯಾರಿ, ಮೇಲ್ವಿಚಾರಣೆ, ಅನುಸರಣೆಗಾಗಿ ಹಾಗೂ ವಿವಿಧ ಭಾಗೀದಾರರ ಜೊತೆ ಸಮನ್ವಯತೆಯಿಂದ ಸಂಯೋಜಿಸಲು ಮತ್ತು ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿಗಳನ್ನಾಗಿಸಲು ಜವಾಬ್ದಾರಿ ನಿರ್ವಹಿಸುವುದು.

ಈ ಮೇಲೆ ವಿವರಿಸಿರುವಂತೆ, ರಾಜ್ಯ ಮಟ್ಟದಿಂದ– ಗ್ರಾಮ ಪಂಚಾಯಿತಿ ಮಟ್ಟದ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಸ್ಥಳೀಯ ಸಮುದಾಯ ಮತ್ತು ಅಧಿಕಾರೇತರರನ್ನು ತೊಡಗಿಸಿಕೊಂಡು ಕೋವಿಡ್–19 ಹರಡದಂತೆ ಸುರಕ್ಷಿತ ನಿಯಮಗಳನ್ನು ಅನುಸರಿಸಿ 08 ಮಾರ್ಚ್ ರಿಂದ 30 ಜೂನ್ 2021 ವರೆಗೆ 16 ವಾರಗಳ ಕಾಲ ನಡೆಸಲಾಗುವ "ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"ವನ್ನು ಪರಿಣಾಮಕಾರಿಯಾಗಿ ನಡೆಸಿ, ಗ್ರಾಮ ಪಂಚಾಯತಿಗಳಿಂದ ಸುಸ್ಥಿರ ಗುರಿಗಳ ಸಾಧನೆ ಮೂಲಕ ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿಗಳನ್ನಾಗಿಸಲು ಸೂಚಿಸಿದೆ.

"ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ" ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮತ್ತು ಸುಸ್ಥಿರ ಗುರಿಗಳ ಸಾಧನೆ ಮೂಲಕ ಮಹಿಳಾ ಸ್ನೇಹಿ ಪಂಚಾಯತಿಗಳನ್ನಾಗಿಸಲು ಸರ್ಕಾರದ ವಿವಿಧ ಇಲಾಖೆಗಳ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿಗಳು ಭಾಗವಹಿಸಲು ಮತ್ತು ಸಮನ್ವಯತೆಯಿಂದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಸಂಬಂದಿಸಿದಂತೆ ತಮ್ಮ ಇಲಾಖೆಯ ಅಧೀನ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ರಾಜ್ಯ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಕೋರಿದೆ.

ಸಹಿ/–
**(ಡಾ. ಎನ್ ನಾಗಾಂಬಿಕಾ ದೇವಿ)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ಹಿರಿಯ ನಾಗರೀಕರ ಮತ್ತು ವಿಕಲಚೇತನರ
ಸಬಲೀಕರಣ ಇಲಾಖೆ, ಬೆಂಗಳೂರು.

ಸಹಿ/–
**(ಉಮಾ ಮಹಾದೇವನ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ, ಬೆಂಗಳೂರು.

**ಕರ್ನಾಟಕ ಸರ್ಕಾರ**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

ಸಂಖ್ಯೆ: ಕಪಂರಾಅ–ಅಭಿವೃದ್ಧಿ/92/2021

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಕೆಂಪೇಗೌಡ ರಸ್ತೆ
ಬೆಂಗಳೂರು, ದಿನಾಂಕ: 10.02.2021

## ಸುತ್ತೋಲೆ

**ವಿಷಯ:– ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ**

**ಉಲ್ಲೇಖ:– 1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 479 ಗ್ರಾಪಂಅ 2019 ದಿನಾಂಕ: 11.06.2019**
**2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 479 ಗ್ರಾಪಂಅ 2019 ದಿನಾಂಕ: 04.11.2019**

****

ಸಂವಿಧಾನದ 73ನೇ ತಿದ್ದುಪಡಿಯ ಆಶೋತ್ತರಗಳಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲಾಗಿರುತ್ತದೆ. ಅದರಂತೆ ಬಡತನ ನಿರ್ಮೂಲನೆ, ಮಕ್ಕಳ ಮತ್ತು ಮಹಿಳೆಯರ ಆರೋಗ್ಯ, ಶೈಕ್ಷಣಿಕ ಕಾರ್ಯಕ್ರಮಗಳ ಅನುಷ್ಠಾನ, ಪಡಿತರ ಧಾನ್ಯಗಳ ಸಮರ್ಪಕ ವಿತರಣೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಾರ್ಯನಿರ್ವಹಣೆ, ಪಶುಪಾಲನಾ ಚಿಕಿತ್ಸಾ ಕೇಂದ್ರಗಳ ಕಾರ್ಯನಿರ್ವಹಣೆ, ಗ್ರಾಮ ಪಂಚಾಯಿತಿ ಹಂತದಲ್ಲಿನ ವಿವಿಧ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಮತ್ತು ತರಗತಿಗಳ ನಿರ್ವಹಣೆ, ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಕಾರ್ಯಚಟುವಟಿಕೆಗಳ ಅನುಷ್ಠಾನ ಹಾಗೂ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸುವ ಬಗ್ಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಮಿತಿಯ ಸಭೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿರುತ್ತದೆ. ಅದರಂತೆ ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಲಾಗಿದೆ.

1. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ(ಕೆ.ಡಿ.ಪಿ.)ಗಳ ಪ್ರಗತಿ ಪರಿಶೀಲನಾ ಸಮಿತಿಯ ಸಭೆಯನ್ನು ಏಪ್ರಿಲ್, ಜುಲೈ, ಅಕ್ಟೋಬರ್ ಮತ್ತು ಡಿಸೆಂಬರ್ ತಿಂಗಳ ಮೊದಲ ವಾರದಲ್ಲಿ ಕಡ್ಡಾಯವಾಗಿ ನಡೆಸುವುದು.
2. ಗ್ರಾಮ ಪಂಚಾಯಿತಿ ಮಟ್ಟದ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಮಿತಿಯ ಸಭೆಯ ನಡವಳಿಯನ್ನು ಸಭೆ ನಡೆದ ದಿನಾಂಕದಿಂದ 10 ದಿನಗಳೊಳಗಾಗಿ ಕಡ್ಡಾಯವಾಗಿ ಪಂಚತಂತ್ರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು.
3. ಗ್ರಾಮ ಪಂಚಾಯಿತಿ ಮಟ್ಟದ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಮಿತಿಯ ಸಭೆಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿ/ನೌಕರರು ಕಡ್ಡಾಯವಾಗಿ ಹಾಜರಾಗಲು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿರ್ದೇಶನ ನೀಡುವುದು.
4. ಗೈರುಹಾಜರಾಗುವ ಇಲಾಖೆಗಳ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮಕ್ಕೆ ಶಿಫಾರಸ್ಸು ಮಾಡಲು ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ಕೈಗೊಳ್ಳುವುದು.

5. ಗ್ರಾಮ ಪಂಚಾಯಿತಿ ಮಟ್ಟದ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಮಿತಿಯ ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸಲು ಕ್ರಮವಹಿಸುವುದು.

6. ಈಗ ಹೊಸದಾಗಿ ಗ್ರಾಮ ಪಂಚಾಯಿತಿ ಸದಸ್ಯರ ಆಯ್ಕೆಯಾಗಿದ್ದು, ಅಧ್ಯಕ್ಷ/ಉಪಾಧ್ಯಕ್ಷರ ಚುನಾವಣೆ ಮುಗಿಯುವ ಹಂತದಲ್ಲಿರುತ್ತದೆ. ಆದ್ದರಿಂದ ನೂತನವಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ ಸಮಿತಿ ರಚಿಸಲು ಮತ್ತು ಕಾರ್ಯನಿರ್ವಹಣೆ ಮಾಡಲು ತ್ವರಿತವಾಗಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಬಂಧಿಸಿದ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡುವುದು.

7. ನೂತನವಾಗಿ ಆಯ್ಕೆಯಾದ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಕೆ.ಡಿ.ಪಿ. ಸಮಿತಿ ಸಭೆಯ ಬಗ್ಗೆ ಈ ಪತ್ರ ತಲುಪಿದ 15 ದಿನಗಳೊಳಗಾಗಿ ಸೂಕ್ತ ತರಬೇತಿ ನೀಡುವುದು.

8. ಪ್ರತಿ ತಾಲ್ಲೂಕಿಗೆ ಒಬ್ಬರಂತೆ,

   i ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ(ಆಡಳಿತ/ಅಭಿವೃದ್ಧಿ)

   ii ಮುಖ್ಯ ಲೆಕ್ಕಾಧಿಕಾರಿ, ಮುಖ್ಯ ಯೋಜನಾಧಿಕಾರಿ

   iii ಯೋಜನಾ ನಿರ್ದೇಶಕರು

   iv ಸಹಾಯಕ ಕಾರ್ಯದರ್ಶಿ

   v ಸಹಾಯಕ ಯೋಜನಾಧಿಕಾರಿ

   v ಲೆಕ್ಕಾಧಿಕಾರಿ ಮತ್ತು ಅಗತ್ಯವಿದ್ದಲ್ಲಿ

   vi (ತಾಲ್ಲೂಕುಗಳು ಹೆಚ್ಚಿದ್ದಲ್ಲಿ) ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕೆ.ಡಿ.ಪಿ. ಸಮಿತಿ ಸಭೆಯ ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲು (ಈವರೆಗೆ ಆದೇಶ ಹೊರಡಿಸದಿದ್ದಲ್ಲಿ) ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ವಹಿಸುವುದು.

9. ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೋಬಳಿ/ಗ್ರಾಮ ಮಟ್ಟದ ಅಧಿಕಾರಿಗಳು ಗ್ರಾಮ ಪಂಚಾಯಿತಿ ಕೆ.ಡಿ.ಪಿ ಸಭೆಗೆ ಹಾಜರಾಗಲು ತೊಂದರೆಯಾಗದಿರುವಂತೆ ಗ್ರಾಮ ಪಂಚಾಯಿತಿ ಮಟ್ಟದ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ(ಕೆ.ಡಿ.ಪಿ.)ಗಳ ಪ್ರಗತಿ ಪರಿಶೀಲನಾ ಸಮಿತಿಯ ಸಭೆಯ ವೇಳಾಪಟ್ಟಿಯನ್ನು ತಯಾರಿಸಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.

10. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸದರಿ ದಿನಾಂಕಗಳೊಳಗೆ ಗ್ರಾಮ ಪಂಚಾಯಿತಿಗಳು ಕೆ.ಡಿ.ಪಿ ಸಭೆಗಳನ್ನು ಆಯೋಜಿಸಲು ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವುದು. ಈ ವಿಷಯವನ್ನು ತಾಲ್ಲೂಕು ಮಟ್ಟದ ನೋಡಲ್ ಅಧಿಕಾರಿಗಳ ಗಮನಕ್ಕೆ ತರುವುದು. ಈಗಾಗಲೇ ತಿಳಿಸಿದಂತೆ ಸಭೆಯ ನಡವಳಿಗಳನ್ನು ನಿಗದಿತ ಸಮಯದೊಳಗೆ ಪಂಚತಂತ್ರದಲ್ಲಿ ಅಪ್‌ಲೋಡ್ ಮಾಡುವುದು.

11. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಂಡ್ಯ ಜಿಲ್ಲಾ ಪಂಚಾಯಿತಿ ಮಾದರಿಯಲ್ಲಿ (276–281 ಪುಟಗಳ ಕೇಂದ್ರ/ರಾಜ್ಯ/ಜಿಲ್ಲಾ ವಲಯಗಳ ಮಾಹಿತಿಯನ್ನು ಈಗಾಗಲೇ ನೀಡಲಾಗಿದ್ದು, ಮತ್ತೊಮ್ಮೆ ಮಾಹಿತಿಗಾಗಿ ಹಾಗೂ ಕೆ.ಡಿ.ಪಿ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಮಂಡ್ಯ ಜಿಲ್ಲೆಯ ಮಾದರಿ ವೇಳಾಪಟ್ಟಿಯನ್ನೂ ಸಹ ಅಡಕವಿರಿಸಿದೆ) ಕೆ.ಡಿ.ಪಿ. ಸಮಿತಿ ಸಭೆಯ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯ ಏರ್ಪಡಿಸಿ ತಮ್ಮ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಇಲಾಖಾವಾರು ಮಾಹಿತಿ ಕ್ರೋಡೀಕರಿಸಲು ನಮೂನೆಗಳನ್ನು ನೀಡುವುದು.

12. ಇದಕ್ಕಾಗಿ ದಿನಾಂಕ: 11.06.2019ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ನಮೂನೆ–1ನ್ನು ನೀಡಲಾಗಿದೆ ಮತ್ತು

13. ಉಲ್ಲೇಖ(2)ರ ಪತ್ರದಲ್ಲಿ ದಿನಾಂಕ: 04.11.2019ರಂದು ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಂತೆ 33 ನಮೂನೆಗಳನ್ನು ನೀಡಲಾಗಿದೆ.

14. ಈಗಾಗಲೇ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ರವರು ಆಯಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳೊಂದಿಗೆ ಜಂಟಿಯಾಗಿ ಸುತ್ತೋಲೆಯನ್ನು ಹೊರಡಿಸಲಾಗಿದ್ದು, ಸದರಿ ಸುತ್ತೋಲೆಗಳಲ್ಲಿ ಗ್ರಾ.ಪಂ. ವ್ಯಾಪ್ತಿಗೆ ಸಂಬಂಧಪಟ್ಟಂತೆ ಆಯಾ ಇಲಾಖೆಗಳ ಆದ್ಯತಾ ಪಟ್ಟಿ ಮಾಡುವಾಗ ಯಾವ ಅಂಶಗಳನ್ನು ಕೇಂದ್ರೀಕರಿಸಿ ಕ್ರಮವಹಿಸಬೇಕೆಂದು ತಿಳಿಸಲಾಗಿದೆ.

15. ಆದ್ದರಿಂದ ಮೇಲಿನ 04 (ಕ್ರ.ಸಂ.10–14) ಅಂಶಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ನೋಡಲ್ ಅಧಿಕಾರಿಗಳ ಗಮನಕ್ಕೆ ತರುವುದು ಮತ್ತು ಗ್ರಾಮ ಪಂಚಾಯಿತಿ ಸ್ಥಾಯಿ ಸಮಿತಿವಾರು ಕ್ರೋಢೀಕರಿಸುವುದು ಹಾಗೂ ತಮ್ಮ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸುವುದು.

16. ಒಂದು ಕೆ.ಡಿ.ಪಿ ಸಭೆಯ ನಂತರ ಎಲ್ಲಾ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳ ಸಂವಾದ ಕಾರ್ಯಕ್ರಮವನ್ನು ಆಯೋಜಿಸಿ, ಸದರಿ ಸಂವಾದದಲ್ಲಿ ಅಧ್ಯಕ್ಷರುಗಳು ತಮ್ಮ ಅನುಭವ ಮತ್ತು ಅನಿಸಿಕೆಗಳನ್ನು ಹಂಚಿಕೊಳ್ಳಲು ಅವಕಾಶ ನೀಡುವುದು.

17. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ರವರು ಗ್ರಾ.ಪಂ. ಮಟ್ಟದ ಕೆ.ಡಿ.ಪಿ ಸಭೆಗಳಿಗೆ ಸಂಬಂಧಪಟ್ಟಂತೆ ಮೇಲಿಂದ ಮೇಲೆ ಸಭೆಗಳು ನಡೆದಿರುವ ಬಗ್ಗೆ ಮಾಹಿತಿ ಹಾಗೂ ಕೆ.ಡಿ.ಪಿ. ಸಭೆಗಳು ಆಯೋಜಿಸಿದ ನಂತರ ಆಗಿರುವ ಸಕಾರಾತ್ಮಕ ಬದಲಾವಣೆಗಳ ಬಗ್ಗೆ ಮಾಹಿತಿ ಕೋರುತ್ತಿರುವುದರಿಂದ ಸದರಿ ಸಕಾರಾತ್ಮಕ ಬದಲಾವಣೆಗಳ ಮತ್ತು ಯಶೋಗಾಥೆಗಳ ಪಟ್ಟಿ ಮಾಡುವುದು ಮತ್ತು ಕ್ರೋಢೀಕರಿಸಿ ಗ್ರಾ.ಪಂ./ತಾ.ಪಂ./ಜಿ.ಪಂ.ವಾರು ವರದಿಗಳನ್ನು ಸರ್ಕಾರಕ್ಕೆ ಮಾಹಿತಿಗಾಗಿ ಸಲ್ಲಿಸಲು ತಿಳಿಸಿದೆ.

**ಉದಾ:**

- ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಇಲಾಖೆಗಳ ಅಂಕಿ–ಅಂಶಗಳು, ಯೋಜನೆಗಳ ಪ್ರಯೋಜನಗಳ ವಿವರ ಜನರಿಗೆ ದೊರೆಯುತ್ತವೆ.
- ವಿವಿಧ ಇಲಾಖೆಗಳ ಸಮಸ್ಯೆಗಳಿಗೆ ಸ್ಥಳೀಯ ಮಟ್ಟದಲ್ಲಿ ಪರಿಹಾರ
- GPDP ಮತ್ತು ದಾರ್ಶನಿಕ ಯೋಜನೆಗಳ ಬಗ್ಗೆ ಚರ್ಚಿಸಲು ಅವಕಾಶ
- ಸಮಗ್ರ ಕೃಷಿ ಬಗ್ಗೆ ಅರಿವು ಮೂಡಿಸಲು ಅವಕಾಶ
- ಗ್ರಾ.ಪಂ. ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವಾಗ,
  - ಕಡಿಮೆ ದುಡ್ಡಿನಲ್ಲಿ ಮಾಡಬಹುದಾದ ಕೆಲಸಗಳು (ರೂ.25,000/–ಗಳೊಳಗೆ)
  - ದಾನಿಗಳಿಂದ ಮಾಡಬಹುದಾದ ಕೆಲಸಗಳು
  - ಸಂಘ–ಸಂಸ್ಥೆಗಳಿಂದ ಮಾಡಬಹುದಾದ ಕೆಲಸಗಳು
  - ವಿವಿಧ ಇಲಾಖೆಗಳ ಯೋಜನೆಗಳ ಒಗ್ಗೂಡಿಸುವಿಕೆಯಿಂದ ಮಾಡಬಹುದಾದ ಕೆಲಸಗಳು ಕೈಗೊಳ್ಳಬಹುದು ಎಂಬ ವಿವರಗಳು ದೊರೆಯುತ್ತವೆ.
- ಮಹಿಳಾ ಸಬಲೀಕರಣದ ಬಗ್ಗೆ ಅಗತ್ಯ ಕ್ರಮ ವಹಿಸಲು ಅವಕಾಶ
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕಾರ್ಯಗಳ ಪರಿಶೀಲನೆಗೆ ಅವಕಾಶ
- ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸುವ ಬಗ್ಗೆ ಅಗತ್ಯ ಕ್ರಮ ವಹಿಸಲು ಅವಕಾಶ

➢ ಗ್ರಂಥಾಲಯಗಳಿಗೆ ಉತ್ತಮ ಪುಸ್ತಕಗಳನ್ನು ಒದಗಿಸುವ ಬಗ್ಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ವಹಿಸಲು ಅವಕಾಶ

➢ ಹಿರಿಯ ನಾಗರಿಕರು ಮತ್ತು ವಿಕಲಚೇತನರ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆಗೆ ಅವಕಾಶ ಹಾಗೂ ಅಗತ್ಯ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಅವಕಾಶ

➢ ಪ್ರಕೃತಿ ವಿಕೋಪ ಮತ್ತು ವಿಪತ್ತು ನಿರ್ವಹಣೆಗಳ ಬಗ್ಗೆ ಅಗತ್ಯ ಮಾಹಿತಿಗಳನ್ನು ಕ್ರೋಡೀಕರಿಸಿಕೊಳ್ಳಲು ಅವಕಾಶ, ಇತ್ಯಾದಿ.

**ಪರಿಶೀಲನಾ ವೇಳೆಯಲ್ಲಿ ಕಂಡು ಬಂದ ಕೆಲವು ಯಶೋಗಾಥೆಗಳು,**

➢ ಜಿಲ್ಲೆಗಳಲ್ಲಿ ಕೆಲವು ಗ್ರಾ.ಪಂ. ಅಧ್ಯಕ್ಷರು ಸರ್ಕಾರಿ ಶಾಲೆಗಳ Smart ಶಾಲೆಗಾಗಿ ತಮ್ಮ ಗೌರವಧನದಿಂದ ಕಂಪ್ಯೂಟರ್ ಒದಗಿಸಿರುತ್ತಾರೆ.

➢ ಕೆಲವು ಗ್ರಾ.ಪಂ. ಸದಸ್ಯರು ತಮ್ಮ ಗೌರವ ಧನದಿಂದ ಸರ್ಕಾರಿ ಶಾಲೆಗಳಿಗೆ Laptop ಗಳನ್ನು ಒದಗಿಸಿರುತ್ತಾರೆ.

➢ ಸರ್ಕಾರಿ ಶಾಲೆಗಳಲ್ಲಿ ಜಾಗವಿರುವ ಕಡೆಗಳಲ್ಲಿ ಪೌಷ್ಟಿಕಾಂಶ ಗಿಡಗಳು ಮತ್ತು ಶಾಲಾ ವನಗಳ ನಿರ್ಮಾಣ ಮಾಡಲು ಅಗತ್ಯ ಕ್ರಮ ವಹಿಸಿರುತ್ತಾರೆ.

ಮೇಲೆ ತಿಳಿಸಿದ ಅಂಶಗಳಂತೆ ಉಲ್ಲೇಖದ ಸರ್ಕಾರದ ಆದೇಶಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (20 ಅಂಶ ಕಾರ್ಯಕ್ರಮವು ಸೇರಿದಂತೆ) ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ವರದಿ ಸಲ್ಲಿಸಲು ಮತ್ತೊಮ್ಮೆ ತಿಳಿಸಿದೆ.

ಸಹಿ/–
**(ಕೆ. ಯಾಲಕ್ಕಿ ಗೌಡ)**
ನಿರ್ದೇಶಕರು (ಅಭಿವೃದ್ಧಿ)
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.

# Statement of ownership particulars about "KARNATAKA VIKAS"

## FORM IV (See Rule 5)

| | | | |
|---|---|---|---|
| 1. | Place of Publication | : | **Karnataka Panchayat Raj Commissionerate, Zilla Panchayat Old Building, K.G.Road Bangalore 560009.** |
| 2. | Periodicity of Publication | : | **Monthly** |
| 3. | Printer's Name | : | **G. Gopalakrishna** |
| | Nationality | : | **Indian** |
| | Address | : | **LAVANYA MUDRANA**<br>No.19, 15th cross, B.S.K 1st Stage, Bangalore - 560050. |
| 4. | Publisher's Name | : | **P. Kumar** |
| | Nationality | : | **Indian** |
| | Address | : | **Publisher and Deputy Secretary (Admin),**<br>Karnataka Panchayat Raj Commissionerate, Zilla Panchayat Old Building, K.G.Road Bangalore 560009. |
| 5. | Editor's Name | : | **Gagan A.S** |
| | Nationality | : | **Indian** |
| | Address | : | **Chief Editor, Karnataka Vikas**<br>Karnataka Panchayat Raj Commissionerate, Zilla Panchayat Old Building, K.G.Road Bangalore 560009. |
| 6. | Names and addresses of individuals who own the newspaper and partners or shareholders holding more than one percent of the total capital | : | Not Applicable |

**I P.Kumar, hereby declare that the particulars given above are true to the best of my Knowledge and belief.**

Signature of the Publisher
**Sd/-**
**(P. Kumar)**

Bangalore
Date: 01.03.2021



**ಸಾತನೂರು ಗ್ರಾಮ ಪಂಚಾಯಿತಿ ಸ್ವಚ್ಛ ಶುಕ್ರವಾರ ಅಭಿಯಾನ**






**ಜೈವಿಕ ಇಂಧನ ಮಂಡಳಿ ಅಭಿವೃದ್ಧಿ ಕಾರ್ಯಕ್ರಮ**

# KARNATAKA VIKAS : MARCH 2021

A Monthly Magazine for Rural Development and Panchayath Raj Department, Government of Karnataka
Regd. KA/BGGPO/2531/2021-23, License of Post "without Prepayment" PMG/BG/WPP-32/2021-2023
Date of Publication : 8th of every month
RNI No: KAR KAN/28103/1974 Total No. Pages 52, Posted at Bengaluru PSO, Mysore Road, Bengaluru
on 19th or 23rd of every month.






Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Chief Editor
**GAGAN A.S**

Place & Publication
**KARNATAKA VIKAS**
Room No-6, Zilla Panchayath
old building, Kempegowda Road,
Gandhi Nagara,
Bangalore 560009.

Printed by
**LAVANYA MUDRANA**
No.19, 15th Cross, BSK 1 Stage
Bengaluru - 560050
Mob: 98450 63381

Price : ಬೆಲೆ : ₹ 10.00